ಕರ್ಮವೀರ

ಸಂಪುಟ ೨೦] [ಸಂಚಿಕೆ

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ
ಎಂ. ಎ

ಸಂಸ್ಥಾಪಕರು— ನಿರ್ದೇಶಕರು
ರಂ. ರಾ. ದಿವಾಕರ
ಘಟನಾ ಸಮಿತಿ ಸದಸ್ಯ



ಜನರಲ್ ಕರಿಯಪ್ಪನವರು

೪೭ ವಯಸ್ಸಿನ ಕನ್ನಡ ಕುವರ (ಕೊಡಗು) ಲೆಫ್ಟಿನೆಂಟ್ ಜನರಲ್ ಕೆ. ಎಂ. ಕರಿಯಪ್ಪನವರು ಹೊಸ ಹಿಂದೀ ಸೈನ್ಯದ ಮೊದಲನೆ ಹಿಂದೀ ಮುಖ್ಯ ಸೇನಾಪತಿಯಾಗಿ ನೇಮಿಸಲ್ಪಡುವವರಿದ್ದಾರೆ. ೩೦ ವರ್ಷಗಳಿಂದ ಹಿಂದೀ ಸೇನೆಯಲ್ಲಿ ದುಡಿದ ಇವರು ಇಂದೂರಿನ ಡಾಲಿ ಮಿಲಿಟರಿ ಕಾಲೇಜಿನಲ್ಲಿಯೂ ಕ್ವೆಟ್ಟಾದ ಸ್ಟಾಫ ಕಾಲೇಜಿನಲ್ಲಿಯೂ ಸಮರ ಕಲೆಯನ್ನು ಅಭ್ಯಸಿಸಿದರು.

ಮಂತ್ರಿ ಲಕ್ಷಣ

೧

ಲಾಭ ರಾಜ್ಯಕಿರೆ
ದೂರವಿದ್ದರೂ
ದುಡಿವನವನು ಆರಲು;
ಕೆಟ್ಟ ಹೆಸರ ಕೇ-
ಳಿವರೆ ತಿದ್ದಿಕೊಳ-
ಲೆಚ್ಚರಿಸುವನವನು.
ಶಿಷ್ಟ ಜನರ ಸಂ-
ತೋಷಗೊಳಿಸಲವ
ಬಿಡುವನೆಲ್ಲವನ್ನೂ;
ಲೋಕ ಚಿತ್ತವನು-
ಸರಿಸಿ ನಡೆವ ಸ-
ಚ್ಚಿಂತೆಯುವನ ಬಿಡನು !

೨

ಶಾಸ್ತ್ರವರಿತ, ಕಾ-
ವ್ಯ ಬಲ್ಲ, ವಾ-
ಗ್ಮಿ ವೃದ್ಧ ವೀರನಾದ,
ಕೋಪವಿರದ, ರಿಪು-
ಮಿತ್ರರೊಡನೆ ಸಮ
ಭಾವವಿಟ್ಟುಕೊಂಡ,
ಕಂಡಹೊರತು ಉ-
ತ್ತರವ ಕೊಡದ, ಸಿ-
ರಿ ವೀರ್ಯರನ್ನು ಪೊರೆವ,
ಪರರ ಶಿಕ್ಷಿಸುವ,
ಧರ್ಮಬುದ್ಧಿಯುವ
ಮಂತ್ರಿಪದದಿ ಮೆರೆವ !

(ಸಂಸ್ಕೃತದಿಂದ)

★

ಹುಬ್ಬಳ್ಳಿ
೧೪ - ೬ - ೧೯೪೮

★ ಮೋಟಾರ ಅನಾಹುತ (ಹರಟೆ)
— ನಾ. ಕಸ್ತೂರಿ (ಪುಟ ೨)

★ ವಯಸ್ಕ-ಶಿಕ್ಷಣವೆಂತಿರಬೇಕು — ಸೈಯುದ್ದೀನ (ಪುಟ ೫)

ಮೋಟಾರ್ ಅನಾಹುತ

[ನಾ. ಕಸ್ತೂರಿ, ಎಂ. ಎ., ಬಿ. ಎಲ್.]

ನೀವು ಬಲ್ಲಿರಿ, ನನ್ನ ಮಾವ ರಾಮಣ್ಣನವರನ್ನು; ಮಾವ ಅಂದರೆ ಹೆಣ್ಣು ಕೊಟ್ಟ ಮಹಾತ್ಮ ಅಲ್ಲ; ಸದ್ಯಕ್ಕೆ, ಅದೊಂದು ಗಂಡಾಂತರದಿಂದ ಗುರು ಹಿರಿಯರು ನನ್ನನ್ನು ಪಾರು ಮಾಡಿದರು. (ರಾಮಣ್ಣನವರ ಮಗಳಿಗೆ ಈಗ ಮಕ್ಕಳೆಷ್ಟು ಅಂತೀರಾ? ಎಣಿಕೆ ಹಾಕಲಿಕ್ಕೆ ಎರಡು ಕೈಬೆರಳು ಸಾಲದು!) ರಾಮಣ್ಣನವರು ಸಾಕ್ಷಾತ್ ನನ್ನ ತಾಯಿಯ ತಂದೆಯ ತಮ್ಮನ ಗೋತ್ರೋದ್ಧಾರಕ, ಬಾಯರು. ನಮ್ಮೂರಲ್ಲಿ ನಮ್ಮಂಥವರಿಗೆ ಕಣ್ಣು ಕೆಂಪಗಾಗುವಷ್ಟು ಶ್ರೀಮಂತರೂ ಹೌದು; ಅವರೂ ನಾವೂ ಅವರೂ ನಂಟತನದ ಗಂಟನ್ನು ಸಡಿಲ ಮಾಡದೆಯೇ ಮಾತುಕಥೆ ಹೋಗುಬರು ಊಟಆಟಗಳನ್ನು ನಡೆಯಿಸಿಕೊಂಡೇ ಬರುತ್ತಿದ್ದೆವು. 'ದ್ದೆವು' ಎಂದು ಏಕೆ ಹೇಳುತ್ತೇನೆ, ಅಂದರೆ ಮೂರು ತಿಂಗಳ ಹಿಂದೆ, ರಾಮಣ್ಣನವರು ಒಂದು ಹೊಸ ಹಿಲ್ಮನ್ ಕಾರನ್ನು ಕೊಂಡುಕೊಂಡರು. ಏಕೆ! ಅವರ ಪ್ರವಾಸ ಪ್ರಯಾಸ ತೀರಿಸುವುದಕ್ಕೆ ಅವರು ಒಂದು ಕಾರ್ ಕೊಂಡು ಅವರ ಗ್ಯಾರೇಜು ತುಂಬಿಸಿದರೆ, ನಿಮ್ಮ ಬಾಂಧವ್ಯ ಬಂದ್ ಆದದ್ದು ಏಕೆ, ಅಂತೀರೋ? ಹೇಳುತ್ತೇನೆ, ಕೇಳಿ.

ನೋಡಿ. ಆ ಮೋಟಾರು ಮನೆಗೆ ಬಂದಂದಿನಿಂದ ಮಹರಾಯ ಕೋರ್ಟಿಗೆ ಹಾದು ಹೋಗೋದು ನನ್ನ ಮನೆ ಮುಂದಿನ ದಾರಿಯಲ್ಲೇ! ಬೇರೆ ರಸ್ತೆ ಬಳಸು, ಕಾರಿನವರಿಗೆ ಅದ್ದೆ ರಸ್ತೆಯೇ ಅನುಕೂಲ ಈಗಿನ ಪೆಟ್ರೋಲ್ ಬರದಾಟದಲ್ಲಿ; ನನ್ನನ್ನು ಮೂದಲಿಸುವುದಕ್ಕಾಗಿ ಅವರು ಈ ಮೂಲೆ ಹುಡುಕುತ್ತಾ ಇಲ್ಲ—ಎಂದೆಲ್ಲ ನನಗೆ ಅವರ ಕಾರಕೂನ ಹೇಳಿದ. ಆದರೆ, ಅವನ ಮಾತು ಯಾವ ದಡ್ಡ ನಂಬುತ್ತಾನೆ? ಎಂಟು ಸಾವಿರ ಎಣಿಸಿ ಕಾರ್ ಕೊಂಡ ಕುಬೇರನಿಗೆ, ಎರಡು ಚಮಚೆ ಎಣ್ಣೆ ಹೊರೆಯೆ?

ಅಲ್ಲದೆ, ನಮ್ಮ ಮನೆ ಹೊಸಲನ್ನು ಸಮೀಪಿಸುವಾಗ ರಾಮಣ್ಣ ಭೂಂ ಭೂಂ ಎಂದು ಎರಡು ಬಾರಿ ಹುಂಗಿ ಒತ್ತದೆ ಅತ್ತ ಸಾಗುವುದೇ ಇಲ್ಲ! ಅದರ ಅರ್ಥವೇನು? ಅದರ ಉದ್ದೇಶವೇನು? ಲೋ, ಕುಚೇಲಾ, ಎಂದು ಸ್ಪಷ್ಟವಾಗಿ ನನ್ನನ್ನು ಸಂಬೋಧಿಸುವುದಕ್ಕಾಗಿ ತಾನೆ ಆ ಪ್ರಯತ್ನ? ಈ ಅಪಮಾನವನ್ನ ಹೇಗೆ ಸಹಿಸುವುದು, ಸ್ವಾಮಿ? ನನ್ನ ಪಕ್ಕದ ಮನೆ ಮಾಲೀಕ ನಾರಾಯಣ ಮಾಸ್ತರರ ಈ ಕಿವುಡು ಎಮ್ಮೆ ನಡು ರಸ್ತೆಯಲ್ಲಿ ಮಲಗಿರುತ್ತದೆ, ನಿಜ! ಆದರೆ, ಯಾವ ಮಿಲಿಟರಿ ಲಾರಿಗೂ ಕದಲದ ಆ ಕೆಟ್ಟ ಮಹಿಷಿ ಈ ಜಂಬದ ಕೋಳಿಯ ಕೂಗಿಗೆ ಏಳುತ್ತದೆಯೆ? ವಿಷಯ ರಾಮಣ್ಣನವರೂ ಬಲ್ಲರು. ದಿನವೂ ಅವರು ಅದನ್ನು ಪ್ರದಕ್ಷಿಣೆ ಮಾಡಲೇಬೇಕು. ಗೊತ್ತಿದ್ದರೂ ಮತ್ತೆ ಮತ್ತೆ ಈ ಒತ್ತಾಯವೇಕೆ! ನನಗೆ ತಿಳಿದ ಮಟ್ಟಿಗೆ ನಾನು ಹೇಳುತ್ತೇನೆ. ನನ್ನ ಹೊಟ್ಟೆಯಲ್ಲಿ ಕಿಚ್ಚೆಬ್ಬಿಸಿ, ನನ್ನ ಮಕ್ಕಳನ್ನು ಹೊರಕ್ಕೆಳೆದು, ಅವುಗಳ ಎಸೆಳೆದೆಯಲ್ಲಿ ಅತಿಯಾಸೆಯ ವಿಷ ಬೀಜ ಬಿತ್ತಿ, ನನ್ನ ಗೃಹಶಾಂತಿಗೆ ಭಂಗ ತರುವುದಕ್ಕಾಗಿಯೇ ರಾಮಣ್ಣನವರ ಒತ್ತು!

ಭೂಂ ಭೂಂ ಶಬ್ದಕ್ಕೆ ಹೊರಕ್ಕೆ ಹಾರಿದ ಮೋಹನ್, ಗಾಯತ್ರಿ, ಶೈಲಿ ಮೂವರೂ ಹಿಂದಕ್ಕೆ ಅಳುತ್ತ ಬರುತ್ತವೆ. "ರಾಮಣ್ ಮಾವ ಕಾರ್, ನೀನೂ ತಕೊಂಬಾ!" "ರಾಮಣ್ ಮಾವ ಕಾರ್, ನೀನೂ ತಕೊಂಬಾ!" ರಂಪವೋ ರಂಪ, ಮನೆತುಂಬ ನೂರು ಗಂಟೆ ಕಾಲ! ಅವು ಮೂರಕ್ಕೂ ಬಾಸುಂಡೆ ಬಡಿಸಿ ನನ್ನ ಮುಂದೆ ತಂದು ನಿಲ್ಲಿಸುತ್ತಾಳೆ, ಗಂಗು. "ನಿಮ್ಮ ಯೋಗ್ಯತೆ ನೆಗೆದು ಬಿತ್ತು. ಕತ್ತೆ ಹಾಗೆ ದುಡೀತೀರಿ ಕೈತುಂಬ ಕಾಸು ತರುವ ಚಳಕ ಇಲ್ಲ! ಸಂಬಳಕ್ಕೆ ಸರಿಸಮ ಸಾರಿಗೆ ತರುತ್ತಾರೆ. ಬುದ್ಧಿವಂತರು, ಪ್ರಜಾ ಸರಕಾರ ಬಂದ ಮೇಲೆ. ನೀವು ಮಾತ್ರ ಸಂಬಳದಲ್ಲೇ ಎಂಟು ಹತ್ತು ಜುಲ್ಮಾನೆ ತೆತ್ತು ಬರುತ್ತೀರಿ... ಸಂಜೆ ಇವು ಮೂರಕ್ಕೂ ಒಂದೊಂದು ಆಟದ ಮೋಟಾರು ತಂದು ಕೊಡಿ, ಪೇಟೆಯಿಂದ" ಎಂಬುದು ಅವಳ ಸಲಹೆ. ಹೀಗೆ ಮುಂದಿನ ಪೀಳಿಗೆ ಎದುರು ನನ್ನ ಮಾನ ಕಳೆಯುವಳು. ನನ್ನ ನೋರೆ ಕಾಸಗಲವಾಗುವುದು. ನನ್ನ ಮಗ ಮೋಹನ್ ಇದ್ದಾನಲ್ಲಾ, ಅವನ ಹುಟ್ಟಿಬಿಟ್ಟ ಮೆಡುಳು! ಅದಕ್ಕೇ ಅವನಿಗೆ ನಾವು ಬಾಪೂಜಿ ಹೆಸರನ್ನಿಟ್ಟಿರುವುದು. "ಆಟದ ಮೋಟಾರ ಬೇಡ ನನಗೆ. ರಾಮಣ್ ಮಾವ ಕಾರೇ ಬೇಕು" ಎನ್ನುತ್ತ ಅವನು ನನ್ನ ಮೇಜಿನ ಮೇಲಿಂದ ಗಡಿಯಾರವನ್ನೋ ಕನ್ನಡಕವನ್ನೋ ಮಸಿಕುಡಿಕೆಯನ್ನೋ ಹಿಡಿದು ಗೋಡೆ ಮೇಲಕ್ಕೆಎಸೆಯುತ್ತಾನೆ. ನಾನು ಮಾತನಾಡದೆ, ರಾಮಣ್ಣನವರನ್ನು ಶಪಿಸುವೆ.

ಮೋಟರಿನಲ್ಲಿ ಓಡಾಡುವವರಿಗೆ ಇದೊಂದು ಕೆಟ್ಟ ಚಾಳಿ ರಸ್ತೆ ಮೇಲೆ ಹೋಗುವವರನ್ನು ಗುರುತಿಸಿ ಅವರಿಗೆ ನಮಸ್ಕಾರ ಮಾಡುವುದು, ಅವರೆದುರು ಹಲ್ಲು ಕಿರಿಯುವುದು, ಇತ್ಯಾದಿ ಚೇಷ್ಟೆ ಬಹಳ! ಹೊರುವವರಿದ್ದರೆ, ಪಾಲ್ಕಿಯಲ್ಲಿ ಗುರುಗಳು ಆರಾಮವಾಗಿ ಕಾಲು ಚಾಚುತ್ತಾರೆ; ಕೈನೀಡಿ ಹೊಡೆಯಿಸಿಕೊಳ್ಳುವ ಹೈಕಳಿದ್ದರೆ, ಮೇಷ್ಟರಿಗೆ ಪರಮಾನಂದ! ಕಣ್ಣಿಗೆ ಮಣ್ಣು ಮೈಗೆ ಧೂಳು ಎರಚುವುದಕ್ಕೆ ರಸ್ತೆಯ ಮೇಲೆ ನನ್ನಂಥ ಅದೃಷ್ಟವಂತರಿದ್ದರೆ, ಕಾರೊಡೆಯರಿಗೆ ಖುಷಿ! ನಮ್ಮ ರಾಮಣ್ಣಾ ರಸ್ತೆಯಲ್ಲಿ ನಾನು ಎಲ್ಲಿ ಸಿಕ್ಕರೂ ಕಾರೊಳಗಿಂದಲೇ ಕಿರಿಯುತ್ತಾನೆ. 'ಏನಪ್ಪಾ' ಎನ್ನುತ್ತಾನೆ. ನೋಡಿ ಅವನ ದುರಹಂಕಾರಾನ! ಅದಕ್ಕೇ ನಾನು ಏಕವಚನಕ್ಕಿಳಿಸಿದ್ದು. ಇಂಥವರಿಗೆಲ್ಲ ಬಹುವಚನ ಹೇಳು ಎಂದು ನೇಮಿಸಿರುವ ಪಾಣಿನಿಯ ಕಾಲದಲ್ಲಿ, ಕಾರುಗಳಿರಲಿಲ್ಲ, ಎಂಬುದು ಗಮನಾರ್ಹ. ಕೊಟ್ಟು ಹುಟ್ಟಿದವರಿಗೊಂದು ದಾರಿ, ಕೊಂಡು ಹುಟ್ಟಿದವರಿಗೊಂದು ದಾರಿ, ಕಾಲುದಾರಿ, ಕಾರುದಾರಿ, ಎಂದು ಭಗವಂತ ವಿಂಗಡಿಸಿದ ಮೇಲೆ ತನ್ನ ಪಾಡಿಗೆ ತಾನು ತೆಪ್ಪಗೆ ಹೋಗಬಾರದೆ? ನನ್ನ ಹೊಟ್ಟೆ ಉರಿಸುವುದಕ್ಕೆ—ಏನಪಾ?—ಎಂದು ಏಕೆ ಅನಬೇಕು? ನೀರಿಗಿಂತ ಕಣ್ಣೀರು ಗಟ್ಟಿ, ಎಂಬ ಗಾದೆ ಸುಳ್ಳು, ನನ್ನ ಸೋದರ ಮಾವ, ನಾನು ನಡೆದು ಹೋಗುತ್ತಿರುವಾಗ ಬರೇ ಏನಪಿಸಿದರೆ ಸಾಕೆ? ನ್ಯಾಯವೆ? ಎಲ್ಲಿಗಪಾ, ಎಂದೂ ಹೇಳಿ, ಬಾ ಕೂರು ಎಂದು ಆಹ್ವಾನಿಸಿ, ನನ್ನನ್ನು ಕಚೇರಿ ತನಕ ಕರೆದೊಯ್ದರೆ, ಆಕಾಶ ಕೆಳಕ್ಕೆ ಕುಸಿಯುತ್ತಿತ್ತೆ? ಘೋಡಾ ಹೈ ಮೈದಾನ ಹೈ, ಎಂದು ಮುಸಲ್ಮಾನರು ಕೂಡ ಹೇಳುತ್ತಾರಲ್ಲಾ! .

ಈಚೆಗೆ 'ಏನಪಾ' ಎಂಬುದಕ್ಕೂ ಸೊನ್ನೆ! ಬಾಯೊಳಗಣ ಮುತ್ತಿನರಾಶಿ ತೆರೆದರೆ ಚೆಲ್ಲುತ್ತದೋ ಏನೊ? ದೇವರು ಎಷ್ಟು ದಿವಸ ರಾಮಣ್ಣನಿಗೆ ಈ ರೀತಿ ಒಲಿಯುತ್ತಾನೊ, ನೋಡೇ ಬಿಡೋಣ.

ಗಂಡಸು, ನನ್ನ ಪಾಡು, ಹೀಗಾದರೆ, ಮನೆಯೊಳಗೆ ಅವಳೂ ಕೂಡ ರಾಮಣ್ಣ ಮಾವನ ಕಾರು ಅಂದರೆ, ಉರಿದು ಬೀಳುತ್ತಾಳೆ; ಕಣ್ಣೀರು ಕೋಡಿ ಹರಿಸುತ್ತಾಳೆ. ನಾನು ಮನೆಯಲ್ಲಿಲ್ಲದ ಹೊತ್ತು, ಆ ಗಂಡನ ಹಾಳು ಕಾರಲ್ಲಿ ಆಗಾಗ ಸೀತಮ್ಮ ಮನೆಗೆ ಬರುವಳಂತೆ ಅವಳ ಮೂತಿ ತಿವಿಯುವದಕ್ಕೆ! ಬಡವನ ಮನೆಗೆ ಬಡಾಯಿ ಜನ ಬರಬಾರದು. ನಮ್ಮ ಮೋಹನ್ ಆ ಕಾರನ್ನು ಮುಟ್ಟಲಿಕ್ಕೆ ಹತ್ತಿರ ಹೋದಾಗ, ಆ ದಂಭದ ಡ್ರೈವರು ಬೆಟ್ಟಿನ ಮೇಲೆ ಪೆಟ್ಟುಕೊಟ್ಟನಂತೆ! ಕೂಸು ಮೂಸಿದರೆ ಕಾರು ಉರುಳುತ್ತದೆ? ಒಳಗೆ ಕೂತು, ಆಕೆ ನಮ್ಮ ಮನೆ ಎಲೆ ಅಡಿಕೆ ಜಗಿಯುತ್ತ, ಉದ್ದಕ್ಕೂ ಕಾರಿನ ಕಥೆಯನ್ನೇ, ಕಾಸಿದ ಸೀಸದಂತೆ, ಗಂಗು ಕಿವಿಗೆ ಸುರಿಯುತ್ತಾಳೆ, ನೋಡಿ! ವಾಯುವೇಗವಂತೆ, ಮನೋವೇಗವಂತೆ, ಟಯರಂತೆ ಗಿಯರಂತೆ, ಒದರಿದ್ದೂ ಒದರಿದ್ದೆ. ಅಷ್ಟು ಮಾತನಾಡಿದಳು, ಹೊರಕ್ಕೆ ಹೊರಡುವಾಗ, "ಬಾ ಗಂಗೂ! ಶುಕ್ರವಾರ ನನ್ನ ತಂಗಿಗೆ ಆರತಿ ಅಕ್ಷತೆ, ಸಂಜೆ ಬಂದು ಬಿಡು" ಎಂದು ಹೇಳಿದಳೇ ಹೊರತು, "ಕಾರು ಕಳುಹಿಸಿ ಕೊಡುತ್ತೇನೆ" ಎಂಬ ಮರ್ಯಾದೆಯ ಮಾತು ಹೊರಡಲಿಲ್ಲ. ಆಚಿಲದಿಂದ, ಜಂಬ ಆನ್ನೋದು ಜನ್ಮಕ್ಕಂಟಿದ್ದು, ಹಾಳು! ಸುಮಾರು ಎರಡು ತಾಸು ಕಾರನ್ನು ಮನೆಯಮುಂದೆ ನಿಲ್ಲಿಸಿಕೊಂಡಿದ್ದಳಲ್ಲಾ, ಡ್ರೈವರನಿಗೆ ಸಂಬಳ ದಂಡ, ಅಲ್ಲವೆ? ಆಗ, ಮೋಹನ್, ಗಾಯತ್ರಿ, ಶೈಲಿ ಮೂರನ್ನುವೆ ಒಂದುಬಾರಿ ಪೇಟೆಸ್ತ ಕೋಟೆಸುತ್ತಿದ್ದರೆ, ಮನೋವೇಗ, ವಾಯುವೇಗ ಎಂಬುದು ಏನು ಎಂದು ಅವಕ್ಕೂ ತಿಳಿದ ಹಾಗಾಗುವುದಿಲ್ಲವೆ? ಮುಖ್ಯ, ಮರ್ಯಾದೆ ಇಲ್ಲದ ಜನ!

ಮಾರ್ಚ ೧೮, ನನ್ನ ತವರ ಜೀವನದಲ್ಲಿ ಒಂದು ಸುವರ್ಣ ದಿನ ನನ್ನ ಬಾಳ ದಾರಿಯನ್ನು ವಾರವಾರವೂ ಬೆಳಗಿಸುವ ಪೂಜ್ಯ ಹೋರಾರತ್ನರೊಬ್ಬರು ಸೂಚನೆ ಇತ್ತಿದ್ದರು, ಹದಿನೆಂಟಕ್ಕೆ ಸುವರ್ಣ ದೃಷ್ಟಿಯಾಗುತ್ತದೆ ನನಗೆ, ಎಂದು. "ಸ್ವಭಾವ ಪಾಪಿಗಳಾದ ಕುಜಶನಿಗಳು ಲಾಭ ಕರ್ಮಗಳಲ್ಲೂ ವೀರ್ಯ ಪರಾಕ್ರಮ ಸ್ಥಾನದಲ್ಲಿ ಗುರುವೂ ಪ್ರಯತ್ನ ಸ್ಥಾನದಲ್ಲಿ ರಾಹುವೂ ಸಂಚರಿಸುತ್ತಿರುವದರಿಂದ, ನಿಮ್ಮ ಅದೃಷ್ಟವನ್ನು ನಗಾರಿ ಮೂಲಕ ಸಾರಿದರೂ ಎಣೆಯಿಲ್ಲದಷ್ಟು ಸಂಪಾದನೆಯಾಗುತ್ತದೆ" ಎಂದಿದ್ದರು, ಅವರು, ಒಂದ ಪತ್ರಿಕೆಯಲ್ಲಿ! ಅವರು ನನಗೆ ಮೀಸಲಾಗಿರಿಸಿದ್ದ ಅದೃಷ್ಟ ನನ್ನನ್ನು ಹೇಗೆ ಹೊಡೆಯುತ್ತದೆ, ಎಂದು ನಾನು ಎಣಿಕೆ ಹಾಕುತ್ತಿದ್ದೆ. ಜಯಂತಿಯಲ್ಲಿ ಕಡೆಗೂ ನನ್ನ ಕತೆ ಪ್ರಕಟವಾಗಬಹುದೆ? ಚಕ್ರಬಂಧದ ಮೂಲಕ ದೆಸೆ ಖುಲಾಯಿಸುತ್ತದೆಯೆ? ನನ್ನನ್ನ ಪೀಡಿಸುತಿದ್ದ ನನ್ನ ಆಫೀಸ್ ಸುಪರಿಂಡೆಂಟೆಂಟರಿಗೆ ಪರಸ್ಥಳಕ್ಕೆ ವರ್ಗವಾಗುತ್ತಯೆ? ಆದರೆ ನಡೆದದ್ದೇನು, ಬಲ್ಲಿರಾ? ಆ ದಿನ ನಾನು ಆಫೀಸಿನಿಂದ ಹಿಂತಿರುಗುತ್ತಿದ್ದೆ. ಮಾರ್ಗ ಮಧ್ಯೆ ಮಾರ್ಕೆಟ್ ಬಳಿ ರಾಮಣ್ಣ ಕಾರು! ಎಂಜಿನ್ ಕೆಟ್ಟು ಹೋಗಿದೆ. ಡ್ರೈವರ್ ಕೈಯಲ್ಲಿ ಚಕ್ರ ಕೊಟ್ಟು ಅವನನ್ನು ಒಳಗೆ ಕೂರಿಸಿ, ರಾಮಣ್ಣ ಮಾವ ಕೆಳಗಿಳಿದು ಅದರ ಹಿಂಬದಿಗೆ ನಿಂತು ಬೆವರು ಸುರಿಸುತ್ತ ನೂಕುತ್ತಿದಾನೆ. ಅವನ ಹತ್ತಿರ ಹೋಗಿ ನಾನು "ಮಾವಾ! ಒಂದು 'ಜಟಕಾ ತರಲೆ?'" ಎಂದು ಧೈರ್ಯವಾಗಿ ಕೇಳಿದೆ. ಮನೆಯಲ್ಲಿ ಇವಳಿಗೆ ಸುದ್ದಿ ಮುಟ್ಟಿಸುವ ಆತುರದಿಂದ, ಓಡೋಡಿ ಬಂದೆ. ರಾತ್ರೆ ಪಾಯಸ ಮಾಡಿಸಿ ಮಕ್ಕಳಿಗೂ ಬಡಿಸಿ ನಾವೂ ಕಂಠಪೂರ್ತಿ ಕಡಿದೆವು. ಲೆನಿನ್ ಎಂಬ ಒಬ್ಬ ಮಹಾನುಭಾವ ಬರೆದಿರುವ ಒಂದು ಉದ್ಗ್ರಂಥವನ್ನೋದುತ್ತ ನಾನು ನಿದ್ದೆ ಹೋದೆ.

ಮೊನ್ನೆ ಇವಳು ನನ್ನ ಕಿವಿಯಲ್ಲಿ ಒಂದು ಮಾತು ಹಾಕಿದಳು. ನನ್ನ ಮೈಜುಂ ಎಂದಿತು "ಯಾರಿಗೂ ಹೇಳಬೇಡ, ಬಲು ಗುಟ್ಟಾದ ವಿಷಯ! ನಿನ್ನೊಂದಿಗೆ ಹೇಳಿದ್ದೇ ತಪ್ಪು! ಊರವರ ಬಾಯಿ ಕಟ್ಟುವದಕ್ಕಾದಾಗುವದಿಲ್ಲ, ಆದ್ದರಿಂದ, ನಮ್ಮ ಬಾಯನ್ನಾದರೂ ಬಿಗಿ ಹಿಡಿಯೋಣ" ಎಂದು ಅವಳಿಗೆ ಹೇಳಿದೆ. ಹೆಚ್ಚಿನದೇನೂ ಇಲ್ಲ, ಅವಳಂದಳು, "ರಾಮಣ್ಣ ಮಾವನ ಡ್ರೈವರ ದುಂಡಗೆ ಕೆಂಚಗೆ ಚಿಕ್ಕವನಾಗಿದಾನೆ, ಈಗಿನ ಕಾಲಕ್ಕೆ ಬೆಳ್ಳಗಿರುವವರೆಲ್ಲ ಪರಂಗಿಯವರ ಹಾಗೇನೆ! ರಾಮಣ್ಣ ಮಾವನಿಗೇನೂ ತಿಳಿಯದು, ಡ್ರೈವರು, ಡ್ರೈವರು, ಎಂದು ನೆಪ ಹೇಳುತ್ತ, ಅವನನ್ನೂ ಕೂರಿಸಿಕೊಂಡು ಹೆಣ್ಣು ಹೆಂಗಸು ಸೀತಮ್ಮ ಅಲ್ಲಿ ಇಲ್ಲಿ ತಿರುಗುವದು ಚೆನ್ನಿಲ್ಲ. ಒಬ್ಬಳೇ ಹೋದರೆ ಏನು ಕೇಡು ಅವಳಿಗೆ? ನಮ್ಮ ಮನೆತನಕ್ಕೇ ನಾಳೆ ಮಸಿ ಬಳಿದು ಬಿಡುತ್ತಾನೆ, ಪಾಪಿ ಡ್ರೈವರ" ಎಂದಳು.

"ಇದೇನೇ ಇದು ನಿನ್ನ ದುರ್ಬುದ್ಧಿ? ಇಷ್ಟು ಬೆಳೆದುಬಿಟ್ಟಿತೆ ನಮ್ಮ ಹೊಟ್ಟೆಕಿಚ್ಚು? ಛೆ! ಕಿಲುಬು ಎಂಬೋದು ಬಲು ಕೆಟ್ಟದ್ದು, ಕಣೆ!" ಎಂದು ನಾನು ಅವಳನ್ನು ಎಚ್ಚರಿಸಿದೆ. ರಾಮಣ್ಣನವರು ಮೋಟಾರ ಕೊಂಡುಕೊಂಡರೆ, ನಮ್ಮ ನಡತೆಗೆ ಅನಾಹುತವಾಯಿತಲ್ಲಾ, ಎಂದು ಮರುಗಿದೆ. ಬಡತನ ತೀರ ಕೆಟ್ಟದ್ದು, ಎಂದು ಅರಿತೆ.

ಆದರೆ, ಅವಳು ಒಪ್ಪಲಿಲ್ಲ! "ನೋಡುತ್ತಿರಿ, ಇಂದಲ್ಲ, ನಾಳೆ, ಸೀತಾಪಹರಣ ನಡದೇ ನಡೆಯುತ್ತೆ" ಎಂದು ವಾದಿಸುತ್ತಲೇ ಇದ್ದಾಳೆ. ಮನುಷ್ಯನ ಸ್ವಭಾವ ನಿಜವಾಗಿಯೂ ತಳದಲ್ಲಿ ತರಗಬರಗ!

ವಾರದ ಭವಿಷ್ಯ

ಜ್ಯೋತಿಷಿ— ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಆಫೀಸ ಖಡೇಬಝಾರ, ಬೆಳಗಾವಿ.

ಜೂನ ೧೪ ರಿಂದ ೨೦ ರ ವರೆಗೆ

ಮೇಷ

ಎಲ್ಲರ ಪ್ರಕೃತಿ ಅನುಕೂಲ ಆದರೆ ನಿಮ್ಮ ನಿಮ್ಮಲ್ಲಿ ಸ್ವಲ್ಪ ಕಲಹ ಸುರುವಾಗುವದರಿಂದ ಮನಸ್ಸಿಗೆ ಬಹಳ ವಿರಸ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ ಆದರೆ ವೆಚ್ಚ ಅತಿಶಯವಾಗಿ ಆದರಲ್ಲಿಯ ಹೇತುವಿನ ಸಾಧ್ಯತೆ ದೂರಾಗುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಅನುಕೂಲತೆ. ಆದರೆ ನಿಮ್ಮವನೇ ಆದ ವಕೀಲನು ಇಲ್ಲವೆ ಸಾಕ್ಷೀದಾರನು ಕೆಲ ದುಷ್ಟ ಹೇತುವಿನಿಂದ ಕಾಲು ಹಿಂದಕ್ಕೆಳೆಯುವ ಪ್ರಯತ್ನ. ಮಕ್ಕಳಲ್ಲಿ ವಿಶೇಷ ಸುದೈವದ ಕೆಲವೊಂದು ಸಂಗತಿ ಸಂಭವಿಸುವ ಯೋಗ. ಆದರೆ ಆ ಬಗ್ಗೆ ಮಿತ್ರರಲ್ಲಿ ಒಬ್ಬರಿಗೆ ಬಹಳ ವಿಷಾದ. ಪ್ರವಾಸ ಪುಣ್ಯ ಕೃತ್ಯಗಳು. ಭೆಟ್ಟಿ ಮತ್ತು ಪತ್ರವ್ಯವಹಾರ ಮನಸ್ಸಿನಂತೆ ಭರಣಿಗೆ ತೊಂದರೆ ಕಡಮೆ ತಾ. ೧೪, ೧೭, ೧೮ ಅನುಕೂಲ.

ವೃಷಭ

ಪ್ರಕೃತಿ ಉತ್ತಮ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಮನಸ್ಸಿನಂತೆ ಹೆಂಡತಿಯ ತವರು ಮನೆಯಲ್ಲಿ ಬಹಳ ಉನ್ನತಿಯಾಗುವ ಸಂಭವ. ನಿಮ್ಮ ಸ್ಥಾವರ ಮತ್ತು ಜಂಗಮ ಸಂಗ್ರಹದಲ್ಲಿ ಬಹಳ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಕಷ್ಟದಿಂದಲೆ ಆದರೆ ಕೊನೆಯಲ್ಲಿ ಅಂದಾಜಿನಷ್ಟು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು ಆದರೆ ವಿರೋಧಿಗಳು ನಿಮ್ಮ ಪಕ್ಷದ ಜನರನ್ನು ಒಡೆದುಕೊಳ್ಳುವದಕ್ಕಾಗಿ ಗುಪ್ತ ರೀತಿಯಿಂದ ಪ್ರಯತ್ನಿಸುವರು. ಮಿತ್ರಪಕ್ಷದಲ್ಲಿ ವಿರೋಧ. ಕೆಲವೊಂದು ಕಠಿನ ಸಮಾರಂಭಗಳನ್ನು ಅಲ್ಪ ಕಾಲದಲ್ಲಿಯೆ ಮಾಡುವ ಪ್ರಸಂಗ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ರೋಹಿಣಿಗೆ ತೊಂದರೆ ಕಡಮೆ. ತಾ. ೧೫, ೧೬, ೧೯ ಅನುಕೂಲ.

ಮಿಥುನ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ ಆದರೆ ಮಕ್ಕಳಿಗೆ ಕ್ಲೇಶ ಮತ್ತು ಮನೆಯಲ್ಲಿಯ ಬಹುತರ ಜನರ ವರ್ತನದಲ್ಲಿ ಬೇಶಿಸ್ತು. ಅವರಲ್ಲಿಯೂ ಅಳಿಯ ಇಲ್ಲವೆ ವರಿಷ್ಠರೆನ್ನಿಸಿಕೊಳ್ಳುವ ಅತಿಥಿಗಳ 'ಅದರಾತಿಥ್ಯ ಮಾಡುವ ಪ್ರಸಂಗ. ಉದ್ಯೋಗದಲ್ಲಿ ಪ್ರಗತಿ ಸಾಧಾರಣವೆ ಆದರೆ ಪ್ರತಿಷ್ಠೆ ಉತ್ತಮ ಮತ್ತು ಲಾಭ ತುಂಬ. ಆದರೆ ಯೋಜಿತ ಕೆಲಸದ ಬದಲು ಬೇರೆ ಕೆಲಸಕ್ಕಾಗಿಯೆ ವೆಚ್ಚ. ಸ್ಥಾವರದಲ್ಲಿ ಸ್ವಲ್ಪ ಹೆಚ್ಚಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ ಪ್ರವಾಸದಲ್ಲಿ ಅಡಚಣಿ ಇಲ್ಲವೆ ಆಯತ್ತ ಹೊತ್ತಿಗೆ ಅದು ತಹಕೂಬು. ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ. ಆರಿದ್ರಕ್ಕೆ ತೊಂದರೆ ಕಡಮೆ. ತಾ ೧೪, ೧೭, ೧೮ ಉತ್ತಮ.

ಕರ್ಕ

ಪ್ರಕೃತಿ ಅನುಕೂಲ ಆದರೆ ಸ್ತ್ರೀ ದೂರತ್ವ-ಇಲ್ಲವೆ ರತಿ ಸುಖದಲ್ಲಿ ವಿರಸ. ಮಕ್ಕಳ ಸುಖ ಉತ್ತಮ. ಆದರೆ ಆಪ್ತರು ಮತ್ತು ನೆರೆಯವರು ಜವರ ಮೇಲೆ ಕೆಲವೊಂದು ಸುಳ್ಳು ಸುಳ್ಳೇ ಅಪವಾದ ಹೊರಿಸುವ ಸಂಭವ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಬಹಳ ಕಡಮೆ. ಆದರೆ ಪ್ರತಿಷ್ಠೆ ಅನುಕೂಲ-ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅಪಯಶಸ್ಸಿನ ಸಂಭವ ನಿದಾನ ಅಲ್ಪಸ್ವಲ್ಪ ಹಿಂದಕ್ಕೆ ಸರಿಯಬೇಕಾಗುವದು. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಪುಷ್ಯಕ್ಕೆ ತೊಂದರೆ ಕಡಮೆ. ತಾ ೧೪, ೧೫, ೨೦ ಅನುಕೂಲ.

ಸಿಂಹ

ಹೆಂಡತಿಯ ಪ್ರಕೃತಿ ಕೆಡುವದು ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಪ್ರಿಯ ಮತ್ತು ಪೂಜ್ಯ ಜನರ ಸಹ

—೧೭ನೆಯ ಪುಟಕ್ಕೆ

ದೇಶಾಂತರಗಳಿಂದ

ಜೆಕೋಸ್ಲೋವೇಕಿಯದಲ್ಲಿ ಕೆಂಪು ಪಕ್ಷದ ಗೆಲವು

ಜೆಕೋಸ್ಲೋವೇಕಿಯದಲ್ಲಿ ಪ್ರಥಮ ಬಾರಿ ಚುನಾವಣೆ ನಡೆಯಿತು. ಅಲ್ಲಿಯ ರಾಷ್ಟ್ರೀಯ ರಂಗದಲ್ಲಿ ಪ್ರಮುಖವಾದ ಕೆಂಪು ಪಕ್ಷಕ್ಕೆ (ಕಮ್ಯೂನಿಸ್ಟರಿಗೆ) ನೂರಕ್ಕೆ ೮೦ ರಷ್ಟು ಮತಗಳು ಸಿಕ್ಕಿದವು.

ಒಟ್ಟು ೭೨,೦೪,೨೫೬ ಮತಗಳಲ್ಲಿ ಕೆಂಪಿಗರಿಗೆ ೬೪,೩೧,೯೬೩ ಮತಗಳು ದೊರೆತವು; ಅಂದರೆ ನೂರಕ್ಕೆ ೮೯.೨೮ ರಷ್ಟು.

● ಸರಕಾರೀ ಹುರಿಯಾಳುಗಳ ವಿರುದ್ಧ ಮತಪ್ರದರ್ಶನ ಮಾಡಲು ಖಾಲಿ ಮತಪತ್ರ ಹಾಕತಕ್ಕದ್ದೆಂದಿತ್ತು. ಅವುಗಳ ಸಂಖ್ಯೆ ೭,೭೨,೪೯೩. ಖಾಲಿ, ತಪ್ಪು ಮತ್ತು ಬಳಸದ ಮತಪತ್ರಗಳ ಒಟ್ಟು ಸಂಖ್ಯೆ ೧೫,೭೩,೯೩೪.

ಸರಕಾರವು ಹಾಕದ ಮತಗಳನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಅವು ವಿರೋಧ ಪ್ರದರ್ಶಿಸತಕ್ಕವು. ಹಾಗೆ ಹಾಕದಿದ್ದವರು ಕಾಯಿದೆಯಂತೆ ಅಲ್ಲಿ ಶಿಕ್ಷಾರ್ಹರೆನಿಸುತ್ತಾರೆ.



ಜೆಕೊಸ್ಲೋವೇಕಿಯದ ಹೊಸ ಅಧ್ಯಕ್ಷರಾದ ಗಟ್ವಾಲ್ಡರು.

ಮತದ ದಫ್ತರಗಳನ್ನು ಪರಿಶೀಲಿಸಿ ರಾಷ್ಟ್ರಸಭೆಯಿಂದ ೩೦೦ ರಲ್ಲಿ ೨೬೦ ಸದಸ್ಯರನ್ನು ಮೊದಲು ಆರಿಸಲಾಗುತ್ತದೆ, ಉಳಿದ ೪೦ ಸ್ಥಳಗಳಿಗೆ ಪ್ರಮಾಣದಂತೆ ೨ ನೆಯ ಪರಿಶೀಲನೆಯಲ್ಲಿ ಸದಸ್ಯರನ್ನು ಆರಿಸಲಾಗುವದು.

● ರಶಿಯದ "ಪ್ರವ್ದ" ಪತ್ರಿಕೆಯು ಈ ಚುನಾವಣೆಯ ಫಲಿತಾಂಶವು ಜೆಕೋಸ್ಲೋವೇಕಿಯದ ಪ್ರಜಾಸತ್ತಾತ್ಮಕ ಶಕ್ತಿಗಳ ಪ್ರಾಬಲ್ಯಕ್ಕೆ ನಿಃಸಂದಿಗ್ಧ ಪ್ರಮಾಣ ಎಂದು ಸಾರಿದೆ.

ಜೆಕೋಸ್ಲೋವೇಕಿಯದ ಅಧ್ಯಕ್ಷರಾದ ಡಾ. ಬೆನೆಸರು ಹೊಸ ಘಟನೆಯ ಸ್ವೀಕಾರಕ್ಕೆ ನಿರ್ದಿಷ್ಟಪಡಿಸಿದ ದಿವಸಕ್ಕೆ ೨೪ ತಾಸು ಮುಂಚಿತವಾಗಿ ಸಲ್ಲಿಸಿದ ತಮ್ಮ ರಾಜೀನಾಮೆಯಲ್ಲಿ ತಮ್ಮ ಅನಾರೋಗ್ಯದ ಮೂಲಕ ಮತ್ತು ರಾಜಕೀಯ ಸ್ಥಿತ್ಯಂತರದ ಮೂಲಕ ತಾವು ರಾಜೀನಾಮೆ ಇತ್ತಿರುವದಾಗಿ ತಿಳಿಸಿದ್ದಾರೆ.

ಅಧ್ಯಕ್ಷರ ರಾಜೀನಾಮೆಯನ್ನು ಸ್ವೀಕರಿಸುತ್ತ ಮುಖ್ಯಮಂತ್ರಿ ಕ್ಲೆಮೆಂಟ ಗೊಟ್ವಾಲ್ಡರು ಮಂತ್ರಿಮಂಡಲದಸಭೆಯಲ್ಲಿಅಧ್ಯಕ್ಷರುರಾಜೀನಾಮೆ ಕೊಡಕೂಡದೆಂದು ಮನವೊಲಿಸಲು ಪ್ರಯತ್ನಿಸಿದೆವೆಂದೂ ಆದರೆ ಕೊನೆಗೂ ನಿಷ್ಫಲವಾಯಿತೆಂದೂ ಹೇಳಿದರು.

ಎಂ. ಗೊಟ್ವಾಲ್ಡರು ಅಧ್ಯಕ್ಷರಾಗಿಯೂ ಸದ್ಯದ ಉಪ ಮುಖ್ಯಮಂತ್ರಿಗಳೂ ಕೂಲಿಕಾರ ಮುಖಂಡರೂ ಆದ ಎಂ. ಎಂಟೋನಿ ಝುಪೋನಿಟೋಶಿಯವರು ಮುಖ್ಯ ಮಂತ್ರಿಗಳಾಗಿಯೂ ಆರಿಸಲ್ಪಡಬಹುದೆಂದು ರಾಜಕೀಯ ವರ್ಗಗಳ ತರ್ಕ.

ಇಂಡೋ-ಚೀನದ "ಸ್ವರಾಜ್ಯ"

ಫ್ರೆಂಚರು ವಿಭಜಿಸಿ ಆಳುವ ನೀತಿಯನ್ನು ಜಯಪ್ರದವಾಗಿ ವೀಯಟನಾಮಿಗಳಲ್ಲಿ ಪ್ರಯೋಗಿಸಿದ್ದಾರೆ. ಅದರ ಫಲವಾಗಿ ಪ್ರಜಾರಾಜ್ಯವೊಡೆದುಹೋಗಿ ಡಾ. ಹೋ ಚಿಮಿನ್ನರು ಶತ್ರುಗಳಾಗಿಯೂ ಜನರಲ್ ಗುಯೆನ್ ವಾರ್ ಕ್ಷುವನ್ನರು ಮಿತ್ರರಾಗಿಯೂ ಸ್ವೀಕೃತರಾದರು. ಫ್ರೆಂಚ ಒಕ್ಕೂಟದಲ್ಲಿ ಉಳಿದು ಇಂಡೋ-ಚೀನವು ಸ್ವರಾಜ್ಯವನ್ನು ಅನುಭವಿಸಲೆಂದು ಫ್ರೆಂಚರಿತ್ತ ವರವನ್ನು ಮಾನ್ಯಮಾಡಿದ ಜನರಲ್ ಕ್ಷುವನ್ನರೀಗ ಹೊಸ ವೀಯಟನಾಮ ಸರಕಾರದ ಮುಖ್ಯ ಮಂತ್ರಿಗಳಾಗಿದ್ದಾರೆ. ಹಿಂದಿನ ಚಕ್ರವರ್ತಿಯಾದ ಬಾವದಾಯಿ ಮತ್ತು ಜನರಲ್ ಕ್ಷುವನ್ನರು ಮೇಲೆ ಹೇಳಿದಂತೆ ಫ್ರೆಂಚರೊಡನೆ ಮಾಡಿಕೊಂಡ ಒಪ್ಪಂದಕ್ಕೆ ಸಹಿಹಾಕಿದ್ದಾರೆ.

ಇಂಡೋ ಚೀನದ ಹೊಸ ಮಂತ್ರಿಮಂಡಲದಲ್ಲಿ ಸೇರಲು ಯೋಗ್ಯವ್ಯಕ್ತಿಗಳ ಅಭಾವದಿಂದ ಅನೇಕ ಶಾಖೆಗಳನ್ನು ಮುಖ್ಯಮಂತ್ರಿಗಳೇ ನಡೆಸುತ್ತಿದ್ದಾರೆ. ಕೂಲಿಕಾರ ಮಂತ್ರಿಗಳನ್ನಾಗಿ ಎಂ. ಗೆ. ಔಕನ್ನರನ್ನು ತೆಗೆದುಕೊಂಡುದು ಇತ್ತೀಚಿನ ಆಯ್ಕೆ.

● ಉದಕ ಮಂಡಲದಲ್ಲಿ ನಡೆದ ಏಶಿಯದ ಆರ್ಥಿಕ ಸಮಿತಿಯ ಪರಿಷತ್ತಿನಲ್ಲಿ ಇಂಡೋನೇಶಿಯಕ್ಕೆ ಸದಸ್ಯತ್ವ ಕೊಡಲು ಇಂಗ್ಲೆಂಡ್ ಫ್ರಾನ್ಸ್ ಮತ್ತು ನೆದರ್‌ಲೆಂಡುಗಳು ನಿರಾಕರಿಸಿದ್ದು ಸುವೇದ್ಯವಿದೆ. ಇದರಿಂದ ಈ ಮೂರು ಐರೋಪ್ಯರಾಷ್ಟ್ರಗಳಿಗಿನ್ನೂ ಸಾಮ್ರಾಜ್ಯ ಭೂತ ಬಡಿದುಕೊಂಡಿದೆಯೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬಹುದು. ಈ ಬುದ್ಧಿಯ ಫ್ರೆಂಚರು ಇಂಡೋ ಚೀನಕ್ಕೆ ಈರೀತಿ ಭೇದನೀತಿ ಪ್ರಯೋಗದಿಂದ ಸ್ವಾತಂತ್ರ್ಯ ಕೊಡದೆ ಸ್ವರಾಜ್ಯವೆಂದು ಫ್ರೆಂಚ ಒಕ್ಕೂಟದ ಒಂದು ಪ್ರಾಂತವಾಗಿ ಉಳಿವಂತಹ ಸ್ಥಿತಿಯನ್ನು ತಂದಿಟ್ಟುದು ಎಚ್ಚೆತ್ತ ಏಶಿಯಕ್ಕೆ ಸಮಾಧಾನಕರವೆನಿಸುವುದೇ?

ಪಾಲಿಸ್ತಾನದ ಪ್ರಸಂಗ

ಅಮೇರಿಕದ ಯೆಹೂದಿ ಸಂಘಟನೆಯ ಅಧ್ಯಕ್ಷರಾದ ಡಾ. ನ್ಯೂಮನ್ನರು ನ್ಯೂಯಾರ್ಕಿನಲ್ಲಿ ನಡೆದ ಯೆಹೂದಿ ವಾರ್ಷಿಕ ಸಭೆಯಲ್ಲಿ ಮಾತನಾಡುತ್ತ ಭದ್ರತಾಮಂಡಲದಲ್ಲಿ ಅರಬ ಮತ್ತು ಬ್ರಿಟಿಶರಿಗೆ ಮತದಾನ ಮಾಡುವ ಹಕ್ಕು ಅನ್ಯಾಯದ್ದಿದೆಯೆಂದೂ ಯಾವನಿಗೂ ಎಲ್ಲೂ ತನ್ನದೇ ಆದ ವ್ಯಾಜ್ಯದಲ್ಲಿ ತಾನೇ ನಿರ್ಣಾಯಕನಾಗುವ ಹಕ್ಕು ಬರದೆಂದೂ ಗರ್ಜಿಸಿದರು.




ಅನಾಮಿನ ಹಿಂದಿನ ಚಕ್ರವರ್ತಿಯಾದ ಬಾವುದಾಯಿ.

● ಯುದ್ಧ ನಿಲಿಕೆಗೆ ಒಪ್ಪುವ ಮೊದಲು ಯುದ್ಧಯೋಗ್ಯ ಯೆಹೂದಿಗಳು ಆಗಮಿಸುವುದು ನಿಲ್ಲಬೇಕೆಂದು ಅರಬ ವರ್ಗಗಳಲ್ಲಿ ಹೇಳಲಾಗುತ್ತಿದೆ.

● ಇಸ್ರೇಲಿನ ರಾಜಧಾನಿಯಾದ ಟೆಲ ಅವೀವಿನ ದಕ್ಷಿಣಕ್ಕೆ ಯುದ್ಧ ಜೋರಾಗಿಸಾಗಿದೆ. ಮಧ್ಯರಂಗದಲ್ಲಿ ಸ್ಕೋಪಸ್ನಂಬಲ್ಲಿ ಉಭಯ ಸೇನೆಗಳು ಎದುರಾಗಿವೆ. ಉತ್ತರ ಪ್ರದೇಶದಲ್ಲಿ ಅರಬರ ಕೈಮೇಲಾಗಿದೆಯೆಂದು ಅವರ ಹೇಳಿಕೆ.

● ಪಾಲಿಸ್ತಾನದ ಪರಿಸ್ಥಿತಿಯನ್ನು ಚರ್ಚಿಸಲು ಭದ್ರತಾಮಂಡಲದ ಸಭೆ ತಾ ೬ ರಲ್ಲಿ ಕೂಡಿದಾಗ ಅರಬ-ಯೆಹೂದಿಗಳ ತಂಟೆಯಲ್ಲಿ ಮಧ್ಯಸ್ಥರಾಗಿರುವ ಕೌಂಟ್ ಬರ್ನದೊತ್ತೆಯವರಿಂದ ಬಂದ ನೀಪರ್ಣಂಕಿ (Cable) ಯಿಂದ ತಾ ೮ ರಲ್ಲಿ ಯುದ್ಧ ನಿಲ್ಲುವುದೆಂಬ ಅಂಶ ಸ್ಪಷ್ಟವಾಯಿತು.



ಜೆಕೊಸ್ಲೋವೇಕಿಯದ ಹಿಂದಿನ ಅಧ್ಯಕ್ಷರಾದ ಡಾ. ಬೆನೆಸರು.

● ಅರಬ ದಳಗಳು ಒಂದೇ ಸವನೆ ಕಳೆದ ೩೦ ದಿನಗಳಿಂದ ಜೆರೂಸಲೇಮಿನ ಮೇಲೆ ಗುಂಡಿನ ಮಳೆಗರೆಯುತ್ತಿವೆಯೆಂದೂ ಯೆಹೂದಿಗಳು ಅದಕ್ಕೆ ಪ್ರತ್ಯುತ್ತರ ಕೊಡಲು ಹೊರಗಿನಿಂದ ಹೊಸ ಯುದ್ಧಸಾಮಗ್ರಿಗಳನ್ನು ತರಿಸುತ್ತಲೇ ಸಾಗಿದ್ದಾರೆಂದೂ ಇತ್ತೀಚಿನ ಸುದ್ದಿ.

● ಪಾಲಿಸ್ತಾನದಲ್ಲಿ ಆರಬರಿಗೆ ಬ್ರಿಟಿಶರು ರಹಸ್ಯವಾಗಿ ಸಹಾಯಮಾಡುತ್ತಿರುವರೆಂಬ ಬಗ್ಗೆ ಯೆಹೂದಿಗಳ ಸರಕಾರವು ಸಾಕ್ಷಿ ಪ್ರಮಾಣಗಳನ್ನು ಸಂಗ್ರಹಿಸಿ ಅದನ್ನು ಶ್ವೇತ ಪತ್ರರೂಪದಲ್ಲಿ ಪ್ರಕಟಿಸಲಿದೆ.

ವಿಯೆನ್ನದಲ್ಲಿ ಗುಪ್ತಚಾರರ ಘರ್ಷಣೆ

ವಿಯೆನ್ನನಗರದಲ್ಲಿ ಸ್ಥಳೀಯ ಹುಡುಗಿಯೊಬ್ಬಳನ್ನು ರಶಿಯನರು ಗೂಢಚಾರಳನ್ನಾಗಿ ನಿಯಮಿಸಿದ್ದರು. ಅವಳು ಅಮೇರಿಕನ್ನರ ವಶವಾಗಿ ಅವರಿಗೆ ರಶಿಯನ್ನರ ನಿಜಸಂಗತಿಗಳನ್ನೂ ರಶಿಯನ್ನರಿಗೆ ಅಮೇರಿಕದ ಬಗ್ಗೆ ಕೃತಕ ಸಮಾಚಾರವನ್ನೂ ತಿಳಿಸುತ್ತಿದ್ದಳು. ಒಮ್ಮೆ ಅವಳು ರಶಿಯದ ಗೂಢಚಾರರ ಗುಟ್ಟನ್ನು ತಿಳಿಯಲು ಹೋಗುತ್ತಿದ್ದಾಗ ಅಮೇರಿಕದವನೊಬ್ಬನು ಅವಳನ್ನು ದೂರದಿಂದ ಕಾಯುತ್ತಿದ್ದನು. ಅದನ್ನರಿತ ರಶಿಯನ ಗುಪ್ತಚಾರರು ಅವಳನ್ನು ಹೊತ್ತುಕೊಂಡುಹೋಗಲು ಹವಣಿಸಿದರು. ಅದನ್ನು ಅಮೇರಿಕದವರು ತಡೆಯಲು ಅವನನ್ನು ಅವರು ಹಿಡಿದರು. ಆ ಮೂವರನ್ನೂ ಅಲ್ಲೇ ಹತ್ತಿರದಲ್ಲಿದ್ದ ಬ್ರಿಟಿಶ ಪೋಲೀಸರು ಸ್ಥಳೀಯ ಪೋಲೀಸರಿಗೊಪ್ಪಿಸಿದರು. ಅದೇ ಮರುಗಳಿಗೆಯಲ್ಲಿ ೧೦-೨೦ ಜನ ರಶಿಯನ ಗುಪ್ತ ಪೋಲೀಸರು ಬಂದು ರಶಿಯನ್ನರಿಬ್ಬರನ್ನೂ ಆ ಅಮೇರಿಕನ್ನನನ್ನೂ ಬಲಾತ್ಕಾರದಿಂದ ಕೊಂಡೊಯ್ದರು. ಮಿತ್ರಪಕ್ಷದ ಒಪ್ಪಂದದ ಮೇರೆಗೆ ಇತರ ರಾಷ್ಟ್ರದವರನ್ನು ಒಂದು ರಾಷ್ಟ್ರದ ಅಧಿಕಾರಿಗಳು ಹಿಡಿದರೆ ೨೪ ತಾಸುಗಳಲ್ಲಿ ಅವರನ್ನು ಆಯಾ ರಾಷ್ಟ್ರದ ಅಧಿಕಾರಿಗಳಿಗೆ ವಾಪಸು ಕೊಡಬೇಕೆಂದು ಬ್ರಿಟಿಶರು ರಶಿಯನ್ನರಿಗೆ ತಿಳಿಸಿದ್ದಾರೆ.

● ರಶಿಯನ್ ಸಾರಿಗೆ ಅಧಿಕಾರಿಗಳಾದ ಲೆಫ್ಟಿನೆಂಟ್ ಕರ್ನಲ್ ಟಿಸೋವರನ್ನು ಅಂಗ್ಲೋ ಅಮೇರಿಕನ್ನರು ಅಪಹರಿಸಿ ಬಂಧನದಲ್ಲಿಟ್ಟು ತಾವು ಬರೆದ ಹೇಳಿಕೆಗೆ ಸಹಿಹಾಕಲು ಒತ್ತಾಯಪಡಿಸಲು ಅವರನ್ನು ಹೊಡೆದು ಬಡಿದು ರಶಿಯನ್ನರಿಗೆ ಮರಳಿ ಒಪ್ಪಿಸಲು ನಿರಾಕರಿಸಿದರೆಂದೂ ಮುಂದೆ ಈ ಕೃಷ್ಣಕಾರಸ್ಥಾನ ಹೊರಬೀಳಲು ತಮ್ಮ ಮುಖ ಉಳಿಸಿಕೊಳ್ಳಲು ಅವನನ್ನು ಜರ್ಮನಿಯಲ್ಲಿರುವ ರಶಿಯನ್ ಅಧಿಕಾರಿಗಳಿಗೆ ಒಪ್ಪಿಸಿದರೆಂದೂ ಸೋವಿಯೆಟ್ ಅಧಿಕಾರಿಯ ಮೇಲೆ ಹೀಗೆ ಕ್ರೂರ ದಬ್ಬಾಳಿಕೆ ನಡೆಸಿದವರನ್ನು ಶಿಕ್ಷಿಸದೆ ಎಂದಿಗೂ ಬಿಡಲಾಗದೆಂದೂ ಮಾಸ್ಕೋ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

\+ + +

ಬ್ರಿಟಿಶ ವಿಶ್ವವಿದ್ಯಾನಿಲಯಗಳಲ್ಲಿ ಸುಮಾರು ೯೬೦೦೦ ವಿದ್ಯಾರ್ಥಿಗಳು ಓದುತ್ತಿದ್ದಾರೆ.

ವಿಚಿತ್ರವಿಶ್ವ

ಪ್ರಾಣ ರಕ್ಷಣೆ

ಸ್ಟೆರಕ್ಯೂಸಿನಲ್ಲಿ ನ್ಯೂಯಾರ್ಕಿನ ಮೇಯರರಾದ ಫ್ರ್ಯಾಂಕ್ ಜಿ. ಕಾಸ್ಟೆಲೋ ಅವರು ಒಂದು ಪ್ರಾಣಿ ಪ್ರದರ್ಶನಾಲಯಕ್ಕೆ ಹೋಗಿ ಕಂಡಾಗ ಅವರು ಮೂಗಿನ ಮೇಲೆ ಬೆರಳಿಡುವಂತಾಯಿತು. ೨೦ ವರ್ಷ ಅಲ್ಲಿ ಬದುಕಿದ್ದ ಚಿರತೆ 'ಸೆಕಂಡ್ ಹ್ಯಾಂಡ್' ಆಗಿ ಹೋಗಿತ್ತು; ಮತ್ತೊಂದು ಚಿರತೆ ಅದರ ಬಾಲವನ್ನು ತಿಂದು ಹಾಕಿಬಿಟ್ಟಿತ್ತು. ಸಿಂಹವೊಂದು ಅಲ್ಲೇ ಇದ್ದು ಇದ್ದು ಬಣ್ಣವನ್ನೇ ಕಳೆದುಕೊಂಡಿತ್ತು. ಕಣ್ಣಿನ ಕವಡೆಗಳು ಮರವಟ್ಟು ಹೋಗಿದ್ದವು; ಜೊತೆಗೆ ಮೊಲಗಳು ಮಲಗಿದ್ದರೂ ಸುಮ್ಮನಿತ್ತು.

ಬೈರಾಗಿ ಕಲ್ಲಾದ

ಸಯಾಮಿ ನಗರವಾದ ಬಂದನ್ನಿನಲ್ಲಿ ಒಂದು ಚಮತ್ಕಾರ ನಡೆಯಿತು. ಅಲ್ಲಿಯ ಬೌದ್ಧ ದೇವಾಲಯವೊಂದರಲ್ಲಿ ಲೌಂಗ್‌ಪೋ ಎಂಬ ಮುಖ್ಯ ಅರ್ಚಕನಿದ್ದನು. ೧೯೪೩ ರ ಜುಲೈಯಲ್ಲಿ ಅವನು ದಿವಂಗತನಾದನು. ಅವನು ಕುಳಿತುಕೊಂಡು ಪ್ರಾಣಬಿಟ್ಟದ್ದರಿಂದ ಅವನ ಶರೀರವನ್ನು ಹಾಗೇ ಒಂದು ಮಣ್ಣಿನ ಹರವಿಯಲ್ಲಿ ಹಾಕಿ ಇಡಲಾಗಿತ್ತು.

ಇತ್ತೀಚೆಗೆ ಹೆಣಸುಡಲೆಂದು ಆ ಹರವಿಯ ಬಾಯಿ ತೆರೆದು ನೋಡುವಲ್ಲಿ ಹೆಣ ಕಲ್ಲಾಗಿತ್ತು! ದೇಹದ ಯಾವ ಭಾಗವೂ ಕೆಡದೆ, ಕೊಳೆಯದೆ ಹಾಗೆ ಗಟ್ಟಿ ಕಲ್ಲಾಗಿ ಮಾರ್ಪಟ್ಟಿದ್ದನ್ನು ಕಂಡು ಎಲ್ಲರೂ ಬೆರಗಾದರು. ಈಗ ಸಾವಿರಾರು ಯಾತ್ರಿಕರು ಅಲ್ಲಿಗೆ ಹೋಗಿ ಬರುತ್ತಿದ್ದಾರೆ.

\+ + +



ಚತುರಕ್ಷ

ಲ್ಯುಜುಂಗ್ ಇಲ್ಲವೆ ಲ್ಯುಮಿನ್ ಎಂಬ ಚೀನೀಯನಿಗೆ ಒಂದೊಂದು ಕಣ್ಣಿನಲ್ಲಿ ಎರಡೆರಡು ಕಣ್ಣುಗುಡ್ಡೆಗಳಿದ್ದವು. ಇದರಿಂದ ಅವನಿಗೇನೂ ಬಾಧಕವಾಗುತ್ತಿದ್ದಿಲ್ಲ. ಅವನು ಶಾನ್ಸಿಯ ಗವರ್ನರನಾದನು, ರಾಜ್ಯಕ್ಕೆ ಮಂತ್ರಿಯಾದನು, ಸಾಮ್ರಾಜ್ಞಿಯೊಡನೆ ಸಂಚು ನಡೆಸಿ ತನ್ನ ಮಗ ರಾಜ್ಯಾಧಿಕಾರಕ್ಕೆ ಅರ್ಹನೆಂದು ಸಾರಿಸಿದನು!

ಸಾವ ಮಾತು ಬೇಡ

ದ. ಆಫ್ರಿಕದ ಹೃದ್ರೋಗಿಯೊಬ್ಬ ಆಯಾಸಪಡಬೇಡವೆಂದು ವೈದ್ಯರು ಹೇಳಿದ್ದರೂ ಒಮ್ಮೆ ಒಂದೆಡೆ ಓಡಿಹೋಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದ ಒಂದು ಜೀವ ಉಳಿಸಿದ; ಕಂಡಾಬಟ್ಟೆ ಕಾರು ನಡೆಸುತ್ತಿದ್ದ ಸಾರಥಿಯೊಬ್ಬನನ್ನು ಬೆನ್ನಟ್ಟಿ ಹಿಡಿದು ನಿಲ್ಲಿಸಿದ; ಮತ್ತು ಆಕಸ್ಮಾತ್ ಸಂದರ್ಭದಲ್ಲಿ ಸೂಲಗಿತ್ತಿ ಕೆಲಸ ಮಾಡಿದ. ಇಷ್ಟನ್ನೂ ಮಾಡಿ ಬದುಕಿ ಉಳಿದ!

ಪಕ್ಕಕ್ಕೆ ಜಿಗಿತ

ರೋಮಿನಲ್ಲಿ ಫ್ರ್ಯಾಂಕ್ ಬೀವರನೆಂಬ ಸಾರಥಿ ನಾಯಿಯೊಂದರ ಜೀವ ಉಳಿಸಲು ರಸ್ತೆಯ ಪಕ್ಕಕ್ಕೆ ಜಳಕ್ಕನೆ ಜಿಗಿದ ಹೊಡೆತಕ್ಕೆ ಅಲ್ಲಿದ್ದ ಸೇತು ಪುಡಿಪುಡಿಯಾಗಿ ಉರುಳಿತಂತೆ!

ನುಣ್ಗಳವು

ಫಾಲ್ಸಂ ಪಟ್ಟಣದಲ್ಲಿ ಒಬ್ಬನು ಇಬ್ಬರು ಅಧಿಕಾರಿಗಳ ಕೃತಕ ಸಹಿ ಹಾಕಿ ಹುಂಡಿ ಮುರಿಸಿ, ಸರಕಾರೀ ಆಸ್ಪತ್ರೆಯಲ್ಲಿ ಆ ಅಧಿಕಾರಿಗಳು ಕದಿ ಟ್ಟಿದ್ದ ಮೊಬಲಗನ್ನು ಅಪಹರಿಸಿದರಂತೆ!

ಋಣಮುಕ್ತಿ

ಬ್ಯಾಟಲ್ ಕ್ರೀಕ್ ಪಟ್ಟಣದಲ್ಲಿ ಬಿಂಗೋ ಆಟಕ್ಕೆ ಒತ್ತಾಯದಿಂದ ಪ್ರತಿ ದಿನ ಎಳೆದುಕೊಂಡು ಹೋಗಿ ತನ್ನನ್ನು ಗೋಳಾಡಿಸುತ್ತಿದ್ದಳೆಂಬ ಆಪಾದನೆಯ ಮೇಲೆ ಜೇಮ್ಸ್ ಸ್ಟೆರ್ ಎಂಬವನು ಹೆಂಡತಿಗೆ ಸೋಡಚೀಟಿ ಕೊಟ್ಟನಂತೆ!



ಕುರುಡ, ಕಿವುಡ, ಮೂಕರು ಓದಬಲ್ಲರೆ?

ಮಗು,

ಕಳೆದ ಸಲ ನಿನಗೆ ಬಾಲಕರ ಪಟ್ಟಣದ ಕತೆ ಹೇಳಿದ್ದೆ. ಈ ಬಾರಿ ಇನ್ನೊಂದು ಸ್ವಾರಸ್ಯದ ಸಂಗತಿಯ ಪರಿಚಯ ಮಾಡಿಕೊಡುವೆ. ನೀನು ಕಣ್ಣು, ಕಿವಿ, ಬಾಯಿಗಳಿಲ್ಲದ ಬಡಪಾಯಿಗಳನ್ನು ದಿನಾಲೂ ನೋಡಿಯೆ ನೋಡುತ್ತಿ. ನಮ್ಮ ದೇಶದಲ್ಲಿ ಇಂಥ ಲಕ್ಷಾಂತರ ಜನರು ಇರುವರು. ಅವರಲ್ಲಿ ಸಂಪಾದಿಸಲಾರದೆ ಬೇಡಿ ತಿನ್ನುವವರೇ ಹೆಚ್ಚು ಮಂದಿ. ಮನೆಯಲ್ಲಿ ತುಸು ಅನುಕೂಲವುಳ್ಳವರು ಬೇರೆಯವರು ಗಳಿಸಿದ ಕೂಳನ್ನು ತಿನ್ನುತ್ತ ಬಿದ್ದಿರುತ್ತಾರೆ. ಆದರೆ ಅವರ ಜೀವನದಲ್ಲಿ ಸುಖವಿಲ್ಲ. ಅವರ ಮುಖದಲ್ಲಿ ಗೆಲವಿಲ್ಲ. ತುಂಟ ಹುಡುಗರು ಅವರನ್ನು ಅಣಕಿಸುತ್ತಾರೆ. ಅವರು ಓದು ಬರಹ ಕಲಿಯಲಾರರು. ಅದರಲ್ಲಿಯೂ ಕಿವಿ, ಕಣ್ಣು ಎರಡೂ ಹೋದವರದಂತೂ ನಾಯಿಯ ಪಾಡು. ಸಾಯುವ ವರೆಗೂ ಅವರು ಸುಖದ ಮೋರೆ ನೋಡುವದಿಲ್ಲ.

× × ×

ಆದರೆ ಅಮೇರಿಕೆಯ ಬ್ರೂಕ್ಲಿನ್ನಿನ ಸೈಂಟ ಜಾನ್ಸ ಕಾಲೇಜಿನಲ್ಲಿ ೨೧ ವರ್ಷದ ಗಟ್ಟಿಮುಟ್ಟಾದ ಒಬ ವಿದ್ಯಾರ್ಥಿ ಇದ್ದಾನೆ. ಅವನ ಹೆಸರು ಸ್ಮಿತ್‌ದಾಸ. ತನ್ನ ತರಗತಿಯ ೩೨೮ ವಿದ್ಯಾರ್ಥಿಗಳಲ್ಲಿ ಅವನು ಜಾಣತನದಲ್ಲಿ ೧೭ನೆ ನಂಬರು. ಆದರೆ ಅವನಿಗೆ ಕಣ್ಣೂ ಕಾಣುವದಿಲ್ಲ, ಕಿವಿಯೂ ಕೇಳುವದಿಲ್ಲವೆಂದು ಹೇಳಿದರೆ ನೀವು ಒಮ್ಮೆಲೆ ನಂಬಲಿಕ್ಕಿಲ್ಲ. ಆದರೆ ಇದು ಸತ್ಯ. ೫ನೆ ವರ್ಷದಲ್ಲಿಯೆ ಅವನು ಕಣ್ಣು ಕಿವಿಗಳೆರಡನ್ನೂ ಕಳೆದುಕೊಂಡಿದ್ದ. ಈಗ ಅವನು ಮಲ್ಲಯುದ್ಧದಲ್ಲಿ ಅಪ್ರತಿಮ, ಈಜುವದರಲ್ಲಿ ನಿಸ್ಸೀಮ, ೫೦ ಕವಿತೆಗಳನ್ನು ಬರೆದಿದ್ದಾನೆ. ಪತ್ರಿಕೆಗಳಿಗೆ ಲೇಖಗಳನ್ನು ಕೂಡ ಬರೆದು ಹಣಗಳಿಸುತ್ತಾನೆ.

× × ×

ಇದು ಹೇಗೆ ಸಾಧ್ಯವಾಯಿತು? ಪರ್ಕಿನ್ಸ ಸಾಲೆ ಅವನನ್ನು ಇಷ್ಟು ಗಟ್ಟಿಗನನ್ನಾಗಿ ಮಾಡಿತು. ಈ ಸಾಲೆಯಲ್ಲಿ ಈ ವರೆಗೆ ಸಾವಿರಗಟ್ಟಲೆ ಅಂಗಹೀನರು ಕಲಿತು ಮನುಷ್ಯರಾಗಿದ್ದಾರೆ. ಪರ್ಕಿನ್ಸಾ ಸಾಲೆ ಅಮೇರಿಕೆಯ ಬಾಸ್ಟನಾ ನಗರದ ಸಮೀಪದಲ್ಲಿ ೧೮೩೭ ವರ್ಷ ಹಿಂದೆ ಸ್ಥಾಪಿಸಲ್ಪಟ್ಟಿತು. ೪೦ ಎಕರೆಯ ವಿಶಾಲ ಆವಾರದಲ್ಲಿ ಅದರ ಕಟ್ಟಡ ನಿಂತಿದೆ. ಅಲ್ಲಿ ಕುರುಡರಿಗೆ ಕಲಿಸುವದೇ ಮುಖ್ಯವಾಗಿದ್ದರೂ ಕಿವುಡು-ಕುರುಡರಿಗೆ ಕಲಿಸಲು ಕೂಡ ಎಲ್ಲ ಅನುಕೂಲಗಳನ್ನು ಇಟ್ಟಿದ್ದಾರೆ. ಇಂಥ ಸಾಲೆ ಜಗತ್ತಿನಲ್ಲೆಲ್ಲ ಇದೊಂದೇ.

× × ×

ಇಸವಿ ೧೮೩೨ ರಲ್ಲಿ ಡಾ. ಸಾಮ್ಯುಯೆಲಾ ಗ್ರಿಡ್ಲೆ ಎಂಬವರು ಸ್ಥಾಪಿಸಿದ ಈ ಶಾಲೆ ೫ ಕುರುಡ ಹುಡುಗನಿಂದ ಆರಂಭವಾಯಿತು. ೧೮೩೭ ರಲ್ಲಿ ಕುರುಡಿ-ಕಿವುಡಿ-ಮೂಕಿ ಹುಡುಗಿ ಲಾರಾ ಬ್ರಿಜಮನ್ನಳೆಂಬವಳನ್ನು ತಂದರು. ಅವಳು ಸಾಯುವ ವರೆಗೂ ಈ ಸಾಲೆಯಲ್ಲೆ ಉಳಿದು ತನ್ನಂಥ ಅಂಗಹೀನರ ಸೇವೆ ಮಾಡಿದಳು.

× × ×

ಕಣ್ಣು-ಕಿವಿ-ಬಾಯಿ ಇಲ್ಲದವರ ಸ್ಪರ್ಶ (ಅದರೆ ವಸ್ತುಗಳನ್ನು ಮುಟ್ಟಿ ತಿಳಿಯುವ) ಶಕ್ತಿ ಬಹಳ ಸೂಕ್ಷ್ಮವಾಗಿರುತ್ತದೆ. ಅದ್ದರಿಂದ ಈ ಸಾಲೆಯಲ್ಲಿ ಕಣ್ಣಿನ ಬದಲು ಕೈಯಿಂದ ಓದಲು ಕಲಿಸತೊಡಗಿದರು. ಪುಸ್ತಕ, ಕಾಗದ, ಪೆನ್ಸಿಲು, ಬಟ್ಟಲು, ತಾಟು ಮೊದಲಾದವುಗಳ ಮೇಲೆ ಆ ವಸ್ತುಗಳ ಹೆಸರನ್ನು ದಟ್ಟಿನ ಅಕ್ಷರಗಳಲ್ಲಿ ಬರೆದು ಹಚ್ಚಿದರು. ಅವುಗಳನ್ನು ಮುಟ್ಟಿ ಆ ವಸ್ತುಗಳಿಗೂ ಆ ಅಕ್ಷರಗಳಿಗೂ ಇರುವ ಸಂಬಂಧವನ್ನು ಲಾರಾ ತಿಳಿದುಕೊಂಡಳು. ಮುಂದೆ ಬರಿ ಆ ಶಬ್ದಗಳನ್ನು ಆಕೆಯ ಕೈಗೆ ಹಚ್ಚಿದರೆ ಅವಳು ಆ ವಸ್ತುಗಳನ್ನು ನೆನೆದುಕೊಳ್ಳುವಂತಾಯಿತು. ಬೇರೆ ಬೇರೆ ವಸ್ತುಗಳ ಹೆಸರುಗಳಲ್ಲಿ ಒಂದೇ ಬಗೆಯ ಅಕ್ಷರಗಳು ಬರುವದನ್ನೂ ಅವಳು ಅರಿತುಕೊಂಡಳು. ಹೀಗೆ ಅವಳಿಗೆ ಕೆಲತಿಂಗಳುಗಳಲ್ಲಿ ಅಕ್ಷರ ಮಾಲೆಯ ಪರಿಚಯವಾಯಿತು. ಆಗ ಅಕ್ಷರ, ಶಬ್ದ, ಹೆಸರು, ಇವುಗಳಿಗೂ ವಸ್ತುಗಳಿಗೂ ಇರುವ ಸಂಬಂಧ ಕಣ್ಣು ಕಿವಿಗಳಿಲ್ಲದಿದ್ದರೂ ಅವಳಿಗೆ ತಿಳಿಯಿತು. ಅವಳಿಗಾದ ಆನಂದ ಅಷ್ಟಿಷ್ಟಲ್ಲ.

× × ×

ಅನೇಕ ವರ್ಷಗಳ ವರೆಗೂ ಈ ಪದ್ಧತಿಯಿಂದ ಕೆಲಸ ಮಾಡಿದರು ಆ ಡಾಕ್ಟರರು. ಅಲ್ಲಿ ಕಲಿತ ಹುಡುಗ-ಹುಡುಗಿಯರು ಅನೇಕ ದಂಧೆಗಳನ್ನು ನಡೆಸಿ ಸುಖವಾಗಿ ಉಪಜೀವನ ಪಡೆಸುತಿದ್ದಾರೆ. ಆದರೆ ಈಗ ಆ ಡಾಕ್ಟರರೂ ಇಲ್ಲ, ಅಂದಿನ ರೀತಿ ನೀತಿಗಳೂ ಉಳಿದಿಲ್ಲ. ಅನೇಕ ಸುಧಾರಣೆಗಳಾಗಿವೆ. ಅದರಿಂದ ನೂರಾರು ವಿದ್ಯಾರ್ಥಿಗಳಿಗೆ ಒಮ್ಮೆಲೆ ಪಾಠ ಹೇಳುವದು ಸಾಧ್ಯವಾಗಿದೆ. ಕೈಯಿಂದ ಮುಟ್ಟಿಸಿ ಪಾಠ ಹೇಳುವ ಪರಿಪಾಠವನ್ನು ಬಿಟ್ಟುಬಿಟ್ಟಿದ್ದಾರೆ. ಕಣ್ಣು ಕಿವಿ ಎರಡೂ ಇಲ್ಲದ ಹುಡುಗರಿಗೆ ಮೊದಲು ಮಾತಾಡಲು ಕಲಿಸುತ್ತಾರೆ. (ಹುಟ್ಟು ಕಿವುಡರಿಗೆ ಮೊದಲು ಮಾತು ಬರುವದಿಲ್ಲ.) ಶಿಕ್ಷಕನು ಮಾತಾಡುವಾಗ ಅವನ ತುಟಿಯ ಮೇಲೆ ಹುಡುಗರ ಬೆರಳು ಇಡಿಸುತ್ತಾರೆ. ಆದರ ಆಲುಗಾಟಕ್ಕೂ ವಸ್ತುಗಳ ಇಲ್ಲವೆ ಕೆಲಸಗಳ ಹೆಸರುಗಳಿಗೂ ಸಂಬಂಧವನ್ನು ಕಲ್ಪಿಸಿಕೊಳ್ಳುತ್ತಾರೆ. ಆ ಮೇಲೆ ಅಕ್ಷರಗಳನ್ನು ಉಚ್ಚರಿಸಲು ತುಟಿಯನ್ನು ಯಾವ ರೀತಿ ಕೂಡಿಸಬೇಕೆಂದು ಕಲಿಸುತ್ತಾರೆ.

x x x

ಈಗ ಸಿದ್ಧವಾಗಿರುವ ಹೊಸ ಯಂತ್ರಗಳಿಂದ ಈ ಕೆಲಸ ಸುಲಭವಾಗಿದೆ. ಕಿವುಡರ ಕಿವಿಗೆ ಒಂದು ಧ್ವನಿವಾಹಕ ಯಂತ್ರವನ್ನು ಹಚ್ಚಿ ಅದರ ಒಂದು ನಾಲಗೆಯನ್ನು ಹಲ್ಲಿಗೆ ತಗಲಿಸುತ್ತಾರೆ. ಈ ಮೂಲಕ ಆಡಿದ ಮಾತುಗಳು ಕಿವುಡನಿಗೆ ಹೆಚ್ಚು ಕಡಿಮೆ ಕೇಳಿಸುತ್ತದೆ. ಇದರಿಂದ ಎಷ್ಟೋ ಕಿವುಡರು ಉಪಯೋಗ ಪಡೆದಿದ್ದಾರೆ.

x x x

ವಿದೇಶಗಳಲ್ಲಿ ಕುರುಡರ ಶಾಲೆಗಳು ಎಷ್ಟೋ ಇವೆ. ಮೇಲೆ ಹೇಳಿದ ಸಾಲೆಯಷ್ಟು ಉತ್ತಮವಾಗಿರದಿದ್ದರೂ ಅವು ಬಹಳ ಕೆಲಸ ಮಾಡಿವೆ. ಹಿಂದುಸ್ತಾನದಲ್ಲಿ ೮ ವರ್ಷಗಳ ಕೆಳಗೆ ಹೈದರಾಬಾದಿನಲ್ಲಿ ಇಂಥ ಶಾಲೆಯೊಂದು ಪ್ರಾರಂಭವಾಯಿತು. ಅಲ್ಲಿಯೂ ಕುರುಡ, ಕಿವುಡ, ಮೂಕರಿಗೆ ನಾನಾ ರೀತಿಯ ಕಲೆ ಕೈಗಾರಿಕೆಗಳನ್ನೂ ಬರಹವನ್ನೂ ಕಲಿಸುತ್ತಾರೆ. ಆದರ ಹೆಡ್ ಮಾಸ್ತರರು ರಾಮಚಂದ್ರರಾವ್ ಎಂಬವರು.

— ನಿನ್ನ ಮಾವ.

ಒಂದು ಅಶ್ವ ಶಕ್ತಿ Horse-Power ಎಂದರೆ ೩೩೦೦೦ ಪೌಂಡು ತೂಕವನ್ನು ೧ ಅಡಿ ಎತ್ತರಕ್ಕೆ ಒಂದು ನಿಮಿಷದಲ್ಲಿ ಎತ್ತಲು ಅಗತ್ಯವಾದ ಶಕ್ತಿ ಅಥವಾ ೫೫೦ ಪೌಂಡು ತೂಕವನ್ನು ೧ ಅಡಿ ಎತ್ತರಕ್ಕೆ ೧ ಸೆಕಂಡಿನಲ್ಲಿ ಎತ್ತಲು ಅವಶ್ಯಕವಾದ ಶಕ್ತಿ.

\+ + +

ಇಂಗ್ಲೆಂಡಿನ ಮೊದಲನೆಯ ಆಸ್ಥಾನ ಕವಿಯೆಂದರೆ ಜೆಫ್ರೆ ಚಾಸರ್. ಅವನು ೧೩೮೯ ರಲ್ಲಿ ಆ ಬಿರುದನ್ನು ಪಡೆದು ವಾರ್ಷಿಕ ಮದ್ಯದ ಬತ್ತಿಯನ್ನು ಅರಸನಿಂದ ಪಡೆದನು.

\+ + +

ಶಾಂಘಾಯಿಯ ಬೆಂಕಿ ಪೆಟ್ಟಿಗೆ ಕಾರಖಾನೆಯೊಂದಕ್ಕೆ ಬೆಂಕಿಬಿದ್ದು ಸಿಡಿತ ಉಂಟಾಗಿ ಸುತ್ತುಮುತ್ತಲಿನ ಸೌಧಗಳು ಗಡಗಡಿಸಿದವಲ್ಲದೆ ಆಕಾಶದ ತುಂಬ ಬಿಳಿಯ ಹೊಗೆ ಹಬ್ಬಿತು.

ರಜಾಕಾರರ ಅತಿಕ್ರಮಣ

ಮುಂಬಯಿ ಸರಕಾರದ ಪ್ರಕಟನೆ

ಮುಂಬಯಿ ಸರಕಾರವು ತಾ ೫ ರಂದು ಒಂದು ಪ್ರಕಟನೆ ಹೊರಡಿಸಿ ರಜಾಕಾರರು ಹಿಂದಿ ಒಕ್ಕೂಟ ಪ್ರದೇಶದಲ್ಲಿ ಬಂದು ನಡೆಸಿದ ಅತಿಕ್ರಮಣದ ಬಗ್ಗೆ ಅಧಿಕೃತ ಪ್ರಕಟನೆ ಹೊರಡಿಸಿ ಹೀಗೆ ಹೇಳುತ್ತದೆ.

ದುದ್ನಿ ವಿಭಾಗದಲ್ಲಿ ಹೈದರಾಬಾದ ಪ್ರಜೆಗಳ ಮೇಲೆ ಅತ್ಯಾಚಾರವಾಗುತ್ತಿದ್ದೆಂದು ನಿಜಾಮ ಸರಕಾರದವರು ಇಲ್ಲದ್ದನ್ನು ಹುಟ್ಟಿಸಿ ಹೇಳುತ್ತಾರೆ. ಕೆಳಗಿನ ಉದಾಹರಣೆಯ ಮೇಲಿಂದ ವಸ್ತು ಸ್ಥಿತಿಯು ಏನಿದೆ ಎಂಬುದು ಸ್ಪಷ್ಟವಾಗಿ ಕಂಡುಬರುವದು.

ಮೇ ೨೮ಕ್ಕೆ ಇಬ್ಬರು ವ್ಯಾಪಾರಸ್ಥರು ತೋಲನೂರಿನಿಂದ ತಮ್ಮ ಹಳ್ಳಿಗೆ ಹೋಗುತ್ತಿದ್ದರು. ೧೬ ರಜಾಕಾರರೂ ಬೇರೆ ೫ ಜನರೂ ಅವರನ್ನು ಮುತ್ತಿದರು. ದುದ್ನಿಯಲ್ಲಿ ವ್ಯಾಪಾರಸ್ಥರು ಒಂದು ಬಂಡಿಯನ್ನು ಬಾಡಿಗೆ ಮಾಡಿಕೊಂಡು ಹೊರಟಿದ್ದರು. ರಜಾಕಾರರು ಅವರನ್ನು ತಡೆದರು. ಬಂಡಿಯವನನ್ನು ಹೊಡೆದರು. ೧೦ ಡಬ್ಬಿ ಚಿಮಣಿಎಣ್ಣೆ ೫೦೦ ರೂಪಾಯಿ ಮತ್ತು ೫೦೦ ರೂ. ಬೆಲೆಯ ಸಾಮಾನು ಲೂಟಿ ಮಾಡಿದರು. ಅಲ್ಲದೆ ತೋಲನೂರಿಗೆ ಬರುತ್ತಿರುವಾಗ ದಾರಿಯಲ್ಲಿ - ಇವರು ಅಕ್ಕಲಕೋಟೆ ಸಂಸ್ಥಾನದಲ್ಲಿ ಅರ್ಧ ಮೈಲು ಒಳನುಗ್ಗಿ ಸುಲಿಗೆ ಮಾಡಿದರು.

ಯುಕ್ತಪ್ರಾಂತದಲ್ಲಿ ರಕ್ಷಾದಲ

೧೮೦೦ ಸಂಚಾಲಕರು ದಲನಾಯಕರು

ಯುಕ್ತಪ್ರಾಂತದವರು ಪ್ರಾಂತೀಯ ರಕ್ಷಾದಲದ ಸಂಚಾಲಕ ಹಾಗು ದಲನಾಯಕ ಮೊದಲಾದ ೧೮೦೦ ಸ್ಥಳಗಳನ್ನು ಗೊತ್ತುಪಡಿಸಿರುವದಾಗಿ ತಿಳಿಯುತ್ತದೆ. ಜಿಲ್ಹಾ ನಗರ ಶಾಖೆಗಳ ದಲನಾಯಕರ ಸಂಖ್ಯೆ ೯೯೦ ಹಾಗೂ ಸಂಚಾಲಕರ ಸಂಖ್ಯೆ ೯೦೦ ಇರಬಹುದೆಂದು ತಿಳಿಯುತ್ತದೆ. ಪ್ರಾಂತೀಯ ರಕ್ಷಾದಲದ ಪ್ರಧಾನ ದಲಪತಿಯು ಈ ಸ್ಥಳಗಳಿಗೆ ಯೋಗ್ಯ ಜನರನ್ನು ನಿಯಮಿಸುವನು. ಶಾಖೆಗಳ ಹಾಗೂ ನಗರ ಉಪದವೆ ನಾಯಕರನ್ನು ನಿಯಮಿಸುವ ಅಧಿಕಾರವನ್ನು ಪ್ರಾದೇಶಿಕ ದಲಪತಿ ಇಲ್ಲವೆ ಜಿಲ್ಹಾ ಮ್ಯಾಜಿಸ್ಟ್ರೇಟರಿಗೆ ಒಪ್ಪಿಸಿ ಕೊಡಬಹುದು.

ಕೇಂದ್ರ ಸರಕಾರದ ನೌಕರಿಗಳು

ಹಿಂದೀ ಆಡಳಿತ ಶಾಖೆ ಮತ್ತು ಪೋಲೀಸ ಶಾಖೆಗಳಲ್ಲಿ ಹೊಸ ಉಮೇದವಾರರನ್ನು ನೇಮಿಸಿಕೊಳ್ಳುವದಕ್ಕಾಗಿ ಒಂದು ವಿಶೇಷ ಮಂಡಳವನ್ನು ನೇಮಿಸಲಾಗುವದೆಂದು ಸರಕಾರಿ ಪ್ರಕಟನೆ ಹೊರಟಿದೆ. ವಿದೇಶೀಯರ ನಿರ್ಗಮನದಿಂದ ಆ ಖಾತೆಗಳಲ್ಲಿ ಬಹಳ ಸ್ಥಳಗಳು ತೆರವಾಗಿದ್ದು ಆಡಳಿತ ಶಾಖೆಯಲ್ಲಿ ಸುಮಾರು ೨೫೫ ಪೋಲೀಸ ಶಾಖೆಯಲ್ಲಿ ೨೬೫ ಸ್ಥಳಗಳೂ ತೆರವಿರಬಹುದೆಂದು ಅಂದಾಜಿದೆ. ೨೭ ಮತ್ತು ೪೫ ವಯಸ್ಸಿನ ನಡುವಿನ ನಿರ್ದಿಷ್ಟ ಪದವೀಧರರಿಂದ ಅರ್ಜಿ ಸ್ವೀಕರಿಸಲಾಗುವದು. ಈಗಾಗಲೇ ೧೫೭ ಜನರನ್ನು ಸೇರಿಸಿಕೊಳ್ಳಲಾಗಿದೆ. ಪ್ರತಿವರ್ಷ ಈ ಶಾಖೆಗಳಲ್ಲಿ ಇಷ್ಟು ಜನರನ್ನು ಸೇರಿಸಿಕೊಳ್ಳಲೇಬೇಕಾಗುತ್ತದೆ. ಈ ವರ್ಷದ ಪ್ರಾರಂಭದಲ್ಲಿ ನಡೆದ ಫೆಡರಲ್ ಪಬ್ಲಿಕ್ ಸರ್ವಿಸ ಕಮೀಶನ್ ಪರೀಕ್ಷೆಯಲ್ಲಿ ಉತ್ತಮ ತರಗತಿಯಲ್ಲಿ ತೇರ್ಗಡೆ ಹೊಂದಿ ಇನ್ನೂ ಕಾಯಂ ನೌಕರಿ ದೊರಕದಿದ್ದವರಿಗೆ ಪ್ರಥಮ ಸಂಧಿ ಕೊಡಲಾಗುವದು. ಪ್ರಾಂತಿಕ ಸರಕಾರಗಳಲ್ಲಿ ಕೆಲಸಮಾಡುತ್ತಿರುವವರನ್ನು ಸಹ ಆಯಾ ಪ್ರಾಂತಿಕ ಸರಕಾರಗಳ ಶಿಫಾರಿಸಿನ ಮೇಲೆ ಆರಿಸಲಾಗುವದು. ಈ ಬಗ್ಗೆ ಸಂಪೂರ್ಣ ವಿವರ ಉಳ್ಳ ಪ್ರಕಟನೆಯನ್ನು ಬೇಗನೆ ಪ್ರಕಟಿಸಲಾಗುವದು.

ಹಿಂದೀ ಸೈನಿಕರ ಪ್ರದರ್ಶನ

ದೇವಲಾಲ ಸೈನ್ಯ ಶಾಖೆಯಲ್ಲಿ ಅತಿ ದೊಡ್ಡ ಪ್ರಮಾಣದ ಸೈನ್ಯ ಪ್ರದರ್ಶನವು ನಾಲ್ಕುದಿನ ನಡೆದು ತಾ. ೩ಕ್ಕೆ ಮುಕ್ತಾಯವಾಯಿತು. ಭಾರತ ವಿಭಜನೆಯ ನಂತರ ಇದೇ ಮೊದಲ ಸಲ ಅತಿ ದೊಡ್ಡ ಪ್ರದರ್ಶನ ನಡೆದುದು. ಇದರಲ್ಲಿ ಯುದ್ಧದ ಬೇರೆ ಬೇರೆ ಗತ್ತುಗಳನ್ನೂ ಹಿಂದೀ ಸೈನಿಕರ ಹತ್ತಿರ ಇರುವ ಅನೇಕ ಬಗೆಯ ಶಸ್ತ್ರಾಸ್ತ್ರಗಳ ವಿವಿಧ ಉಪಯೋಗಗಳನ್ನೂ ಪ್ರದರ್ಶಿಸಲಾಯಿತು. ಸೈನ್ಯ ಶಾಖೆಯ ಅಧಿಕಾರಿಗಳೂ ಇತರ ಸರಕಾರೀ ಉಚ್ಚ ಅಧಿಕಾರಿಗಳೂ ಪ್ರೇಕ್ಷಕರಾಗಿ ಬಂದಿದ್ದರು.

ಸಾಲವಾಡಿಗಿಯಲ್ಲಿ ರಜಾಕಾರರ ದಾಳಿ

ವಿಜಾಪುರ ಜಿಲ್ಹೆ ಮುದ್ದೇಬಿಹಾಳ ತಾಲೂಕಿನ ಹಳ್ಳಿಯಾದ ಸಾಲವಾಡಿಗಿ ಎಂಬಲ್ಲಿ ತಾ॥ ೫ ರಾತ್ರಿ ೮ಕ್ಕೆ ರಜಾಕಾರರು ಮತ್ತು ನಿಜಾಂ ಮಿಲಿಟರಿಯವರು ದಾಳಿಮಾಡಿ ಸಿಕ್ಕಾಬಟ್ಟೆ ಗೊಂದಲ ಹಾಕಿದ ವರದಿ ಬಂದಿದೆ.

ರಜಕಾರರು ಬಂದೂಕ ಮತ್ತು ತೋಫುಗಳಿಂದ ಸಜ್ಜಾಗಿ ಬಂದು ಒಂದು ಬಣವಿಗೆ ಬೆಂಕಿ ಹಚ್ಚಲು ಹಳ್ಳಿಗರು ಕಾಂಗ್ರೆಸ ಕೆಲಸಗಾರರು ಪೋಲೀಸರು ಅಲ್ಲಿಗೆ ಧಾವಿಸಿ ಬಂದರು. ರಜಾಕಾರರು ಅಲ್ಲಿಯೇ ಗುಡ್ಡಗಾಡದಲ್ಲಿ ಅಡಗಿಕೊಂಡಿದ್ದರು. ಇದು ಗೊತ್ತಾಗದೆ ಊರವರು ಕಿಡಿಗೇಡಿಗಳನ್ನು ಬೆನ್ನಟ್ಟಿ ಗುಡ್ಡದವರೆಗೆ ಹೋಗುತ್ತಲೇ ಅಡಗಿ ಕುಳಿತ ಪುಂಡ ರಜಾಕಾರರು ಗುಂಡು ಹಾರಿಸಿದರು. ಆಗ ೪ ಜನ ಹಿಂದೀ ಪ್ರಜೆಗಳು ಮಡಿದರೆಂದೂ ೮ ಜನರ ಪತ್ತೆಯಿಲ್ಲವೆಂದೂ ಈ ೮ ಜನರಲ್ಲಿ ೨ ಸ್ಟೇಟ ಕಾಂಗ್ರೆಸ ಕಾರ್ಯಕರ್ತರು ೬ ಜನ ಪೋಲೀಸರು ಇರುವರು ಎಂದೂ ತಿಳಿಯುತ್ತದೆ. ಕಾಂಗ್ರೆಸ ಕಾರ್ಯಕರ್ತರಲ್ಲಿ ಒಬ್ಬರಾದ ಶ್ರೀ ವಿರುಪಾಕ್ಷಪ್ಪ ಎಂಬವರು ಮಡಿದಿರುವರೆಂದು ನಂಬಲಾಗಿದೆ.

ಪ. ಬಂಗಾಲದಲ್ಲಿ ಜಾತೀಯತೆಯಿಲ್ಲ

ಪಶ್ಚಿಮ ಬಂಗಾಲ ಪ್ರಾಂತಿಕ ಕಾಂಗ್ರೆಸ ಕಾರ್ಯಕಾರಿ ಸಮಿತಿಯ ಸದಸ್ಯರಾದ ಜನಾಬ ಹಬೀಬ ಉಲ್ಲಾರು ಒಂದು ಹೇಳಿಕೆಯಲ್ಲಿ, ಪ. ಬಂಗಾಲ ಮುಸ್ಲಿಂರ ಬಗ್ಗೆ ಖವಾಜಾ ನಾಜೀಮುದ್ದೀನರಿತ್ತ ಹೇಳಿಕೆಯನ್ನು ಖಂಡಿಸಿದ್ದಾರೆ.

ಖವಾಜಾ ನಾಜೀಮುದ್ದೀನರು ಶ್ರೀ. ಸುಹ್ರವರ್ದಿಯವರಿಗೆ ಒಂದು ಓಲೆ ಬರೆದು ಪ. ಬಂಗಾಲ ಮುಸ್ಲಿಂರನ್ನು ಪೂ. ಬಂಗಾಲಕ್ಕೆ ಗುಳೇ ಹೋಗಲು ಒತ್ತಾಯಪಡಿಸಲಾಗುತ್ತಿದೆಯೆಂದು ಸುಳ್ಳು ಆರೋಪ ಹೊರಿಸಿದ್ದಾರೆ.

ಈ ಆರೋಪವನ್ನು ಪ್ರತಿಭಟಿಸಿ ಜನಾಬ ಹಬೀಬ ಉಲ್ಲಾರು ಹೀಗೆ ಹೇಳಿದ್ದಾರೆ.

ಪ. ಬಂಗಾಲದಲ್ಲಿ ಜಾತೀಯ ಭೀತಿಗೆ ಆಸ್ಪದವೇ ಇಲ್ಲ. ಇಲ್ಲಿಯ ಸರಕಾರವು ಜಾತೀಯತೆಗೆ ಸಂಪೂರ್ಣ ವಿರೋಧಿಯಾಗಿದೆ. ಜಾತ್ಯತೀತ ರಾಷ್ಟ್ರವಾದ ಭಾರತದಲ್ಲಿ ಅಲ್ಪ ಸಂಖ್ಯಾಕರ ಅಥವಾ ಜಾತೀಯತೆಯ ಪ್ರಶ್ನೆಯೇ ಇಲ್ಲ. ಪಾಕಿಸ್ತಾನದಲ್ಲಿರುವಂತೆ ಹಿಂದುಸ್ತಾನದಲ್ಲಿ ಜಾತ್ಯಂಧರ ಸರ್ವಾಧಿಕಾರತ್ವವು ಇಲ್ಲವೆಂಬುದನ್ನು ನಾಜೀಮುದ್ದೀನರು ಅರಿಯಲಿ ಎಂದು ಮೊದಲಾಗಿ ಸ್ಪಷ್ಟೋಕ್ತಿಗಳು ಆ ಹೇಳಿಕೆಯಲ್ಲಿ ಉಂಟು.

ಸುಂಕ ಮತ್ತು ವ್ಯಾಪಾರದ ಸೌಕರ್ಯಗಳು

ನ್ಯೂಯಾರ್ಕಿನಲ್ಲಿರುವ ಸಂಯುಕ್ತರಾಷ್ಟ್ರ ಸಂಘದ ಹಿಂದೀ ಪ್ರತಿನಿಧಿಗೆ ಸುಂಕ ಮತ್ತು ವ್ಯಾಪಾರ ಸೌಕರ್ಯಗಳ ಅರ್ಜಿಗೆ ಸಹಿಹಾಕಲು ದಿಲ್ಲಿ ಸರಕಾರದ ಅಪ್ಪಣೆ ದೊರೆತಿದೆ. ಸಹಿ ಮಾಡಿದ ೩೦ ದಿನಗಳಲ್ಲಿ ಹಿಂದುಸ್ತಾನಕ್ಕೆ ದೊರೆತ ಮತ್ತು ಅದು ಇತರ ರಾಜ್ಯಗಳಿಗೆ ಕೊಟ್ಟ ಸೌಕರ್ಯಗಳು ಅಮಲಿನಲ್ಲಿ ಬರುತ್ತವೆ.

ಇತರ ರಾಷ್ಟ್ರಗಳಿಗೆ ಈ ಕೆಳಗಿನ ವಸ್ತುಗಳ ಬಗ್ಗೆ ಹಿಂದುಸ್ತಾನವು ಸೌಲಭ್ಯ ಕಲ್ಪಿಸಿಕೊಟ್ಟಿದೆ. ಹಾಲು ಮತ್ತು ಅದರಿಂದಾದ ಪದಾರ್ಥಗಳು, ಡಬ್ಬದಲ್ಲಿ ತುಂಬಿದ ಹಣ್ಣು ತರಕಾರಿಗಳು, ವಿಶಿಷ್ಟ ರಾಸಾಯನಿಕ ದ್ರವ್ಯಗಳು, ಕಲ್ಲಿದ್ದಲಿನ ಡಾಮರು ಬಣ್ಣಗಳು, ಯಂತ್ರ ಸಾಮುಗ್ರಿಗಳು, ರೇಡಿಯೋ, ಟೈಪರೈಟರ್ ಕಣ್ಣಿನ ಉಪಕರಣಗಳು, ಕಚ್ಚಾ ಉಣ್ಣೆ, ಗೊಬ್ಬರ ಮತ್ತು ಗೃಹಕೃತ್ಯದ ಶೀತ ಸಂರಕ್ಷಕ ಯಂತ್ರಗಳು.

ಇತರ ರಾಷ್ಟ್ರಗಳು ಭಾರತಕ್ಕೆ ಈ ಕೆಳಗಿನ ವಸ್ತುಗಳ ಬಗ್ಗೆ ಸೌಲಭ್ಯವಿತ್ತಿವೆ. ಸಣಬು ಮತ್ತು ಅದರಿಂದಾದ ಪದಾರ್ಥಗಳು, ಹತ್ತಿಯ ಪದಾರ್ಥಗಳು, ಗೋವೆಯ ಬೀಜ, ಕಾಗೆ ಬಂಗಾರ, ಕತ್ತದ ಚಾಪೆ, ತೈಲಟದ ಸಾಮಾನುಗಳು, ಜಮಖಾನಗಳು, ಮಸಾಲೆಯ ಮತ್ತು ಇತರ ನಂಜಿಕೊಳ್ಳುವ ಪದಾರ್ಥಗಳು. ಮುಖ್ಯವಾದ ತೈಲಗಳು, ಚಹ ಮತ್ತು ಹೊಗೆಸೊಪ್ಪು.

ಓದು ಬರಹ ಕಲಿಸಿದರೆ ವಯಸ್ಕ ಶಿಕ್ಷಣವಲ್ಲ

ವಿವೇಕಿ ಪ್ರಜಾತಂತ್ರದ ನಿರ್ಮಾಣವೇ ಧ್ಯೇಯವಿರಬೇಕು

[ಲೇಖಕರು: ಕೆ. ಜಿ. ಸಯ್ಯುದ್ದೀನ]

ಗೊತ್ತುಗುರಿಯಿಲ್ಲದ ಧರ್ಮಾಂಧತೆ, ರಾಗ ದ್ವೇಷಗಳ ಸೆಳವಿಗೆ ಬಿದ್ದು ಸ್ವಾರ್ಥಸಾಧುಗಳಾದ ಪುರಿವೋಸೆಯ ಮುಂದಾಳುಗಳ ಸೂತ್ರ ಚಾಲನೆಗೆ ಸುಲಭವಾಗಿ ಬಲಿಬೀಳುವ ಜನರ ಸುಶಿಕ್ಷಿತ ಪ್ರಜಾತಂತ್ರವೇ ಜಗತ್ ಶಾಂತಿಗೆ ಬೇರಾವ ಬಗೆಯ ರಾಜ್ಯಪದ್ಧತಿಗಿಂತಲೂ ಹೆಚ್ಚು ಗಂಡಾಂತರವನ್ನು ತರಬಲ್ಲದು. ಹೀಗೆ ಹೇಳಿದಾಕ್ಷಣ ಪ್ರಜಾತಂತ್ರಕ್ಕೆ ಹೆಸರಿಟ್ಟ[illegible]. ಅವರೆ ಅದರ ಬೌದ್ಧಿಕ ಮತ್ತು ನೈತಿಕ ಹೂರಣ ಒಳಗೊಳಗೆ ಹುಳಿತು ಹೋಗುವ ಸಂಭವವಿದೆಯೆಂದು ಎಚ್ಚರ ಕೊಡುವದೇ ಇದರ ತಾತ್ಪರ್ಯ. ಪ್ರಜಾತಂತ್ರದ ಬೌದ್ಧಿಕ ಮತ್ತು ನೈತಿಕ ಕೋಟೆಗೆ ಎರಡು ಬಗೆಯ ಅಪಾಯ ಬರಬಲ್ಲದು. ಒಂದು, ವಿಚಾರವಿಲ್ಲದೆ ಪ್ರಚಾರವನ್ನೆ ಸತ್ಯವೆಂದು ಬೋಳರಂತೆ ನಂಬುವದು; ಎರಡು, ಸಾಮಾಜಿಕ ಒಗ್ಗಟ್ಟು ಕುಸಿದು ಬೀಳುವದು. ಈ ಎರಡು ಅಪಾಯಗಳಿಂದಲೂ ಶಿಕ್ಷಣತಜ್ಞರು ಪ್ರಜಾತಂತ್ರದ ಸಂರಕ್ಷಣೆ ಮಾಡಲು ಹೆಣಗಬೇಕು.

ಸ್ವಾತಂತ್ರ್ಯದ ಸಿದ್ಧಿಯಾಗಿ, ಪ್ರಜಾತಂತ್ರಾತ್ಮಕ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿರುವ ಈ ಸಂಧಿಯಲ್ಲಿ ನಮ್ಮ ಪಾಲಿಗೆ ಬಂದ ಮಹಾಭಾರಗಳನ್ನು ಹೊರಲು ನಮ್ಮ ಬೌದ್ಧಿಕ ನೈತಿಕ ಯೋಗ್ಯತೆಗಳೆರಡೂ ಸಾಲದಾಗಿವೆ. ರಾಜಕೀಯ ಪ್ರಭಾವವನ್ನೂ ಅಧಿಕಾರವನ್ನೂ ಸಂಪಾದಿಸಬೇಕಾದರೆ ದೇಶದ ಸತ್-ಅಸತ್ ಇವೆರಡೂ ಸತ್ವಗಳು ಜನತೆಯ ಮತಗಳನ್ನು ದೊರಕಿಸಿಕೊಳ್ಳಬೇಕಾಗುತ್ತದೆ. ಇದಕ್ಕೆ ಎರಡು ಹಾದಿ: ಎಡೆಬಿಡದ ನಿಃಸ್ವಾರ್ಥ ಸೇವೆಯಿಂದ ಜನರ ಲೌಕಿಕ ಹಾಗು ಸಾಂಸ್ಕೃತಿಕ ಮಟ್ಟವನ್ನು ಏರಿಸುವುದೊಂದು; ಅವರ ಅಜ್ಞಾನವನ್ನೂ ಅವರ ಬೆನ್ನಲ್ಲೇ ಇರುವ ರಾಗ ದ್ವೇಷಗಳನ್ನೂ ಕೆದುಕುವದು ಇನ್ನೊಂದು. ಮೊದಲನೆಯದು ಗುಡ್ಡ ಹತ್ತಿದಂತೆ ಕಠಿಣವಾದ ಕೆಲಸ. ಕೊಡಲು ಹೊರತು ಕಸಿದುಕೊಳ್ಳಲು ಆತುರವಿಲ್ಲದ ಸಾತ್ವಿಕರು ಮಾತ್ರ ಈ ದಾರಿಯನ್ನಾರಿಸಿಕೊಳ್ಳುವರು. ಎರಡನೆಯದು ಇಳಿಯುವ ಸುಲಭ ಮಾರ್ಗ. ಓಟವೂ ಹೆಚ್ಚು. ಪ್ರಜಾತಂತ್ರದಲ್ಲಿ ಇವೆರಡು ಬಗೆಯ ಸತ್ವಗಳ ಮೇಲಾಟ ಯಾವಾಗಲೂ ನಡೆಯುತಿರುತ್ತದೆ. ಅವುಗಳಲ್ಲಿ ಕೊನೆಗೆ ಯಾವುದು ಗೆಲ್ಲುವದೋ ಅದೇ ಆ ಪ್ರಜಾತಂತ್ರದ ಹಣೆಬರಹವನ್ನು ನಿರ್ಧರಿಸುವದು.

ಧ್ಯೇಯವೇನು


ವಯಸ್ಕರ ಇಲ್ಲವೆ ಪ್ರೌಢರ ಶಿಕ್ಷಣದ ಧ್ಯೇಯಗಳಲ್ಲಿ ಜನರ ವಿಮರ್ಶಶಕ್ತಿಯನ್ನು ತೀಕ್ಷ್ಣವಾಗಿ ಮಾಡುವದೇ ಮುಖ್ಯವಾದುದು. ಸ್ವಾರ್ಥಿಗಳಾರು ನಿಜವಾದ ಜನಸೇವಕರಾರು, ಮಾನವನ ಕೀಳು ಪ್ರವೃತ್ತಿಗಳನ್ನು ಕೆಣಕಿ ದ್ವೇಷಾಂಧತೆಯನ್ನು ಉದ್ರೇಕಿಸುವವರಾರು ಉನ್ನತ ಭಾವನೆಗಳನ್ನು ಜಾಗ್ರತಗೊಳಿಸಿ ಸಾತ್ವಿಕತೆ, ಸತ್ಯಗಳಿಗೆ ಪ್ರೇರಣೆ ಕೊಡುವವರಾರು ಎಂಬದನ್ನು ಒರೆದು ನೋಡಬಲ್ಲ ಶಕ್ತಿಯನ್ನು ಅವರಲ್ಲಿ ಬೆಳೆಸಬೇಕು. ಇದೊಂದು ದೊಡ್ಡ ಸಮಸ್ಯೆಯು. ಏಕೆಂದರೆ ಜನಜಂಗುಳಿಯೊಡನೆ ಸಂಪರ್ಕ ಬೆಳೆಸುವ ಇಂದಿನ ಹೊಸ ಪ್ರಬಲ ಸಾಧನಗಳು ಸ್ವತಂತ್ರ ವಿಚಾರಶಕ್ತಿಯನ್ನು ಕೊಚ್ಚಿಕೊಂಡೊಯ್ದು ಸಾವಿರಾರು ಜನರಲ್ಲಿ ತಮಗೆ ಬೇಕಾದಂತೆ ಒಂದೇ ಬಗೆಯ ವಿಚಾರಧಾರೆಯನ್ನು ನೆಟ್ಟು ಬೆಳೆಸಲು ಸ್ವಾರ್ಥಿಗಳಿಗೆ ಅನುಕೂಲ ಮಾಡಿಕೊಡಬಹುದು.

ಯುದ್ಧದಿಂದ ಮತ್ತು ಅದರ ಪರಿಣಾಮಗಳಿಂದ, ಸ್ವಾತಂತ್ರ್ಯ ಮತ್ತು ದೇಶ ವಿಭಜನೆಯಿಂದ, ಉದ್ಭವಿಸಿದ ಸಮಸ್ಯೆಗಳನ್ನು ಎಣಿಸಿದರೆ ನಾವು ಯೋಜಿಸಿ ನಮ್ಮ ಕೇಂದ್ರಗಳಲ್ಲಿ ಕೊಡುತ್ತ ಬಂದಿರುವ ವಯಸ್ಕ ಶಿಕ್ಷಣ ಎಷ್ಟು ಅಪರ್ಯಾಪ್ತ! ನಮ್ಮ ವಯಸ್ಕ ಶಿಕ್ಷಣಕೇಂದ್ರಗಳು ಮಬ್ಬು ಮಬ್ಬಾದ, ನಿರ್ವಿಣ್ಣವಾದ, ಎಷ್ಟೋ ವೇಳೆ ಪೂರ್ಣ ಕತ್ತಲು ಮುಸುಕಿರುವ ಸ್ಥಳಗಳು. ಅಲ್ಲಿ ಆಯಾಸಗೊಂಡ, ಅಸಮರ್ಥ ಶಿಕ್ಷಕರು ಅಲ್ಪ ಪ್ರತಿಫಲಕ್ಕಾಗಿ,—ಕೆಲವೊಮ್ಮೆ ಪ್ರತಿಫಲವೇ ಇಲ್ಲದೆ,—ಕಲಿಯುವ ಮನಸಿಲ್ಲದಿದ್ದರೂ ದಾಕ್ಷಿಣ್ಯ ಮುರಿಯಲಾರದೆ ಅಲ್ಲಿಗೆ ಬಂದ ಪ್ರೌಢರಿಗೆ ಕಾಗುಣಿತ ಕಲಿಸಲು ಹೆಣಗುತ್ತಾರೆ. ಅವರೆಲ್ಲರೂ ಓದು ಬರಹ ಕಲಿತರೆಂದೇ ಇಟ್ಟುಕೊಂಡರೂ ದೇಶಕ್ಕೇನು ಬಂದಂತಾಯಿತು? ಅದರಿಂದ ಪುರಿವೋಸೆಯ ಮುಂದಾಳುಗಳ ಪತ್ರ ಪತ್ರಿಕೆಗಳಿಗೂ ಭಾಷಣ ಘೋಷಣೆಗಳಿಗೂ ಇನ್ನಷ್ಟು ಮೊದ್ದು ಪ್ರಾಣಿಗಳನ್ನು ಬಲಿ ಕೊಟ್ಟಂತಾಗುವದಲ್ಲದೆ ಬೇರೆ ಫಲವಿಲ್ಲ. ಆದುದರಿಂದ ವಯಸ್ಕ ಶಿಕ್ಷಣವನ್ನು ನಾವು ಬೇರೆಯೆ ಕ್ರಾಂತಿಕಾರಿ ದೃಷ್ಟಿಯಿಂದ ವಿಚಾರಿಸಬೇಕು.

ಎರಡು ಹೊಸ ಗುಂಪುಗಳು

ನಾವು ವಯಸ್ಕರ ಶಿಕ್ಷಣದ ಯೋಜನೆ ಮಾಡುವಾಗ ಎರಡು ಹೊಸ ಗುಂಪುಗಳ ಕಡೆಗೆ ವಿಶೇಷ ಲಕ್ಷ್ಯ ಕೊಡಬೇಕು. ಭಯಾನಕ ಯಾತನೆಗಳನ್ನು ಅನುಭವಿಸಿ ಅದರ ಪರಿಣಾಮವಾಗಿ ಕಟುಮನಸ್ಕರಾದ ನಿರಾಶ್ರಿತರು; ಮತ್ತು ಮನುಷ್ಯ ಪ್ರಾಣಿಗಳನ್ನೂ ಮಾನವತೆಯ ಮೃದುತರವಾದ ಅಂಶಗಳನ್ನೂ ಕ್ಷುಪದಾರ್ಥಗಳೆಂದು ಬಗೆಯಲು ಕಲಿತ ಹಿಂದಿನ ಸೈನಿಕರು. ನಮ್ಮ ಸ್ವಾತಂತ್ರ್ಯೋದಯ ಮುಹೂರ್ತವನ್ನು ಹೇಯ ಅಮಾನುಷ ಅತ್ಯಾಚಾರಗಳು ಹುಳಿಗೆಡಿಸಿಬಿಟ್ಟವು. ಅವುಗಳಲ್ಲಿ ಎಲ್ಲ ಜಾತಿಸಂಘಗಳ ಜನರೂ ಭಾಗವಹಿಸಿದ್ದರು. ಇಂಥ ಅತ್ಯಾಚಾರಗಳು ಜರುಗಿದ್ದು ಅದರಿಂದ ಲಕ್ಷೋಪಲಕ್ಷ ಜನರ ಮನಸ್ಸಿನ ಮೇಲೆ ಆಳವಾದ ಗಾಯದ ಕಲೆ ಉಳಿದದ್ದು ಶಿಕ್ಷಣಶಾಸ್ತ್ರಜ್ಞರಿಗೆ ಅರ್ಥವತ್ತಾದ ವಿಷಯಗಳಾಗಿವೆ. ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿ ಹಾಕಿದ ಸಂಗತಿಯೆಂದರೆ, ಇತಿಹಾಸದಲ್ಲಿಯೆ ಅತ್ಯಂತ ಭಯಾನಕವೆನಿಸಿದ ಎರಡನೆಯ ಯುದ್ಧ. ಇಂಥ ಯುದ್ಧವಾಗಲು ಅವಕಾಶ ಕೊಡುವ ಜಗತ್ತು, ಕೋಟ್ಯಂತರ ಹಣವನ್ನು ನೀರು ಪಾಲು ಮಾಡುವ ಒಕ ನರಹತ್ಯೆಯೇ ದೇಶಭಕ್ತಿಯು, ಜನಸೇವೆಯು ಅತ್ಯಂತ ಘನತರವಾದ ಲಕ್ಷಣವೆಂಬ ಭಾವನೆಯನ್ನು ಜನರ ಮನಸ್ಸಿನಲ್ಲಿ ಬೇರೂರಿಸಲು ಪ್ರಚಾರ ಮಾಡುವ ಜಗತ್ತು, ಹಿಂಸೆಯನ್ನು ಧರ್ಮವೆಂದು ಪೂಜಿಸಿ ಅದು

— ೧೩ನೆಯ ಪುಟಕ್ಕೆ



ಸರ್ ಸಿ. ವಿ. ರಾಮನ್ನರು— ಇವರು ಮೊನ್ನೆ ಪ್ಯಾರಿಸ್ಸಿನಲ್ಲಿ ನಡೆದ ವಿಜ್ಞಾನ ಪರಿಷತ್ತಿನಲ್ಲಿ ವಜ್ರದ ಬಗ್ಗೆ ಮಾಡಿದ ಸಂಶೋಧನವನ್ನು ವಿವರಿಸಿ ಅದಕ್ಕಾಗಿ ಜಾಗತಿಕ ವಿಜ್ಞಾನಿಗಳ ಮನ್ನಣೆಯನ್ನು ಪಡೆದರು.

ಕಳ್ಳ ಪೇಟೆಗಾರರ ವೇಷದಲ್ಲಿ ಪೋಲೀಸ ಅಧಿಕಾರಿಗಳು



ಕೆಲದಿನ ಹಿಂದೆ ವೇಷಾಂತರಿಸಿ ಲಂಚ ನಿರ್ಮೂಲನ ಶಾಖೆಯ ಅಧಿಕಾರಿಗಳು ನಂಬರ ಪ್ಲೇಟ ಹಾಗೂ ದೀಪವಿಲ್ಲದೆ ಬೆಳಗಾವಿ ಹುಬ್ಬಳ್ಳಿಗಳ ನಡುವೆ ಗೂಡ್ಸ ಗಾಡಿಯನ್ನು ಸಾಗಿಸುವಾಗ ಲಂಚ ಸ್ವೀಕರಿಸಿದ ಹಲವು ಪೋಲೀಸ ಕಾನ್‌ಸ್ಟೇಬಲರನ್ನು ಹಿಡಿದರು. ಆಗ ಗೂಡ್ಸ ಗಾಡಿ ಸಹಿತ ಪೋಲೀಸ ಅಧಿಕಾರಿಗಳ ಛಾಯಾಚಿತ್ರ ತೆಗೆದದ್ದು.

ನಿಂತವರು:— (ಎಡದಿಂದ ಬಲಕ್ಕೆ)— (೧) ಎಸ್. ಜಿ. ಕಲ್ಲೂರ (ಎಸ್. ಆಯ.), (೨) ಎ. ಸಿ. ಶೇಖ (ಸಿ. ಆಯ), (೩) ಜಿ. ಬಿ. ಗುಪ್ತ (ಡಿವಾಯ. ಎಸ್. ಪಿ.), (೪) ಪಿ. ವಿ. ನಾಯಿಕ (ಎಸ್. ಆಯ.), (೫) ಮತ್ತು (೬) ಇಬ್ಬರು ಪಂಚರು, (೭) ಪೂರ (ಎಚ್. ಸಿ.), (೮) ಮಂಗಳವೇಢೆ (ಎಚ್. ಸಿ.).
ಕುಳಿತವರು—ಪೋಲಿಸ ಸಿಪಾಯಿ, ಜಯಪಾಲ, ಶಂಭು, ವಸ್ತ್ರದ, ಚಿಂತು.

ಜನಮತ

ವಿವಿಧ ಪ್ರಪಂಚ

ಕು ಕ್ಲಕ್ಸ್ ಕ್ಲ್ಯಾನ್



ನಾಯಿಕೆಮ್ಮಿಗೆ ಮದ್ದು

(Aureosporin)

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ. ೧೦

ಹೈದರಾಬಾದ ಸಮಸ್ಯೆಯ ಅನಿಶ್ಚಿತತೆ, ಕಾಶ್ಮೀರದಲ್ಲಿ ಪಾಕಿಸ್ತಾನ ಸೈನಿಕರು ಯುದ್ಧಕ್ಕೆ ಬಂದಿರುವರೆಂಬ ಸುದ್ದಿ, ಜವಳಿ ನಿಯಂತ್ರಣ ತಿರುಗಿ ಬರಬಹುದೆಂಬ ಭಯ ಇತ್ಯಾದಿ ನಾನಾ ಸಂಗತಿಗಳಿಂದ ಹಿಂದಿನವಾರ ಶೇರ ಪೇಟೆಯಲ್ಲಿ ಧಾರಣೆ ಇಳಿಮುಖವಾಗಿತ್ತು. ಆದರೆ ಶನಿವಾರದ ಸುಮಾರಿಗೆ ಸ್ವಲ್ಪ ಸುಧಾರಣೆಯಾಯಿತು. ಆದರೆ ಹೈದರಾಬಾದ ಮಾತುಕತೆಗಳು ಮುರಿದುಬಿದ್ದುದರಿಂದ ಇನ್ನು ತಿರುಗಿ ಬೆಲೆಗಳು ಇಳಿಯುವಂತೆ ಕಾಣುತ್ತದೆ. ಇಂದು ಶೇರಪೇಟೆ ಮುಚ್ಚಿತ್ತು. ಆದುದರಿಂದ ಕೆಳಗೆ ಕೊಟ್ಟ ತಾ ೮ ರ ಬೆಲೆಗಳು ಪೇಟೆ ತೆರೆಯುವ ಕಾಲಕ್ಕೆ ನಿಲ್ಲುವದು ಸಂಶಯಕರ.

ಜವಳಿ

ಅಹಮದಾಬಾದ ಅಡ್ವಾನ್ಸ	೨೭೫.೦-೦
ಬಾಂಬೆ ಡಾಯಿಂಗ್	೧೧೩೦-೦-೦
ಸೆಂಟ್ರಲ ಇಂಡಿಯಾ	೩೧೮-೦-೦
ಸೆಂಚುರಿ	೫೧೨-೮-೦
ಗೋಕಾಕ	೩೨೫-೦-೦
ಕೋಹಿನುರು	೬೪೫-೦-೦
ಫಿನಿಕ್ಸ	೪೫೭-೮-೦
ಸ್ವದೇಶಿ	೬೪೦-೮-೦

ಇತರ

ಬೇಲಾಪುರ ಸಕ್ಕರೆ	೩೪೫-೮-೦
ಬಾಂಬೇ ಬರ್ಮಾ	೪೪೬-೪-೦
ಟಾಟಾ ಸ್ಟೀಲ ಡೆಫರ್ಡ	೧೬೮೭-೮-೦
ಇಂಡಿಯನ್ ಅಯರ್ನ	೨೩೮-೦-೦
ಸಿಂಧ್ಯಾ ಸ್ಟೀಮ	೨೮-೧೦-೦
ಅಸೊ. ಸಿಮೆಂಟ್ಸ	೧೭೪-೪-೦
ಸೆಂಟ್ರಲ ಬ್ಯಾಂಕ	೮೬-೮-೦
ಇಂಪೀರಿಯಲ್ ಬ್ಯಾಂಕ ಪೂರ್ಣ	೨೦೬೮-೧೨-೦
ಇಂಡಿಯನ್ ಬ್ಯಾಂಕ	೨೨೩-೮-೦

ಚಿನ್ನ--ಬೆಳ್ಳಿ

ಚಿನ್ನ ಬೆಳ್ಳಿಗಳ ಬೆಲೆ ಸುಧಾರಿಸಿವೆ.

ಚಿನ್ನ ತಯಾರಿ	೧೧೫-೧೪-೦
,, ವಾಯದಾ	೧೧೫-೧೨-೦
ಸಾವರಿನ್	೭೫-೪-೦
ಬೆಳ್ಳಿ ತಯಾರಿ	೧೭೧-೪-೦

ಅರಳೆ

ಅರಳೆ ಪೇಟೆಯಲ್ಲೂ ದರಗಳು ಇಳಿದು ಹೋಗಿ ಮತ್ತೆ ಸುಧಾರಿಸಿದವು. ಜುಲೈ ವಾಯಿದೆ ೭೦೦ ರ ವರೆಗೂ ಇಳಿದಿತ್ತು ಮುಂದೆ ಸುಧಾರಿಸಿತು. ತಾ ೯ ರ ಕೊನೆಯ ದರಗಳಂತಿವೆ.

ಜುಲೈ	೭೨೬-೦-೦
ಸೆಪ್ಟೆಂಬರ	೭೧೮-೦-೦

ಎಣ್ಣೆ ಕಾಳು

ಶೇಂಗಾ	೧೭೧-೪-೦
,, (ಹೊಸ)	೦೬೮-೧೨-೦
ಅಗಸಿ	೨೭-೧೨-೦

ಶಿವಮೊಗ್ಗ

ತಾ. ೧೦

ದೇಶಾವರ ನಂ. ೧ ಮಣ ೧ ಕ್ಕೆ	೩೪-೩೭
,, ,, ೨	೩೦-೩೪
ರಾಜಾ ಅಲವು	೩೨-೩೫
ತೊರೆಸಾಲು ,,	೨೭-೩೨
ವಂತಿ ಬೆಟ್ಟೆ	೨೨-೨೪
ಬೆಟ್ಟೆ	೧೯-೨೨
ಸುಲಿ	೩೩-೩೬

ಹುಬ್ಬಳ್ಳಿ

ಜಯವಂತ ಹತ್ತಿ	೧	೪೬೦-೪೮೫
,,	೨	೪೩೦-೪೫೦
,,	೩	೩೭೫-೪೨೦
ಅಸಲಂಡ ಹತ್ತಿ	೧	೪೨೫-೪೪೦
,,	೨	೪೨೦-೩೩೫
ಜಿನ		೩೨೫-೩೪೫
ಅ. ಡಬಲಧೋಲ		೩೦೦-೩೧೫
ಸಾ. ಜಿನ		೨೯೦-೩೦೦
ಜ. ಹತ್ತಿ ಕಾಳು		೮ ಪೌಂ.
ಅ. ಹತ್ತಿಕಾಳು		೮॥ ,,

ಹತ್ತಿ ಅರಳಿ ವ್ಯಾಪಾರ ವಿಶೇಷವಿಲ್ಲ ಮುಂಬೈಯಲ್ಲಿ ತಯಾರಿ ಮಾಲಿಗೆ ಗಿರಾಕಿ ಇಲ್ಲದ್ದರಿಂದ ಇಲ್ಲಿಯೂ ಗಿರಾಕಿಗಳು ಇಲ್ಲ.

ನಾಲ್ಕು ಮಾತು — ರಂಗನಾಥ ದಿವಾಕರ

೧ ಕಾಂಗ್ರೆಸ್ಸಿನಲ್ಲಿ ಒಳಜಗಳಗಳು

ಅಧಿಕಾರ ಹಾಗೂ ಜಗಳ ಇವೆರಡೂ ಅಣ್ಣ ತಮ್ಮಂದಿರಿದ್ದಂತೆ. ಈ ಜೋಡು ಪುರಾತನ ಕಾಲದ್ದು. ಕಾಂಗ್ರೆಸ್ ಸಂಸ್ಥೆಯು ಪ್ರಾಂತಗಳಲ್ಲಿ ಮೊದಲು ೧೯೩೭ ರಲ್ಲಿ ಅಧಿಕಾರ ಸ್ಥಾನಗಳನ್ನು ಆಕ್ರಮಿಸಿತು ಅಂದಿನಿಂದ ಕಾಂಗ್ರೆಸ್ಸಿನಲ್ಲಿ ಜಗಳಗಳು ಹೆಚ್ಚಾದವು. ೧೯೩೯ ರಲ್ಲಿ ಪುನಃ ಕಾಂಗ್ರೆಸ್ಸು ಅಧಿಕಾರತ್ಯಾಗಮಾಡಿತು. ಆಗ ಜಗಳಗಳು ಕಡಿಮೆಯಾಗಿ ಬ್ರಿಟಿಶರೊಡನೆ ಹೋರಾಟವನ್ನು ಜೋರಿನಿಂದ ನಡೆಸಲು ಕಾಂಗ್ರೆಸ್ಸಿಗರು ಉದ್ಯುಕ್ತರಾದರು. ಈಗ ಬ್ರಿಟಿಶರಂತೂ ಇಲ್ಲಿಂದ ಪಲಾಯನ ಹೇಳಿರುವರು. ಕಾಂಗ್ರೆಸ್ಸು ಏಕಮೇವಾದ್ವಿತೀಯವಾಗಿ ಆಸೇತು ಹಿಮಾಚಲ ಅಧಿಕಾರಾರೂಢವಾಗಿರುವದು. ಆದುದರಿಂದ ಕಾಂಗ್ರೆಸ್ಸಿಗರಲ್ಲಿ ಜಗಳಗಳು ಹೆಚ್ಚುತ್ತಲಿವೆ. ಸಮಾಜವಾದಿಗಳು (ಸೋಶಾಲಿಸ್ಟರು), ಸಮತಾವಾದಿಗಳು (ಕಮ್ಯುನಿಸ್ಟರು), ತಮ್ಮ ತತ್ವಪ್ರಣಾಲಿಯನ್ನೆ ಬೇರೆ ಇಟ್ಟುಕೊಂಡಿರುವದರಿಂದ ಅವರು ಕಾಂಗ್ರೆಸ್ಸಿಗರೊಡನೆ ಜಗಳಾಡುವದು ಸ್ವಾಭಾವಿಕ. ಆದರೆ ಒಂದೇ ತತ್ವಪ್ರಣಾಲಿ ಇದ್ದ ಕಾಂಗ್ರೆಸ್ಸಿಗರು ತಮ್ಮ ತಮ್ಮೊಳಗೆ ವೈಯಕ್ತಿಕ, ಜಾತಿಮೂಲಕ ಇತ್ಯಾದಿ ಗುಂಪುಗಳನ್ನು ಕಟ್ಟಿಕೊಂಡು ಬಡಿದಾಡುವದೇಕೆ? ತಮ್ಮದೇ ಆಗಿರುವ ಕಾಂಗ್ರೆಸ್ಸಿನ ಶಕ್ತಿಯನ್ನು ಕುಗ್ಗಿಸುವದೇಕೆ? ಈ ಪ್ರಶ್ನೆಗೆ ಯಾರೂ ಉತ್ತರ ಕೊಡುವದು ಸಾಧ್ಯವಿಲ್ಲ. ಸಂಪತ್ತಿದ್ದಲ್ಲಿ, ಅಧಿಕಾರವಿದ್ದಲ್ಲಿ ಅದನ್ನು ಹಸ್ತಗತ ಮಾಡಿಕೊಳ್ಳುವ ಉದ್ದೇಶದಿಂದ ಅಣ್ಣ ತಮ್ಮಂದಿರಲ್ಲಿ ಸಹ ಜಗಳಗಳಾಗುವದು ಸ್ವಾಭಾವಿಕ ಎಂದು ಇಷ್ಟೇ ಹೇಳಬಹುದಲ್ಲದೆ ಹೆಚ್ಚು ಹೇಳುವದು ಸಾಧ್ಯವಿಲ್ಲ. ಅರ್ಥಾತ್ ಇದೊಂದು ಮನುಷ್ಯಸ್ವಭಾವ ಎಂದು ಹೇಳುವದು ಉಚಿತ.

* * *

ಆದರೆ ಸ್ವಭಾವ ಅಂದಾಕ್ಷಣಕ್ಕೆ ನಿರರ್ಗಲವಾಗಿ ಅದನ್ನು ಸಾಗಗೊಡಬೇಕು ಎಂದು ಅರ್ಥವಾಗುವದಿಲ್ಲ. ಆಹಾರ, ನಿದ್ರೆ, ಭಯ ಮುಂತಾದವುಗಳೆಲ್ಲಾ ಸ್ವಭಾವಗಳೇ. ಆದರೆ ಮನುಷ್ಯನು ಅವುಗಳನೆಲ್ಲ ಸಂಯಮಿಸಲು, ನಿಯಮಿಸಲು ಪ್ರಯತ್ನಪಟ್ಟು ಜೀವನದಲ್ಲಿ ಒಂದು ಬಗೆಯ ವ್ಯವಸ್ಥೆಯನ್ನು ಸ್ಥಾಪಿಸಲು ಯತ್ನಿಸುವನು. ಎಷ್ಟೋ ಮಟ್ಟಿಗೆ ಅದರಲ್ಲಿ ಯಶಸ್ವಿಯಾಗುವನು. ಜಗಳಗಳ ವಿಷಯದಲ್ಲಿಯೂ ಅದೇ ರೀತಿ ಪ್ರಯತ್ನಿಸುವದು ಅವಶ್ಯ. ಕೆಲವು ನೀತಿ ನಿಯಮಗಳನ್ನು ಎಲ್ಲರೂ ಅನುಸರಿಸಿದರೆ ಜಗಳಗಳು ಕೂಡ ಅಷ್ಟೊಂದು ತೊಂದರೆ ಕೊಡಲಾರವು. ಜೀವನವನ್ನು ವಿಷಮಯ ಮಾಡಲಾರವು. ಸೋಲು ಗೆಲವುಗಳು ಕೂಡ ಮನಸಿಗೆ ಅಷ್ಟೊಂದು ತಾಪದಾಯಕವಾಗಲಾರವು ಈ ಜಗಳಗಳನ್ನು ನಡೆಸುವದರಲ್ಲಿಯೂ ಒಂದು 'ಧರ್ಮ' ಎಂಬುದು ಇರಬಲ್ಲದು ಕ್ಷತ್ರಿಯರು ಕ್ಷಾತ್ರಧರ್ಮ ಎಂಬುದನ್ನು ಮುಂದಿಟ್ಟುಕೊಂಡೆ ಹೋರಾಡಬೇಕೆಂಬ ನಿಯಮವಿದೆ. ಹಾಗೆಯೆ ನಿಯಮಬದ್ಧವಾಗಿ ಜಗಳಾಡಿ ಸೋಲು ಗೆಲವುಗಳತ್ತ ಆಟಗಾರಿಕೆಯ ದೃಷ್ಟಿಯಿಂದ (ಸ್ಪೋರ್ಟ್ಸ್‌ಮನ್) ನೋಡಿ ಮುಂದೆ ಸಾಗಿದರೆ ಜಗಳಗಳು ಕೂಡ ಆಯಾ ಸಮಾಜವನ್ನಾಗಲಿ ಆಯಾ ಸಂಸ್ಥೆಯನ್ನಾಗಲಿ ಆರೋಗ್ಯಸ್ಥಿತಿಯಲ್ಲಿಡಬಲ್ಲವು.

* * *

ಈ ವಿಷಯದಲ್ಲಿ ಕಾಂಗ್ರೆಸ್ಸಿಗೆ ವಿರುದ್ಧವಿದ್ದ ಪಕ್ಷಗಳ ಮಾತನ್ನು ಸದ್ಯಕ್ಕೆ ಒತ್ತಟ್ಟಿಗಿಡುವಾ. ಕಾಂಗ್ರೆಸ್ಸಿನಲ್ಲಿಯ ಒಳಜಗಳಗಳನ್ನಷ್ಟೆ ಪರಿಶೀಲಿಸಿದರೂ ನಾವು ಇತರರಷ್ಟೇ ಕೆಳಗಿನ ಮಟ್ಟಕ್ಕಿಳಿದು ಹೀನತನದಿಂದ ಜಗಳಾಡುತ್ತಿರುವೆವೆಂಬುದು ಕಂಡುಬರುವುದು. ಇದು ಅಸಹ್ಯವಾದ ಮಾತು. ಪ್ರತಿ ಪ್ರಾಂತದಲ್ಲಿಯೂ ಮಂತ್ರಿ ಮಂಡಳ ಹಾಗೂ ಕಾಂಗ್ರೆಸ ಕಮಿಟಿ ಇವುಗಳ ನಡುವೆ ಜಗಳಗಳು ಕಂಡುಬರುವವು. ಅದೇ ರೀತಿ ಒಂದೇ ಪಕ್ಷದ ಕಾಂಗ್ರೆಸ್ಸಿಗರಲ್ಲಿಯೂ ಜಗಳಗಳು ಇವೆ. ಅವು ವಿಕೋಪಕ್ಕೆ ಹೋದಾಗ ಮಾತ್ರ ಬಹಿರಂಗವಾಗಿ ವ್ಯಕ್ತವಾಗುವವು. ಅಲ್ಲಿಯ ವರೆಗೆ ಒಳಗಿಂದೊಳಗೆ ಜಗಳಗಳು ನಡೆದೇ ನಡೆಯುವವು. ಅವುಗಳನ್ನು ತಡೆಯುವದು ಕಠಿಣವಾದರೂ ಎಲ್ಲರೂ ನೀತಿಯ ವಿಶಿಷ್ಟ ಮಟ್ಟವನ್ನು ಬಿಟ್ಟು ಕೆಳಗಿಳಿಯದಿದ್ದರೆ, ಅಹಿಂಸೆಯ ತತ್ವವನ್ನು ಅಮಲಿನಲ್ಲಿ ತಂದರೆ, ಬಹುಮತಕ್ಕೆ ಯೋಗ್ಯವಾದ ಮಾನಕೊಟ್ಟರೆ, ಕಾಂಗ್ರೆಸ್ಸಿನ ಘಟನೆಯತ್ತ ಒಂದು ಕಾಯದೆಯ ದೃಷ್ಟಿಯಿಂದ ನೋಡಿ ಅದನ್ನು ತಪ್ಪಿಸಲು ಪ್ರಯತ್ನಮಾಡದೆ ಹೋದರೆ ಅವು ಎಷ್ಟೋ ಹಿಡಿತಕ್ಕೆ ಬರುವವು. ಇಲ್ಲದಿದ್ದರೆ ಎಲ್ಲೆಲ್ಲಿಯೂ ಅನವಸ್ಥೆ ಉಂಟಾಗಲು ತಡವಾಗಲಿಕ್ಕಿಲ್ಲ.

* * *

ಈಗ ಯುಕ್ತಪ್ರಾಂತದಲ್ಲಿ ಒಂದು ಸಾವಿರ ಜನರು ಶಿಸ್ತುಭಂಗ ಮಾಡಿರುವರೆಂದು ಅವರ ಮೇಲೆ ಆರೋಪನಿಡಲಾಗಿದೆ. ಅವರಿಗೆ ಸವಾಲು ಕೇಳಲಾಗಿದೆ! ಒಂದೊಪ್ಪತ್ತು ಶಿಸ್ತುಭಂಗದ ಕ್ರಮ ತೆಗೆದುಕೊಂಡರೆ ಮತ್ತೆ ಅಪೀಲು ಮುಂತಾದವುಗಳು ನಡೆದರೆ ಎಷ್ಟು ಕೋರ್ಟು ಕಚೇರಿಗಳು ಸಾಲಬಲ್ಲವು! ಇದು ಸಾಧ್ಯವಾದ ಮಾತಲ್ಲ. ಮೇಲಾಗಿ ಕಾಂಗ್ರೆಸ್ ಪಕ್ಷದ ಕೆಲಸವು ಈ ವರೆಗೆ ಕೋರ್ಟು ಕಚೇರಿ, ಸಾಕ್ಷಿ ಪುರಾವೆ, ಇವುಗಳ ಆಧಾರದಿಂದ ನಡೆದಿಲ್ಲ. ಘಟನೆಯ ಬಲದಿಂದಲೂ ನಡೆದಿಲ್ಲ. ಧ್ಯೇಯನಿಷ್ಠೆ, ತ್ಯಾಗಬುದ್ಧಿ, ನೀತಿ ಬಂಧನ ಇವುಗಳ ಮೂಲಕವೆ ನಡೆದಿದೆ ಎಂದು ಧಾರಾಳವಾಗಿ ಹೇಳಬಹುದು. ಆದುದರಿಂದ ಅವುಗಳ ಪ್ರತಿಷ್ಠಾಪನೆಯಿಂದಲೆ ಕಾಂಗ್ರೆಸ್ಸು ಬಲಗೊಳ್ಳಬಲ್ಲದು. ಇಲ್ಲದಿದ್ದರೆ ನಷ್ಟವಾಗಿ ಹೋಗುವದು.

೨. ವಿಧಾಯಕ ಕಾರ್ಯಕರ್ತರು

ಇದೇ ತಿಂಗಳ ಕೊನೆಯ ವಾರದಲ್ಲಿ ಕರ್ನಾಟಕ ವಿಧಾಯಕ ಕಾರ್ಯಕರ್ತರ ಸಮ್ಮೇಲನವು ಹುಬ್ಬಳ್ಳಿಯಲ್ಲಿ ಜರುಗಲಿದೆ. ಧೀರೇಂದ್ರ ಮುಜುಮುದಾರರು ಅಧ್ಯಕ್ಷತೆ ವಹಿಸುವರು. ಅಚಾರ್ಯ ಕೃಪಾಲಾನಿಯವರೂ ಆಮಂತ್ರಿಸಲಾಗಿರುವರು. ಅವರು ಈಗಾಗಲೇ ಯುಕ್ತಪ್ರಾಂತದಲ್ಲಿ ಮಾತಾಡುವಾಗ ತಮ್ಮ ಖಂಡತುಂಡ ವಿಚಾರಗಳನ್ನು ಪ್ರಕಟಗೊಳಿಸಿರುವರು. ಈ ಸಮ್ಮೇಲನವು ಯಶಸ್ವಿಯಾಗುವದೆಂಬಲ್ಲಿ ಸಂಶಯವಿಲ್ಲ.

* * *

ಆದರೆ ವಿಧಾಯಕ ಕಾರ್ಯಕರ್ತರ ವ್ಯಾಖ್ಯೆ ಮಾಡುವದು ಬಹಳ ಕಠಿಣ. ನನ್ನ ದೃಷ್ಟಿಯಿಂದ ವಿಧಾಯಕ ಕಾರ್ಯಕರ್ತೃತ್ವವೆಂಬುದು ಒಂದು ವೃತ್ತಿ. ಕೇವಲ ಆಂದೋಲನ, ಪ್ರಚಾರ, ಮಾತು, ರಾಜಕೀಯ ಅಧಿಕಾರ ನಡೆಸುವ ಹವ್ಯಾಸ ಇವಾವೂ ವಿಧಾಯಕ ಕಾರ್ಯಕರ್ತನಲ್ಲಿ ಇರಲರಿಯವು. ಮುಖ್ಯಲಕ್ಷಣವೇನಂದರೆ, ಪ್ರತ್ಯಕ್ಷ ಜನಸೇವೆಯ ಮುಖಾಂತರ ಸಮಾಜದ ಪ್ರಗತಿಯನ್ನು ಸಾಧಿಸುವ ವೃತ್ತಿ-ಇದೇ ವಿಧಾಯಕ ಕಾರ್ಯಕರ್ತನಲ್ಲಿ ರತಕ್ಕ ಮೂಲ ಗುಣ. ಇದಲ್ಲದೆ ಇನ್ನಾವ ಗುಣಗಳು ಅವನಲ್ಲಿದ್ದರೂ ವ್ಯರ್ಥ. ಇದು ಇದ್ದು ಇತರ ಗುಣಗಳೂ ಬೇಕು: ಸಣ್ಣಾಗಿ ದುಡಿಯುವ ಗುಣ, ವಿವರಗಳಲ್ಲಿ ಸೇರುವ ಗುಣ, ನಮ್ರತೆ, ಪ್ರಸಿದ್ಧಿಯ ಬಗ್ಗೆ ಅನಾಸ್ಥೆ, ಸೇವೆಯಲ್ಲಿಯೆ ಸಮಾಧಾನ ಇವೆಲ್ಲ ಗುಣಗಳು ಅವಶ್ಯವಾದವುಗಳು. ಈ ಗುಣಗಳು ಹಾಗೂ ಈ ವೃತ್ತಿಯ ಪೋಷಣವೆ ಈ ಸಮ್ಮೇಲನದ ಉದ್ದೇಶವು.

* * *

ಇದಲ್ಲದೆ ವಿವಿಧ ವಿಧಾಯಕ ಕಾರ್ಯಗಳಲ್ಲಿ ಅನುಬಂಧನ, ಕಾರ್ಯಕರ್ತರಿಗೆ ಬೇಕಾಗುವ ಸಹಾಯ ಸಂಪತ್ತಿಯನ್ನು ಒದಗಿಸುವ ವ್ಯವಸ್ಥೆ, ಎಲ್ಲ ಕಾರ್ಯಗಳ ವ್ಯವಸ್ಥಿತ ವರದಿ, ಪರಸ್ಪರ ಹೆಚ್ಚು ಪರಿಚಯದ ವ್ಯವಸ್ಥೆ ಇತ್ಯಾದಿಗಳೂ ಈ ಸಮ್ಮೇಲನದ ಇತರ ಉದ್ದೇಶಗಳು ಎಂದು ಹೇಳಿದರೆ ತಪ್ಪಲ್ಲ.

೩. ತ್ಯಾಗ ಯುಗವೊ ಭೋಗ ಯುಗವೊ

ನಾನು ಮೊನ್ನೆ ದೇಹರಾದೂನಕ್ಕೆ ಹೋದಾಗ ಯುಕ್ತ ಪ್ರಾಂತದ ಮಂತ್ರಿಗಳೊಬ್ಬರು ತಮಗೆ ಹೆಂಡತಿ ನಾಲ್ಕು ಮಕ್ಕಳು ಇದ್ದರೂ ತಾವು ಇನ್ನೊಂದು ಲಗ್ನವನ್ನು ಮಾಡಿಕೊಳ್ಳುವವರಿದ್ದಾರೆಂಬ ಮಾತನ್ನು ಕೇಳಿದೆ. ಅವರಿಗೆ ಹುಚ್ಚು ಹಿಡಿದಿದೆ ಏನು ಎಂದು ನಾನು ಪ್ರಶ್ನೆ ಮಾಡಿದೆ. ಹುಚ್ಚೇನು ಹಿಡಿದಿಲ್ಲ. ಆದರೆ ತ್ಯಾಗ ಯುಗ ಹೋಗಿ ಭೋಗಯುಗ ಬಂದಿದೆ ಎಂದು ಆ ಮಂತ್ರಿಗಳು ಅಂದದ್ದನ್ನು ನನಗೆ ನನ್ನ ಸ್ನೇಹಿತರು ಹೇಳಿದರು! ಒಳ್ಳೆ ಜಗಜಟ್ಟಿಗಳೆನಿಸುವ ಅತಿರಥ ಮಹಾರಥ ಕಾಂಗ್ರೆಸ್ಸಿನ ಮುಖಂಡರು ಹಲವರು ಹಾಗೂ ಕಾರ್ಯಕರ್ತರು ತಮ್ಮ ತಮ್ಮ ಸಂಸಾರಗಳತ್ತ ಈಗ ಹೆಚ್ಚು ಲಕ್ಷ ಕೊಡುತ್ತಿರುವರೆಂದು ಜನರು ಹೇಳಲಾರಂಭಿಸಿರುವರು. ಸ್ವಲ್ಪ ಮಟ್ಟಿಗೆ ಅದು ನಿಜವಿದ್ದರೂ ಇರಬಹುದು. ಹಲವರು ಬೇಸತ್ತಿರಬಹುದು. ಆದರೆ ಆ ಬೇಸರಿಕೆಗೆ ತತ್ವದ ಸ್ವರೂಪ ಕೊಟ್ಟು ಭೋಗಯುಗವನ್ನೆ ಆರಂಭಿಸಲಸುವಾದವರನ್ನು ನಾನು ಖಂಡಿಸದೆ ಇರಲಾರೆ. ಈ ಪರಿಸ್ಥಿತಿಯಲ್ಲಿ ಯಾವದೇ ಭೋಗವಾದರೂ ಒಂದು ಶೋಷಣೆಯೆ. ಇಂದು ಸ್ಥಾನದಿಂದ ಬ್ರಿಟಿಶರು ತೊಲಗಿದ್ದಷ್ಟೆ ಆಗಿದೆ ಹೊರತು ಬಡತನ, ಉಪವಾಸ, ವನವಾಸ, ಅಜ್ಞಾನ, ಆರ್ಥಿಕ ಸಾಮಾಜಿಕ ವಿಷಮತೆ ಮುಂತಾದ ದೋಷಗಳು ಅನೇಕ ತುಂಬಿಕೊಂಡಿರುವವು. ಅವುಗಳನ್ನೆಲ್ಲ ತ್ಯಾಗಪೂರ್ವಕವಾಗಿ ಹೋಗಲಾಡಿಸಲು ನಾವು ಯತ್ನಿಸಬೇಕಾದರೆ ಬ್ರಿಟಿಶರನ್ನು ಹೊಡೆದೋಡಿಸಬೇಕೆಂಬ ಪ್ರೇರಣೆ ಎಷ್ಟು ಬಲವತ್ತರವಿತ್ತೊ ಅಷ್ಟೇ ಇದಾದರೂ ಬಲವುಳ್ಳದ್ದಾಗಲಿಕ್ಕೆ ಬೇಕು. ಇಲ್ಲವಿದ್ದರೆ ಕಾಂಗ್ರೆಸ್ಸು ಕಾಂಗ್ರೆಸ್ಸಾಗಿ ಉಳಿಯಲಾರದು. ಆ ಪ್ರೇರಣೆಯುಳ್ಳ ಇತರರು ಈ ಸ್ಥಾನವನ್ನು ಆಕ್ರಮಿಸುವರು.

ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಕಾರ್ಯಕಲಾಪಗಳು

ಮೈಸೂರು ಪ್ರಜಾ ಪ್ರತಿನಿಧಿ ಸಭೆಯಲ್ಲಿ ತಾ. ೫ ರಿಂದ ೯ ರ ವರೆಗೆ ತಿಳಿದು ಬಂದ ಅಂಶ ಹೀಗಿವೆ.

ಸಂಸ್ಥಾನದಲ್ಲಿ ವೈದ್ಯಕೀಯ ಶಾಖೆಯ ಬೆಳೆಸಲಾಗುವದು. ಉಚ್ಚ ಶಿಕ್ಷಣಕ್ಕಾಗಿ ಅಸ್ಸ್ತೀ ಡಾಕ್ಟರರನ್ನು ಪರದೇಶಗಳಿಗೆ ಕಳಿಸಲಾಗಿದೆ.

ಶೈಕ್ಷಣಿಕ ಚಲಚ್ಚಿತ್ರಗಳ ಪ್ರದರ್ಶನ ಏರ್ಪಡಿಸಲಾಗುವದು.

ಸಂಸ್ಥಾನದಲ್ಲಿ ರೇಶ್ಮೆ ಉದ್ದಿಮೆಯನ್ನು ಬೆಳೆಸುವ ಬಗ್ಗೆ ಭಾರತ ಸರಕಾರ ಸಹಾಯ ಕೋರಲಾಗಿದೆ.

ವಿದೇಶಗಳಲ್ಲಿ ಮೈಸೂರಿನ ಚಿನ್ನದ ಮಾರಾಟದ ಮೇಲೆ ನಿರ್ಬಂಧ ಹೇರುವದು ಲಾಭದಾಯಕವಲ್ಲ. ಬ್ರಿಟನ್ನಿನಲ್ಲಿ ಒಂದು ಔನ್ಸಿಗೆ ೧೬೩ ಶಿಲಿಂಗು ಸಿಗುತ್ತವೆ. ಆದರೆ ನಾವು ಅಷ್ಟಕ್ಕೆ ೪೪೩ ಶಿಲಿಂಗು ಕೊಡಬೇಕಾಗುತ್ತದೆ. ಕೋಲಾರದ ಚಿನ್ನದ ಗಣಿಯನ್ನು ಜಂಟಿ ಒಡೆತನಕ್ಕೆ ಒಳಪಡಿಸುವ ಬಗ್ಗೆ ಮಾತುಕತೆ ನಡೆಯುತ್ತಿವೆ.

ಮೈಸೂರು ಬ್ಯಾಂಕಿನ ರಾಷ್ಟ್ರೀಕರಣ ವಿಚಾರವೂ ನಡೆದಿದೆ. ಕಪ್ಪಿನ ಉಕ್ಕುಗಳ ಕಳ್ಳಪೇಟೆ ಹತ್ತಿಕ್ಕಲು ಉಗ್ರ ಉಪಾಯ ಕೈಕೊಳ್ಳಲಾಗಿದೆ.

ಸಂಸ್ಥಾನದಲ್ಲಿ ಹೊಸ ನೀರಾವರಿ ಯೋಜನೆ ಕೈಕೊಳ್ಳುವದು ಅವಶ್ಯವಿದೆ. ೨೫೦ ಲಕ್ಷ ವೆಚ್ಚದ ದಶವಾರ್ಷಿಕ ಯೋಜನೆಯನ್ನು ಕಾರ್ಯರೂಪದಲ್ಲಿ ತರುವ ಬಗ್ಗೆ ಮಾತುಕತೆಗಳು ನಡೆಯುತ್ತಿವೆ.

ಒಕ್ಕಲತನದ ಅಭಿವೃದ್ಧಿ, ರಸ್ತೆಗಳ ವಿಸ್ತರಣೆ ಇವುಗಳ ಕಡೆಗೂ ಸರಕಾರವು ಲಕ್ಷಕೊಡುತ್ತಿದೆ.

ಮೂರನೇ ವರ್ಗದ ರೇಲ್ವೆ ಪ್ರಯಾಣಿಕರಿಗೆ ವೆಚ್ಚದ ಸೌಕರ್ಯಗಳನ್ನು ಕೊಡಲಾಗುವದು.

ರೇಲ್ವೆ ನೌಕರರಿಗಾಗಿ ೩೦ ಲಕ್ಷ ರೂ. ತೆಗೆದಿಡಲಾಗಿದೆ,

ಭಟಕಳ ಬಂದರ ವಶಪಡಿಸಿಕೊಳ್ಳುವ ಬಗ್ಗೆ ಭರದಿಂದ ಪ್ರಯತ್ನ ಸಾಗಿದೆ.

ಮೋಟಾರ ಸಾರಿಗೆಯ ರಾಷ್ಟ್ರೀಕರಣವನ್ನು ಕ್ರಮೇಣ ಜಾರಿಯಲ್ಲಿ ತರಲಾಗುವದು.

ತಾ. ೮ ರಂದು ಸಗೋತ್ರ ವಿವಾಹದ ಗೊತ್ತುವಳಿಯು ೧೧೨ ಅನುಕೂಲ ಮತ್ತು ೬೬ ಪ್ರತಿಕೂಲ ಮತಗಳಿಂದ ಸ್ವೀಕೃತವಾಯಿತು. ೨೪ ಸದಸ್ಯರು ಮತದಾನ ಮಾಡಲಿಲ್ಲ. ಮಿ. ಮಿಡಲ್‌ಟನ್ ಎಂಬವರು ವಿರುದ್ಧ ಮತ ಕೊಟ್ಟರು.

ಚಿತ್ರದುರ್ಗ ಒಳಚರಂಡಿ ಯೋಜನೆಗೆ ಮಂಜೂರಿ ಕೊಡಲಾಗಿದೆ. ಸಾಧನ ಸಾಮಗ್ರಿ ದೊರೆತರೆ ಹಳ್ಳಿಗಳಿಗೆ ವಿದ್ಯುತ್ ಶಕ್ತಿ ಪೂರೈಸುವದು ಸಾಧ್ಯವಾಗುವದು. ಎಂದು ಮಂತ್ರಿ ಚನ್ನಿಗರಾಮಯ್ಯನವರು ಹೇಳಿದರು.

ತಾ. ೯ ರಂದು ಮಾರಾಟಕರ ಮಸೂದೆ ಉತ್ಪನ್ನ ಕರ ತಿದ್ದುಪಡಿ ಮಸೂದೆ, ಲಂಚ ನಿರ್ಮೂಲನ ಮಸೂದೆ, ಮದ್ಯಪಾನ ಪ್ರತಿಬಂಧ ಮಸೂದೆ ಇವೇ ಮೊದಲಾದವುಗಳು ಸ್ವೀಕೃತವಾದವು.

೭ ಲಕ್ಷ ರೂ.ಗಳ ಕೊರತೆ ಹಾಗು ಮದ್ಯಪಾನ ಪ್ರತಿಬಂಧದಿಂದಾಗುವ ಹಾನಿ ತುಂಬಿಕೊಳ್ಳಲು ಮತ್ತು ಅಧಿಕ ಆಹಾರ ಬೆಳೆಯಲು ಉತ್ತೇಜನ ಕೊಡಲು ಮಾರಾಟ ಕರವು ಅವಶ್ಯವೆಂದೂ ೧೦ ಸಾವಿರ ರೂಪಾಯಿ ವ್ಯಾಪಾರವಿರುವವರಿಗೆ ಮಾತ್ರ ಇದು ಅನ್ವಯಿಸುವದೆಂದೂ ಮಾನ್ಯ ಮಂತ್ರಿ ದಾಸಪ್ಪನವರು ಈ ಮಸೂದೆಯನ್ನು ಮಂಡಿಸುತ್ತ ಬಿಂಬಿಸಿ ಹೇಳಿದರು.

ಕರ್ಮವೀರ

ಶ್ರೀಸರ್ವಧಾರಿ ವಿಕ್ರಮ ವರ್ಷ ೧೮೭೦
ಜೇಷ್ಠ ಶು|| ೮ ಸೋಮವಾರ

ಹೊಣೆಗಾರರಾರು ?

ಆಹಾರ ಪದಾರ್ಥಗಳ ಧಾರಣೆಯೀಗ ಮಿತಿ ಮೀರಿ ಏರಿವೆ. ಸುಗ್ಗಿಯ ಕಾಲಕ್ಕೆ ರೂ.೧.೧೪, ೨ ರೂ. ಗೆ ಚಟ್ಟಿಯಿದ್ದ ಜೋಳದ ಧಾರಣೆ ಈಗ ೬-೧೨-೦ ವರೆಗೇರಿದೆ. ಆಗ ೩-೨-೦ಕ್ಕೆ ಚಟ್ಟಿ ಅಕ್ಕಿಯಿದ್ದರೆ ಈಗ ಅದು ೬-೧೦-೦ ವರೆಗೆ ಏರಿದೆ. ಅಂದರೆ ಮಾನವರೆಲ್ಲರಿಗೆ ಅವಶ್ಯವಾಗಿ ಬೇಕಾದ ಜೋಳ ಅಕ್ಕಿಯ ಧಾರಣೆಗಳಿಂತು ಇಮ್ಮಡಿ ಏರಿವೆ. ಎಂಥ ಕಳ್ಳಪೇಟೆಯ ಕಾಲಕ್ಕೂ ಧಾರಣೆಗಳು ಇಷ್ಟು ಏರಿದ್ದಿಲ್ಲ. ಇದರಿಂದ ಜನ ಹೌಹಾರಿ ಹೋಗಿದ್ದಾರೆ. ವಿಶೇಷತಃ ಮಧ್ಯಮ ವರ್ಗದವರು ಮತ್ತು ಕೂಲಿಕಾರರು ಬಾಯಿಬಿಡಹತ್ತಿದ್ದಾರೆ. ಈ ಧಾರಣೆಗಳು ತಗ್ಗದಿದ್ದರೆ ಮುಂದೇನು ಎಂಬ ಪ್ರಶ್ನೆಯೇ ಎಲ್ಲರ ತಲೆ ತಿನ್ನಹತ್ತಿದೆ. ಹುಬ್ಬಳ್ಳಿಯಲ್ಲಿ ಕಳೆದ ವಾರ ಕೂಲಿಕಾರರು ಪ್ರಚಂಡ ಮೆರವಣಿಗೆಯನ್ನು ಹೊರಡಿಸಿ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರಲ್ಲದೆ ವ್ಯಾಪಾರಸ್ಥರಲ್ಲಿದ್ದ ಧಾನ್ಯಗಳ ಸಂಗ್ರಹವನ್ನು ಜಪ್ತ ಮಾಡಿ ಯೋಗ್ಯ ಧಾರಣೆಗೆ ಹಂಚಬೇಕೆಂಬಾಶಯದ ಗೊತ್ತುವಳಿಯನ್ನು ಸ್ವೀಕರಿಸಿದರು.

ಧಾರಣೆಗಳಿಷ್ಟೊಂದು ಮಿತಿಮೀರಿ ಏರಬೇಕಾದರೆ ಆಹಾರ ಪದಾರ್ಥಗಳು ದೊಡ್ಡ ಪ್ರಮಾಣದಲ್ಲಿ ಹೊರಗೆ ಹೋದುದು ಮುಖ್ಯ ಕಾರಣವೆಂದು ಹೇಳಬಹುದು. ವ್ಯಾಪಾರಸ್ಥರ ಲಾಭಬಡಕತನವೂ ಇದಕ್ಕೆ ಕಾರಣವಿಲ್ಲದಿಲ್ಲ. ಕಾಳುಗಳೆಲ್ಲ ಬಳದು ಹೋಗಲಿಕ್ಕೆ ಸರಕಾರದವರು, ವ್ಯಾಪಾರಸ್ಥರು ಮತ್ತು ರೈತರು ಮೂವರೂ ಸಂಯುಕ್ತವಾಗಿಯೆ ಹೊಣೆಗಾರರಿರುವರೆಂಬಲ್ಲಿ ಸಂದೇಹವಿಲ್ಲ. ಮೊದಲು ನಿರ್ಧರಿಸಿದಂತೆ ಸರಕಾರದವರು ಸೀದಾಪದ್ಧತಿಯನ್ನು ತೆಗೆದಿದ್ದರೂ ಕಾಳ ವಸೂಲಿಯ ಕ್ರಮವನ್ನು ಹಾಗೆಯೇ ಸಾಗಿಸಿ ಅವನ್ನು ಸಂಗ್ರಹಿಸಿಟ್ಟಿದ್ದರೆ ಇಂದು ಈ ಬಗೆಯ ಪರಿಸ್ಥಿತಿ ಬರುತಿರಲಿಲ್ಲ. ಹೊರಗೆ ಕಾಳು ಹೋಗದಂತೆ ನಿರ್ಬಂಧ ಹೇರಿದ್ದರೆ ಬಹಳಷ್ಟು ಕಾಳು ಇಲ್ಲಿಯೇ ಉಳಿಯುತಿತ್ತು. ವ್ಯಾಪಾರಸ್ಥರು ಲಾಭದಾಸೆಯಿಂದ ಕಾಳುಗಳನ್ನು ಅನಿರ್ಬಂಧವಾಗಿ ಹೊರಗೆ ಸಾಗಿಸಿದರು. ಪಾಕಿಸ್ತಾನ ಪ್ರದೇಶಕ್ಕೆ ಮತ್ತು ಗೋವಾ ಮಾರ್ಗವಾಗಿ ಪೋರ್ತುಗಾಲ ಮೊದಲಾದ ದೇಶಗಳಿಗೆ ಕೂಡ ಧಾನ್ಯ ಹೋದವೆಂದು ಸುದ್ದಿ. ಧಾನ್ಯಗಳ ಓಡಾಟಕ್ಕೆ ರೇಲ್ವೆಗಳಲ್ಲಿ ಪ್ರಥಮ ಪ್ರಾಶಸ್ತ್ಯವಿದ್ದಿತು. ಈ ರೀತಿ ಕಾಳು ಪ್ರಾಂತದ ಹೊರಗೆ ಹೋದದ್ದು ನಿಜವಿದ್ದರೆ ಅಧಿಕಾರಿಗಳು ಆಗ ಏನು ಮಾಡುತ್ತಿದ್ದರೊ ತಿಳಿಯದು! ಪ್ರಾಂತ ಬಿಟ್ಟು ಕಾಳು ಹೋಗಿದ್ದಿಲ್ಲವಾದರೆ ಪ್ರಾಂತದಲ್ಲಿ ಅದರ ಸಂಗ್ರಹವಿದ್ದಿರಲು ಸಾಕು. ಅದನ್ನು ಹುಡುಕಿ ತೆಗೆಯುವದು ಸರಕಾರದ ಕರ್ತವ್ಯವಾಗಿದೆ.

ವ್ಯಾಪಾರಸ್ಥರಾದರೂ ಹಿಂದುಮುಂದಿನ ವಿಚಾರ ಮಾಡದೆ, ಜನತೆಗೆ ಯಾವಾಗಲೂ ಯೋಗ್ಯ ಧಾರಣೆಗೆ ಕಾಳುಗಳನ್ನು ಪೂರೈಸುವ ತಮ್ಮ ಕರ್ತವ್ಯವನ್ನು ಅರಿಯದೆ ಲಾಭಬಡಕರಾಗಿ ಕಾಳುಗಳನ್ನು ಹೊರಗೆ ಸಾಗಿಸಿದ್ದು ಅತ್ಯಂತ ದೇಶವಿಘಾತಕ ಧೋರಣವು. ರೈತರಾದರೂ ಹೆಚ್ಚು ಕಾಳುಗಳನ್ನು ಮಾರಿದ್ದರೆ ಇಂದಿನ ದುರ್ಧರ ಪ್ರಸಂಗಕ್ಕೆ ಅವರೂ ಹೊಣೆಗಾರರೆಂಬಲ್ಲಿ ಸಂದೇಹವಿಲ್ಲ. ಎರಡು ವರುಷಗಳ ಕಾಳುಗಳನ್ನು ಇಟ್ಟುಕೊಂಡು ಹೆಚ್ಚಿನದನ್ನು ಮಾರಿ ಬಿಡುವುದು ಹಿಂದೆ ಸಾಮಾನ್ಯ ರೂಢಿಯಾಗಿತ್ತು. ಆದರೆ ಈಗ ಅನೇಕ ಸಂದರ್ಭಗಳಲ್ಲಿ ತಮಗೇ ಸಾಕಷ್ಟು ಕಾಳುಗಳನ್ನು ಇಟ್ಟುಕೊಳ್ಳದೆ ಮಾರಿ ಬಿಟ್ಟದ್ದುಂಟು. ಇದು ಸರಿಯಾದ ಧೋರಣವಲ್ಲ. ಕಾಳಿನ ಸಂಗ್ರಹವೆಲ್ಲಿ ಇದೆಯೆಂಬುದನ್ನು ಸರಕಾರಿ ಅಧಿಕಾರಿಗಳು ಹುಡುಕಿ ತೆಗೆವುದು ಕರ್ತವ್ಯವಾಗಿದೆ. ಈಗ ಸಂಸ್ಥಾನಗಳೆಲ್ಲ ವಿಲೀನವಾಗಿ ಹೋದ್ದರಿಂದ ಸಂಸ್ಥಾನ ಪ್ರದೇಶದಲ್ಲಿ ಕಾಳನ್ನು ಬಚ್ಚಿಡಲಾಗಿದೆ ಎಂಬ ನೆಪವನ್ನು ಕೂಡ ಅಧಿಕಾರಿಗಳು ಹೇಳುವಂತಿಲ್ಲ.

ಯೋಗ್ಯ ಧಾರಣೆಗೆ ಕಾಳನ್ನು ಮಾರಹತ್ತಿದರೆ ಪರಿಸ್ಥಿತಿ ಸ್ವಲ್ಪ ತಿಳಿಯಾಗುವದು. ಪರದೇಶಗಳಿಂದ ಧಾನ್ಯದ ಹಡಗಗಳು ಬರುತಿವೆಯೆಂಬ ಸುದ್ದಿಯನ್ನು ಪತ್ರಿಕೆಗಳಲ್ಲಿ ಒಂದೇಸಮನೆ ಓದುತ್ತೇವೆ. ಆದರೆ ನಮ್ಮ ಭಾಗಕ್ಕೆ ಅವು ಸಂಬಂಧಿಸಿಲ್ಲವೊ? ಇಲ್ಲಿನ ಪರಿಸ್ಥಿತಿಯನ್ನು ಸರಕಾರದ ಗಮನಕ್ಕೆ ತಂದು ಕೊಟ್ಟು ಇಲ್ಲಿಗೆ ಬೇಕಾದಷ್ಟು ಕಾಳುಗಳನ್ನು ತರಿಸಿಕೊಂಡು ಸರಿಯಾದ ರೀತಿಯಲ್ಲಿ ಅವಶ್ಯವಿದ್ದವರಿಗೆ ಹಂಚುವದು ಕರ್ತವ್ಯವಾಗಿದೆ. ವ್ಯಾಪಾರಸ್ಥರು ಮತ್ತು ರೈತರಾದರೂ ಈ ಸಮಯದಲ್ಲಿ ಕಾಳಿನ ಸಂಗ್ರಹವನ್ನು ಸರಕಾರಕ್ಕೊಪ್ಪಿಸಿ ಸದ್ಯದ ದುರ್ಧರ ಪ್ರಸಂಗದಲ್ಲಿ ಜನತೆಯ ಜೀವವನ್ನುಳಿಸಿದ ಪುಣ್ಯಕ್ಕೆ ಭಾಗಿಗಳಾಗಬೇಕು. ಅಗ್ಗದರದ ಅಂಗಡಿಗಳು ಆದಷ್ಟು ಬೇಗ ತೆರೆಯಲ್ಪಡುವದು ಅವಶ್ಯವಾಗಿದೆ.

ಸೀದಾ ಪದ್ಧತಿ ತೆಗೆದರೆ ತಮಗೆ ದೊರೆಯುತಿದ್ದ ಲಂಚ ಮೊದಲಾದ್ದು ನಿಂತು ಹೋಗುವದೆಂದು ಅಧಿಕಾರಿಗಳು ಮೊದಲಿನಿಂದಲೂ ವಿನಿಯಂತ್ರಣಕ್ಕೆ ವಿರೋಧಿಗಳಾಗಿರುವರೆಂಬ ಆರೋಪವಿದೆ. ಈಗಲೂ ಮತ್ತೆ ಸೀದಾ ಜಾರಿಯಲ್ಲಿ ಬರುವಂತಹ ಪರಿಸ್ಥಿತಿಯನ್ನು ತರಲು ಅವರು ಪ್ರಯತ್ನಿಸುತ್ತಿರುವರು ಎಂದೂ ಅವರ ಮೇಲೆ ಆರೋಪ. ಇದನ್ನು ಅಳಿಸಿಗಳೆಯಬೇಕಾಗಿದ್ದರೆ ಅವರು ಸದ್ಯದ ಪರಿಸ್ಥಿತಿಯಲ್ಲಿ ಮುತ್ಸದ್ದಿತನದಿಂದ ಮತ್ತು ಜಾಣತನದಿಂದ ವರ್ತಿಸಿ ಯೋಗ್ಯ ಧಾರಣೆಗೆ ಜನತೆಗೆ ಕಾಳುಗಳು ಸಿಕ್ಕುವಂತೆ ಸರ್ವ ರೀತಿಯಿಂದ ಪ್ರಯತ್ನಿಸಬೇಕು.

ರಜಾಕಾರರ ಗುಂಡಿಗೆ ಆಹುತಿ



ಕವಲೂರ ಮೇಲೆ ರಜಾಕಾರರು ದಾಳಿ ಮಾಡಿದಾಗ ಅವರ ಗುಂಡಿನಿಂದ ಗಾಯ ಹೊಂದಿ ಗದಗ ಆಸ್ಪತ್ರಿಯಲ್ಲಿ ಮರಣ ಹೊಂದಿದ ಹುತಾತ್ಮನು

ವಾರದ ಸಿಂಹಾವಲೋಕನ

ಮಾತುಕತೆ ಮುರಿದವು!

ಹಿಂದುಸ್ತಾನ–ಹೈದರಾಬಾದ ಸರಕಾರಗಳಲ್ಲಿ ನಡೆದ ಮಾತುಕತೆಗಳು ಮುರಿದವೆಂದು ಅಧಿಕೃತ ಪ್ರಕಟನೆ ಹೊರಟಿದೆ. ಇದನ್ನೋದಿ ಭಾರತೀಯರಿಗೆಲ್ಲ ವಿಷಾದವಾಗದಿರದು. ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಸಿಕ್ಕಂದಿನಿಂದ ಹೈದರಾಬಾದದ ಸೇರ್ಪಡೆಯ ಸಮಸ್ಯೆ ಹಿಂದುಸ್ತಾನ ಸರಕಾರದ ಮತ್ತು ಜನತೆಯ ತಲೆತಿನ್ನುತ್ತದೆ. ಇಂದಿಲ್ಲ ನಾಳೆಯಾದರೂ ನಿಜಾಮ ಸಾಹೇಬರಲ್ಲಿ ವಿವೇಕೋದಯವಾಗಿ ಅವರು ತಮ್ಮ ಕರಾರುಗಳಿಗೆ ಒಪ್ಪಬಹುದೆಂದು ಹಿಂದುಸ್ತಾನ ಸರಕಾರದವರು ಈ ವರೆಗೆ ದಾರಿ ನೋಡಿದರು. ಅವರ ಮುಖ್ಯ ಕರಾರುಗಳಾದರೋ ಸಂರಕ್ಷಣ ಪರರಾಷ್ಟ್ರ ಮತ್ತು ಮಾರ್ಗ ಸೌಕರ್ಯ ಈ ಮೂರು ವಿಷಯಗಳನ್ನು ಹಿಂದುಸ್ತಾನಕ್ಕೆ ಬಿಟ್ಟುಕೊಡಲೇಬೇಕು ಹಾಗು ಹೊಣೆಗಾರ ಸರಕಾರವನ್ನು ಸ್ಥಾಪಿಸಬೇಕು ಎಂಬವಾಗಿದ್ದವು. ಆದರೆ ನಿಜಾಮ ಸರಕಾರದವರು ಈ ಮುಖ್ಯ ಕರಾರುಗಳನ್ನು ದುರ್ಲಕ್ಷಿಸಿ ಸೇರ್ಪಡೆಯ ಪ್ರಶ್ನೆಯ ಬಗ್ಗೆ ಜನಮತವನ್ನು ತೆಗೆದುಕೊಳ್ಳಬೇಕೆಂದೂ ಮಧ್ಯಂತರ ಅವಧಿಯಲ್ಲಿ ಹಿಂದೂ ಮುಸಲ್ಮಾನ ಸಮಪ್ರಾತಿನಿಧ್ಯವುಳ್ಳ ನಡುಗಾಲ ಸರಕಾರವನ್ನು ಸ್ಥಾಪಿಸಬೇಕೆಂದೂ ಮುಂತಾಗಿ ಸೂಚಿಸಿದರು. ನೂರಕ್ಕೆ ೧೫ ರಷ್ಟು ಜನ ಮುಸಲ್ಮಾನರಿರುವ ಹೈದರಾಬಾದದಲ್ಲಿ ಸಮಪ್ರಾತಿನಿಧ್ಯವೆಂತು ಬೇಡುವರೊ ತಿಳಿಯದು? ಹೀಗೆ ಮಾತುಕತೆ ಮುರಿದದ್ದರಿಂದ ಇನ್ನು ಮುಂದೆ ದಾಳಿಗಾರರನ್ನು ಬೆನ್ನಟ್ಟಿ ಆದ ಹಾನಿಯ ಸಂಪೂರ್ಣ ಪರಿಹಾರ ಮಾಡಿಕೊಳ್ಳಲಾಗುವದೆಂದೂ ಹಿಂದುಸ್ತಾನ ಸರಕಾರದ ಪ್ರಕಟನೆ ಹೊರಟಿದೆ. ಅತ್ತ ರಜಾಕಾರರ ಧುರೀಣರಾದ ಕಾಸೀಮ ರಜವಿಯವರೂ ಯುದ್ಧಕ್ಕೆ ಸಜ್ಜು ಹೊಡೆದಿರುವರು. ಪಾಣಿಪತ ಕಾಳಗದ ಪುನರಾವೃತ್ತಿಯೆಂದೂ ಇದರಲ್ಲಿ ಹಿಂದುಸ್ತಾನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವದೆಂದೂ ಅವರು ಭವಿಷ್ಯ ನುಡಿದಿರುವರು!! ಈ ರೀತಿ ಪರಿಸ್ಥಿತಿ ಗಂಭೀರವಾಗಿದ್ದು ಯುದ್ಧದ ಕಿಡಿಗಳು ಯಾವಾಗ ಹಾರುವವೊ ನಿಯಮವಿಲ್ಲ. ಯುದ್ಧವನ್ನು ತಪ್ಪಿಸಬೇಕೆಂದು ಹಿಂದುಸ್ತಾನ ಸರಕಾರ ಪ್ರಯತ್ನಿಸಿದರೂ ರಜಾಕಾರರ ಕೈಗೊಂಬೆಯಾಗಿದ್ದ ಹೈದರಾಬಾದ ಸರಕಾರದ ದುರಾಗ್ರಹದಿಂದ ಅದು ತಪ್ಪುವ ಸಂಭವವಿಲ್ಲೆಂದು ತೋರುತ್ತದೆ.

ಗೋವೆಯ ಪ್ರಶ್ನೆ

ಹಿಂದುಸ್ತಾನವೀಗ ಸ್ವತಂತ್ರವಾದ್ದರಿಂದ ಇಲ್ಲಿರುವ ಭಾಗಗಳೆಲ್ಲ ಅದರ ಆಡಳಿತದಲ್ಲಿ ಬರುವದು ಕ್ರಮಪ್ರಾಪ್ತವು. ಈಗ ಬ್ರಿಟಿಶರಾಳಿಕೆಯಲ್ಲಿದ್ದ ಪ್ರದೇಶವೆಲ್ಲ ಹಿಂದುಸ್ತಾನ ಸರಕಾರದ ಕೈಯಲ್ಲಿ ಬಂದಿದೆ. ಇನ್ನುಳಿದವು ಫ್ರೆಂಚ ಮತ್ತು ಪೋರ್ತುಗೀಜ ಪ್ರದೇಶಗಳು ಮಾತ್ರ. ಈ ಪ್ರದೇಶಗಳೂ ಸ್ವತಂತ್ರ ಹಿಂದುಸ್ತಾನ ಸರಕಾರದ ಆಡಳಿತದಲ್ಲಿ ಬರುವದು ಅವಶ್ಯವಾಗಿದೆ. ಇಷ್ಟರಲ್ಲಿಯೆ ಈ ಕಾರ್ಯ ಮುಗಿದು ಬಿಡಬೇಕಿತ್ತು. ಆದರೆ ಹಿಂದುಸ್ತಾನ ಸರಕಾರದ ಲಕ್ಷ್ಯವು ಬೇರೆ ಕೆಲಸದಲ್ಲಿ ತೊಡಗಿದ್ದರಿಂದ ಇತ್ತ ಗಮನಿಸುವದು ಅವರಿಗೆ ಸಾಧ್ಯವಾಗಲಿಲ್ಲ. ಈಗ ಸರಕಾರದವರು ಅತ್ತ ಲಕ್ಷ್ಯ ಹಾಕಿ ಆದಷ್ಟು ಬೇಗ ಅದನ್ನು ಬಗೆಹರಿಸಲು ಸಿದ್ಧರಾದಂತೆ ತೋರುತ್ತದೆ. ಗೋವೆಯ ಬಗ್ಗೆ ಪೋರ್ತುಗಾಲದ ಅಧ್ಯಕ್ಷರಾದ ಸಾಲಾಝಾರರೊಡನೆ ಹಿಂದುಸ್ತಾನ ಸರಕಾರದವರು ಈಗ ಮಾತುಕತೆ ನಡೆಸಿದ್ದಾರೆಂದು ತಿಳಿಯುತ್ತದೆ. ಹಿಂದುಸ್ತಾನದ ಹಾಯಕಮೀಶನರರಾದ ಶ್ರೀ ಕೃಷ್ಣ ಮೆನನ್‌ರು ಈ ಸಂಬಂಧದಲ್ಲಿ ಲಿಸ್ಬನಕ್ಕೆ ಹೋಗುವರೆಂದು ಸುದ್ದಿ. ಸದ್ಯದ ಪ್ರಜಾ ಪ್ರಭುತ್ವ ಯುಗದಲ್ಲಿ ಜನಮತ ಗಣನೆಯಂತೆ ಎಲ್ಲವೂ ನಡೆಯಬೇಕಾದ್ದರಿಂದ ಗೋವೆಯ ಭವಿತವ್ಯವನ್ನೂ ಅಲ್ಲಿನ ಜನರೇ ನಿರ್ಧರಿಸಲಿ ಎಂದು ಹಿಂದುಸ್ತಾನ ಸರಕಾರದವರು ಪೋರ್ತುಗೀಜ ಸರಕಾರಕ್ಕೆ ತಿಳಿಸಿರುವರೆಂದು ತಿಳಿಯುತ್ತದೆ. ಮುಖ್ಯ ಮಂತ್ರಿಗಳಾದ ಪಂಡಿತ ನೆಹರು ಇವರು ಫೆಬ್ರುಅರಿಯಲ್ಲಿ ಲಿಸ್ಬನಕ್ಕೆ ಬಂದು ಈ ಪ್ರಶ್ನೆಯನ್ನು ನಿರ್ಣಯಿಸಿಕೊಳ್ಳಬೇಕೆಂದು ಸಾಲಾಝಾರ ಅರಸರು ತಿಳಿಸಿರುವರೆಂದು ತಿಳಿಯುತ್ತದೆ. ಏನೇ ಆದರೂ ಗೋವೆಯ ಜನರ ಮತವನ್ನು ಕೇಳಿಕೊಂಡು ಅದು ಹಿಂದುಸ್ತಾನದಲ್ಲಿ ಸೇರಬೇಕೋ ಇಲ್ಲವೆ ಪೋರ್ತುಗೀಜರ ಆಡಳಿತದಲ್ಲಿ ಉಳಿಯಬೇಕೋ ಎಂಬುದನ್ನು ನಿರ್ಧರಿಸಬೇಕು. ಆದರೆ ಈ ಸಂದರ್ಭದಲ್ಲಿ ಜನಮತವನ್ನು ಕೇಳದೆ ಈಗಿನಂತೆ ಅದನ್ನು ಸತ್ತಿಕ್ಕಿ ಪೋರ್ತುಗೀಜ ಆಡಳಿತದಲ್ಲಿ ಇಟ್ಟುಕೊಳ್ಳುವದು ಮಾತ್ರ ಇನ್ನು ಮುಂದೆ ಎಂದಿಗೂ ಶಕ್ಯವಾಗದೆಂಬುದನ್ನು ಸಂಬಂಧಿಸಿದವರು ತಿಳಿದುಕೊಳ್ಳಬೇಕು.

ಗ್ರೇಡಿಯವರ ಕರಾರು

ಉದಕ ಮಂಡಲದಲ್ಲಿ ಏಶಿಯನ್ ಆರ್ಥಿಕ ಮಂಡಲದ ಔದ್ಯೋಗಿಕ ಅಭಿವೃದ್ಧಿ ಉಪಸಮಿತಿಯಲ್ಲಿ ಭಾಷಣ ಮಾಡುತ್ತ ಭಾರತದಲ್ಲಿ ಅಮೇರಿಕನ್ ರಾಯಭಾರಿಯಾಗಿದ್ದ ಹೆನ್ರಿ ಗ್ರೇಡಿಯವರು ಏಶಿಯನ್ ರಾಷ್ಟ್ರಗಳಿಗೆ ಕೆಲ ಉಪದೇಶಗಳನ್ನು ಕೊಟ್ಟರು. ತಮ್ಮ ಔದ್ಯೋಗಿಕ ಪ್ರಗತಿಗೆ ವಿದೇಶಿ ಬಂಡವಲಿನ ಸಹಾಯ ಬೇಕೆಂಬ ರಾಷ್ಟ್ರಗಳು ವಿದೇಶದ ಬಂಡವಲುಗಾರರಿಗೆ ಯೋಗ್ಯ ಪ್ರತಿಫಲ ಮತ್ತು ಬಂಡವಲು ತಿರುಗಿ ದೊರೆಯುವ ಭರವಸೆಯುಂಟಾಗುವಂಥ ಆರ್ಥಿಕ ಧೋರಣವನ್ನಿಟ್ಟುಕೊಳ್ಳಬೇಕು. ವಿದೇಶಿ ಬಂಡವಲಗಾರರಿಗೆ ಪ್ರವೇಶವಿತ್ತರೆ ತಮ್ಮ ದೇಶದ ಮೇಲೆ ಅವರು ಆರ್ಥಿಕ ಪ್ರಭುತ್ವ ಹೇರಬಹುದೆಂಬ ಭಯದಿಂದ ಕಾಯ್ದೆಗಳನ್ನು ಮಾಡುವವರು ವಿದೇಶಿ ಬಂಡವಲ ಸಿಗಲಿಲ್ಲೆಂದು ದೂರುವದು ನ್ಯಾಯವಲ್ಲ. ಇದು ಅವರ ವಾದದ ಸಾರ. ಬಹಳ ಸ್ವಾಭಾವಿಕವಾಗಿ ತೋರುವ ಗ್ರೇಡಿಯವರ ಮಾತಿನ ತಳದಲ್ಲಿ ಆದೆ ಆರ್ಥಿಕ ಸಾಮ್ರಾಜ್ಯವಾದದ ಭಾವನೆಯಿದೆ. ವಿದೇಶಿ ಬಂಡವಳದ ಜತೆಯಲ್ಲಿ ಆರ್ಥಿಕ ಪ್ರಭುತ್ವ ಬಾರದೇ ಇರುವದೆಂಬ ನಿಯಮವಿಲ್ಲವೆಂದು ಗ್ರೇಡಿಯವರು ಹೇಳುವದು ನಿಜವಾದರೂ ಸಾಮಾನ್ಯವಾಗಿ ಅವೆರಡೂ ಜಕ್ಕವಕ್ಕಿಗಳಂತೆ ಜತೆಯಾಗಿ ಬರುತ್ತವೆಯೆಂಬದನ್ನು ಯಾರೂ ಅಲ್ಲಗಳೆಯಲಾರರು. ಚೀನ, ಇಟಲಿಗಳಲ್ಲಿ ಅಮೇರಿಕನ್ ಬಂಡವಲು ನಡೆಸುತಿರುವ ಸ್ವಾಸಾಕರಣದ ಸುದ್ದಿಗಳು ಅಮೇರಿಕನ್ ಪ್ರಚಾರವ್ಯೂಹವನ್ನೂ ದಾಟಬರುವಷ್ಟು ತೀಕ್ಷ್ಣವಾಗಿವೆ. ಅಮೇರಿಕನ್ ಆರ್ಥಿಕ ಸಹಾಯ ಒಂದಕ್ಕಿಂತ ಹೆಚ್ಚು ದೇಶಗಳಲ್ಲಿ ಪ್ರಜೆಗಳಿಗೆ ಬೇಡವಾದ ಸರಕಾರಗಳ ಅಸ್ತಿತ್ವಕ್ಕೆ ಕಾರಣವಾಗಿದೆ. ಒಟ್ಟಿನ ಮೇಲೆ ಗ್ರೇಡಿಯವರ ಮಾತಿನಿಂದ ಕಮ್ಯುನಿಝಂನ ಉತ್ಕಟ ಗಂಡಾಂತರ ಯಾವ ಪೌರ್ವಾತ್ಯ ದೇಶಗಳಿಗಿಲ್ಲವೊ ಅವಕ್ಕೆ ಅಮೇರಿಕನ್ ಬಂಡವಲುಗಾರರ ಸಹಾಯ ದುರ್ಲಭವೆಂದು ಅರ್ಥವಾಗುತ್ತದೆ. ಜಗತ್ತಿನಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆಯ ಉಚ್ಚ ಧ್ಯೇಯವನ್ನಿಟ್ಟುಕೊಂಡವರ ಬಾಯಿಯಲ್ಲಿ ಈ ಮಾತುಗಳು ಅಷ್ಟು ಶೋಭಿಸುವದಿಲ್ಲ.

ಜನಸೇವೆಯೇ ಧರ್ಮವಾಗಲಿ

ಬ್ರಿಟಿಶರಾಳಿಕೆಯ ಕಾಲಕ್ಕೆ ಅಧಿಕಾರಿಗಳು ಮತ್ತು ಜನತೆಯಲ್ಲಿ ಮಹದಂತರವಿದ್ದಿತು. ಇಬ್ಬರ ಸುಖ ದುಃಖಗಳು ಭಿನ್ನಭಿನ್ನವಾಗಿದ್ದವೆಂದು ಹೇಳಿದರೆ ತಪ್ಪಾಗದು. ಆದರೀಗ ಪ್ರಜಾಪ್ರಭುತ್ವವು ಹಿಂದುಸ್ಥಾನದಲ್ಲಿ ಪ್ರಾರಂಭವಾದ್ದರಿಂದ ಅಧಿಕಾರಿಗಳು ಮತ್ತು ಪ್ರಜೆಗಳು ಇವರಲ್ಲಿ ವಿಶೇಷ ಭಿನ್ನಭಾವವಿರುವದಿಲ್ಲ, ಇರಬಾರದು. ಪ್ರಜಾಸೇವೆಯೇ ತಮ್ಮ ಧರ್ಮವೆಂದು ಅಧಿಕಾರಿಗಳು ತಿಳಿದುಕೊಂಡು ವರ್ತಿಸಹತ್ತಿದರೆ ಎಲ್ಲವೂ ಸುಗಮವಾಗಿ ಸಾಗುವದು. ಪ್ರಜಾಪ್ರಭುತ್ವ ಸ್ಥಾಪನವಾದಂದಿನಿಂದ ಮಂತ್ರಿಗಳು ಸರಕಾರಿ ಅಧಿಕಾರಿಗಳಿಗೆ ಇದೇ ವಿಷಯವನ್ನು ಒತ್ತಿ ಹೇಳುತಿರುವರು. ಮುಖ್ಯಮಂತ್ರಿವರ್ಯ ಶ್ರೀ ಗಾಡಗೀಳರು ಸಿಮಲಾದಲ್ಲಿಯ ಸರಕಾರೀ ಮುದ್ರಣ ಕೆಲಸಗಾರರನ್ನುದ್ದೇಶಿಸಿ ಭಾಷಣ ಮಾಡುತ್ತ 'ತಮ್ಮ ಕಷ್ಟ ನಷ್ಟಗಳ ಪರಿಹಾರಕ್ಕಾಗಿ ಸಂಘಸಂಸ್ಥೆಗಳನ್ನು ಕಟ್ಟಿಕೊಳ್ಳುವ ಅಧಿಕಾರವಿದ್ದರೂ ತಮ್ಮ ಜೀವನಮಟ್ಟವು ದೇಶದಲ್ಲಿಯ ಇತರ ಜನರ ಜೀವನ ಮಟ್ಟಕ್ಕೆ ಯಾವದೇ ಬಗೆಯಿಂದ ಸಂಬಂಧಿಸಿದ್ದಿಲ್ಲ. ವಿಶಿಷ್ಟ ವರ್ಗದವರೆಂದು ತಮ್ಮನ್ನು ನಡೆಯಿಸಿಕೊಳ್ಳಬೇಕೆಂದು ಮುಂತಾಗಿ ಕೇಳುವದು ಸದ್ಯದ ಪ್ರಜಾಪ್ರಭುತ್ವ ಯುಗದಲ್ಲಿ ಒಗ್ಗಲಾರದು' ಎಂದು ಸ್ಪಷ್ಟವಾಗಿ ಹೇಳಿರುವರು. ದೇಶದಲ್ಲಿಯ ಜನರಿಗೆಲ್ಲ ಸಮಾನ ಸ್ಥಾನಮಾನ ಅವಕಾಶಗಳು ಸಿಕ್ಕುವಂಥ ಸಮಾಜ ರಚನೆಗಾಗಿ ಸರಕಾರದವರು ಪ್ರಯತ್ನಿಸುತಿರುವರು. ಒಮ್ಮೆಲೆ ಈ ಬದಲಾವಣೆಯಾಗುವದು ಶಕ್ಯವಿಲ್ಲ. ಆದರೆ ಆ ಬಗ್ಗೆ ಜೋರಿನಿಂದ ಪ್ರಯತ್ನ ಮಾಡುವದು ಅತ್ಯವಶ್ಯವಾಗಿದೆ ಎಂದೂ ಅವರು ಹೇಳಿದರು. ಸಾರ್ವಜನಿಕರೆ ದೇಶದ ಒಡೆಯರಾದ್ದರಿಂದ ಅವರ ಸೇವೆ ಮಾಡುವದು ನಮ್ಮ ಧರ್ಮದಾಗಿದೆ. ಅವರೊಡನೆ ನಾವು ಸಹಕರಿಸಲಿಕ್ಕೆ ಬೇಕು. ಈ ಬಗೆಯ ಸಹಕಾರವಿಲ್ಲದಲೆ ಇಂಥ ಪ್ರಗತಿಯು ಸಾಧ್ಯವಿಲ್ಲ ಎಂದೂ ಮಾನ್ಯ ಗಾಡಗೀಳರು ಹೇಳಿದರು. ಮುಖ್ಯಮಂತ್ರಿವರ್ಯರ ಮಾತಿನ ರಹಸ್ಯವನ್ನರಿತುಕೊಂಡು ಸರಕಾರೀ ಅಧಿಕಾರಿಗಳೆಲ್ಲ ನಡೆಯಬೇಕು.

ಭಾಷಾನ್ವಯ ವಿಭಜನೆ

“ಆಂಧ್ರರ ಮತ್ತು ತಮಿಳರ ನಡೆವಳಿಯನ್ನು ನೋಡಿದರೆ, ಭಾರತದಲ್ಲಿ ಈಗ ಕಾಣ ಬರುತಿರುವಷ್ಟು ಐಕ್ಯ ಕೂಡ ಉಳಿಯದೆ ಒಡೆದುಹೋಗುವಂತಿದೆ; ನಾವು ಒಬ್ಬರು ಇನ್ನೊಬ್ಬರ ಗಂಟಲು ಹಿಚುಕಲು ಸಿದ್ಧವಾಗುವ ಕಾಲ ದೂರವಿಲ್ಲೆಂದು ತೋರುತ್ತದೆ. ನಿಜವಾಗಿ ನಮ್ಮದು ವೈದಿಕಕಾಲದಿಂದಲೂ ಬಂದ ಅಖಂಡ ಸಂಸ್ಕೃತಿಯಾಗಿರುವಾಗ ಆ ಭಾಷೆಯು ಇಲ್ಲವೆ ಈ ಭಾಷೆಯು ಅಥವಾ ಆ ಈ ಭಾಷಾಸಮೂಹದ ವಿಶಿಷ್ಟ ಸಂಸ್ಕೃತಿಗಳ ಮಾತು ಕೇಳಿದರೆ ಹೇಸಿಗೆ ಬರುತ್ತದೆ. ಭಾರತ ರಾಜ್ಯದ ಅತಿಪುರಾತನ ಉಲ್ಲೇಖವೆಂದರೆ ರಾಮಾಯಣದ ಕಥೆ. ಆ ಕಾಲದಲ್ಲಿ ಕೂಡ, ಸಿಂಹಳ ದ್ವೀಪವೂ ಭಾರತವೂ ಸಂಸ್ಕೃತಿಯಲ್ಲಿ ಒಂದೇ ಆಗಿದ್ದವು. ಏಕೆಂದರೆ ರಾವಣನು ದೊಡ್ಡ ವಿದ್ವಾಂಸನೂ ವೇದಪಾರಂಗತನೂ ಆಗಿದ್ದನು.

“ಪ್ರಚಲಿತ ಭಾಷೆಯೊಂದಲ್ಲದೆ ಪರಸ್ಪರ ಬೇರಾವ ಭೇದವೂ ಇಲ್ಲದ ಈ ವಿವಿಧ ಪ್ರಾಂತಗಳ ಜನರಲ್ಲಿ ಹಬ್ಬುತಿರುವ ನಾ-ಬೇರೆ ನೀ-ಬೇರೆ ಭಾವನೆಗಿಂತ ನಮ್ಮ ಐಕ್ಯಕ್ಕೂ ನಮ್ಮ ಸಂಸ್ಕೃತಿಗೂ ಹೆಚ್ಚು ಗಂಡಾಂತರ ಬೇರೊಂದಿಲ್ಲ. ಕಾಂಗ್ರೆಸ್ಸಿನ ಮುಂದಾಳ್ತನದಲ್ಲಿ, ದೇಶವನ್ನು ಭಾಷೆಯ ತಳಹದಿಯಲ್ಲಿ ವಿಂಗಡಿಸಲು ಅದು ಸದುದ್ದೇಶದಿಂದ ಕೊಟ್ಟ ಸಮ್ಮತಿಯ ಫಲವಾಗಿ, ಒಡಕು ಹುಟ್ಟಿಸಿ ಆಳುವ ಸರಕಾರದ ಕಾಲದಲ್ಲಿ ಕೂಡ ಕಂಡು ಕೇಳಿರದಷ್ಟು ಉಗ್ರವಾದ ಪ್ರಾಂತಪ್ರಾಂತೀಯ ಮತ್ತು ಜಾತಿಜಾತೀಯ ಅಸೂಯೆ ಕುದಿಯತೊಡಗಿದೆ. ದ್ರಾವಿಡ ಸಾಮ್ರಾಜ್ಯ, ಆಂಧ್ರ ಸಾಮ್ರಾಜ್ಯಗಳೆಂಬ ಕೂಗುಗಳು ಕೇಳಬರುತಿವೆ. ಈ ಪ್ರವೃತ್ತಿಗಳನ್ನು ಮೊಳಕೆಯಲ್ಲೆ ಚಿವುಟ ಬಗೆಯದಿದ್ದರೆ ಅವಸ್ಥೆ ಕಠಿಣಕ್ಕಿಟ್ಟುಕೊಂಡೀತು.

“ಈ ಸಂದರ್ಭದಲ್ಲಿ ಸ್ವಾಯತ್ತ ಸ್ವರೂಪದ ಪ್ರಾಂತಗಳಿದ್ದರೆ ದೊಡ್ಡ ಆಪತ್ತು ಬರುವದು ಕಟ್ಟಿಟ್ಟದ್ದು. ಗವರ್ನರ ಪ್ರಾಂತಗಳೇ ಇರಕೂಡದು, ಇಡಿ ದೇಶಕ್ಕಾಗಿ ಶಾಸನಗಳನ್ನು ಮಾಡುವ ಒಂದು ಸಂಸ್ಥೆಯಂತೂ ಇದ್ದೇ ಇದೆ. ಅಂದ ಮೇಲೆ ಪ್ರಾಂತಿಕ ಮತ್ತು ಸ್ಥಾನಿಕ ಸರಕಾರಗಳ ಕರ್ತವ್ಯ ಇಡಿ ದೇಶದ ಶಾಸನಗಳನ್ನು ಜಾರಿಗೆ ತರುವದಕ್ಕಷ್ಟೇ ಸೀಮಿತವಾಗಿದ್ದರೆ ಸಾಕು. ಪ್ರಾಂತಗಳಿಗೆ-ಅವು ಭಾಷಾನ್ವಯವಿರಲಿ ಇಲ್ಲದಿರಲಿ- ತಮ್ಮ ಸ್ವಂತ ಹಿತಸಂಬಂಧಗಳಿವೆ, ಅವು ಕೇಂದ್ರದ ಹಿತಕ್ಕೆ ವಿರುದ್ಧವಾಗಿವೆ, ಎಂದು ಬಗೆಯುವದು ಯಾವ ಹಿಂದೀಯನಿಗೂ ಭೂಷಣವಲ್ಲ. ಸರಳವಾದ ಒಂದು ಉಪಾಯದಿಂದ, ಪ್ರತಿಯೊಂದು ಭಾಷೆಯೂ ತನ್ನ ಸ್ವರೂಪವನ್ನು ಕಾಯ್ದುಕೊಳ್ಳುವಂತೆ, ಆದರೆ ವಿಶಾಲತರ ಕ್ಷೇತ್ರದಲ್ಲಿ ಈ ಸ್ವರೂಪವನ್ನು ಗೌಣವಾಗಿಟ್ಟು ಪ್ರಾಂತೀಯ ಭಾವನೆಗಳನ್ನು ಮರೆತುಬಿಡುವಂತೆ ಮಾಡಬಹುದು.

“ಭಾರತದಲ್ಲಿ ಪ್ರತಿಯೊಬ್ಬನೂ ಭಾರತೀಯನಂತೆ ಆಚರಿಸಬೇಕು, ವಿಚಾರಿಸಬೇಕು ಹೊರತು ಯಾರು ಮದ್ರಾಸಿಯಂತೆ ಯಾರು ಬಂಗಾಲಿಯಂತೆ ಯಾರು ಪಂಜಾಬಿಯಂತೆ ಅಲ್ಲ. ಭಾರತದಲ್ಲಿ ನಾವು ಸಂಚರಿಸುವಾಗ ಬೇರೆ ಬೇರೆ ರಾಜ್ಯಗಳಲ್ಲಿ ಕಾಲಿಟ್ಟಂತೆ ನಮಗೆ ಅನಿಸುವದಿಲ್ಲ, ಇನ್ನಾದರೂ ಪ್ರಾಂತಗಳೆಂದೆನಿಸುವ ಪರರಾಜ್ಯಗಳಲ್ಲಿ ಪ್ರವೇಶಿಸಿದಂತೆ ಅನಿಸಬಾರದು. ಆದರೆ ಜನರ ಉದ್ವೇಗ ಹೀಗೆಯೆ ಉಳಿದರೆ, ಪ್ರಾಂತಗಳು ಗಡಿಗಳನ್ನು ವಿಸ್ತರಿಸಿಕೊಳ್ಳುವದಕ್ಕಾಗಿ ಹೂಡಿದ ಒಳಸಂಚುಗಳ ಕಾವಲಿಗಳಾಗಲು ತಡವಿಲ್ಲ. ಚೋಳ ಪಾಂಡ್ಯ ಅಥವಾ ವಿಜಯನಗರ ಸಾಮ್ರಾಜ್ಯಗಳಿಗಾಗಿ ಹಾತೊರೆಯುವ ಜನರು ಈಗಲೂ ಇರಬಹುದು.

“ಉಪಸಂಹಾರದಲ್ಲಿ, ನಾವು (ಅ) ಪ್ರಾಂತಗಳನ್ನು ರದ್ದುಗೊಳಿಸಬೇಕು, (ಬ) ಜಿಲ್ಲೆಗಳನ್ನೆ ಆಡಳಿತ ಘಟಕಗಳಾಗಿ ಮಾಡಿ, ಅಖಿಲ ಭಾರತೀಯ ಶಾಸನ ಸಭೆಗೆ ಆರಿಸಲು ಮತದಾರ ಜಿಲ್ಲೆಗಳನ್ನು ರಚಿಸಬೇಕು, (ಕ) ಯೋಗ್ಯ ಶೈಕ್ಷಣಿಕ ಮತ್ತು ಸಾಹಿತ್ಯ ಸಂಸ್ಥೆಗಳ ಮೂಲಕ ಪ್ರಮುಖ ಭಾಷೆಗಳ ಬೆಳವಣಿಗೆಗೆ ಅವಕಾಶ ಒದಗಿಸಿ ಕೊಡಬೇಕು, ಮತ್ತು (ಡ) ಹಿಂದಿ ಅಥವಾ ಹಿಂದುಸ್ತಾನಿಯನ್ನು ಭಾರತದ ಭಾಷೆಯನ್ನಾಗಿ ಸ್ವೀಕರಿಸಿ ಇಂಗ್ಲೀಷನ್ನು ವಿಶಿಷ್ಟ ಉದ್ದೇಶಗಳಿಗೆ ಒತ್ತಾಯದ ದ್ವಿತೀಯ ಭಾಷೆಯನ್ನಾಗಿ ಪರಿಗ್ರಹಿಸಬೇಕು.

“ಭರತವರ್ಷದ ಮತ್ತು ಪರಂಪರಾಗತವಾಗಿ ಬಂದ ಅದರ ಸಾಂಸ್ಕೃತಿಯ ಐಕ್ಯವೆಂಬವು ಸಂಪ್ರದಾಯಕವಾಗಿ ನಮಗೆ ಇಳಿದುಬಂದಿವೆ. ಅದು ಶತಶತಕಾಂತರಗಳ ಪರೀಕ್ಷೆಯಲ್ಲಿ ಉತ್ತೀರ್ಣವಾಗಿ ಉಳಿದಿದೆ, ಭಿನ್ನಭಿನ್ನ ಭಾಷೆಗಳ ಜಂಜಾಟವೇ ಇದ್ದರೂ ಅದು ಅಂತರಿಕ ಬಾಹ್ಯ ಸಂಕಟಗಳಿಂದ ಪಾರಾಗಿ ಬಂದಿದೆ. ಈ ಘನತರವಾದ ಪರಂಪರೆಯನ್ನು ಮಗೆತು ಭಾಷಾನ್ವಯ ಭೇದಗಳನ್ನೇ ಬಗೆದು ನಾವೇಕೆ ಮಾತಾಡಬೇಕು? ಒಗ್ಗಟನಲ್ಲಿ ಬಲ, ಸತ್ಯ ಅಹಿಂಸೆಗಳ ಆಜ್ಞೆ ಅದು.”

ಈ ಮೇಲಿನವು ಒಬ್ಬ ಲೇಖಕನ ಮಾತುಗಳು.

ಬಳ್ಳಾರಿಯಿಂದ ಬಂದ ಇನ್ನೊಂದು ಪತ್ರವೂ ಇದನ್ನೆ ಪುಷ್ಟೀಕರಿಸುತ್ತದೆ. ಭಾಷಾಭೇದಗಳ ಆಧಾರದ ಮೇಲೆ ಇನ್ನು ಹೊಸ ಪ್ರಾಂತಗಳನ್ನು ರಚಿಸಬಾರದೆಂದು ಘಂಟಾಘೋಷವಾಗಿ ವಾದಿಸುತ್ತ ಆ ಪತ್ರ ಲೇಖಕನು ಡಾ. ಕೆ. ಎನ್. ಕಟಜು ಅವರ ಈ ಕೆಳಗಿನ ಮಾತುಗಳನ್ನು ಎತ್ತಿಕೊಟ್ಟದ್ದಾನೆ.

“ಭಾರತದ ಮಹಾದುರ್ಭಾಗ್ಯವೆಂದರೆ ಅದರ ವಿಭಜನೆ ಮತ್ತು ಧಾರ್ಮಿಕ ಅಥವಾ ಭಾಷಾನ್ವಯ ದೃಷ್ಟಿಯಿಂದ ಪ್ರಾಂತಗಳನ್ನು ರಚಿಸಬೇಕೆಂಬ ಬೇಡಿಕೆ ಅಲ್ಪಸಂಖ್ಯಾಕ ಬಹುಸಂಖ್ಯಾಕರೆಂಬ ಭೇದ, ಕೇವಲ ರಾಜಕೀಯ ಮತ್ತು ಆರ್ಥಿಕ ತಳಹದಿಯನ್ನವಲಂಬಿಸುವಂಥ ಪ್ರಜಾತಂತ್ರಾತ್ಮಕ ರಾಜ್ಯವನ್ನು ಕಟ್ಟುವವರಲ್ಲಿ ಪ್ರತಿಯೊಬ್ಬನು, ಕನಿಷ್ಠ ಪ್ರತಿಯೊಬ್ಬ ಕಾಂಗ್ರೆಸ್ಸಿಗನು ನಿರತನಾಗಿರಬೇಕು. ಈ ಅಲ್ಪಸಂಖ್ಯಾಕ ಬಹುಸಂಖ್ಯಾಕ ಸಮಸ್ಯೆಯನ್ನು ಭಾಷಾದೃಷ್ಟಿಯಿಂದ ವಿಚಾರಿಸಬೇಕೆಂಬ ಸೂಚನೆ ಬಹಳ ಅಪಾಯಕರವಾದುದು-ಐಕ್ಯವೇ ಇಂದಿನ ದೊಡ್ಡ ಅವಶ್ಯಕತೆಯಾಗಿರುವಾಗ ನಾವು ಪ್ರಾಂತಿಕ ಮೋಹದಿಂದ ಪ್ರೇರಿತರಾಗಬಾರದು.”

ಭಾಷಾನ್ವಯ ವಿಭಜನೆಯ ಚಳವಳಿಯ ಇತಿಹಾಸವನ್ನು ವಿವರವಾಗಿ ಚರ್ಚಿಸುತ್ತ ಅವರು ಹೇಳುತ್ತಾರೆ.

“ಕಾಂಗ್ರೆಸ್ಸು ೧೯೧೬ ರಲ್ಲಿ ಏನೋ ಒಂದು ದುರ್ಬಲ ಮುಹೂರ್ತದಲ್ಲಿ ಪ್ರತ್ಯೇಕ ಮತದಾನ ಪದ್ಧತಿಗೆ ಒಪ್ಪಿಗೆ ಕೊಟ್ಟಿತು. ಅದೇ ಪ್ರಕಾರ ಭಾಷಾನ್ವಯ ವಿಭಜನೆಗೂ ಅದು ಅರೆಮರೆವಿನಲ್ಲಿ ಒಪ್ಪಿತು. ಕಠೋರ ಫಲಗಳನ್ನು ಅನುಭೋಗಿಸಿದ ಬಳಿಕ ಈಗ ಅದು ಪ್ರತ್ಯೇಕ ಮತದಾನಕ್ಕೆ ಶರಣು ಹೊಡೆದಿದೆ. ಇನ್ನೊಂದು ವ್ಯಾಗ್ದಾನದಿಂದ ಉದ್ಭವಿಸಿದ ಕಿಡಿಗೇಡಿತನವನ್ನು ಅದು ಬೇಗನೆ ನಿವಾರಿಸಿದರೆ ಸುಖ. ರಾಜಕೀಯ ಘಟಕಗಳಿಗೆ ಅನುಗುಣವಾಗದಿರುವ ಭಾಷಾನ್ವಯ ಪ್ರಾಂತಗಳ ರಚನೆಯೆ ಇಂದು ಪ್ರಾಂತಗಳಲ್ಲಿ ಉಂಟಾದ ತೊಡಕು ತಿಕ್ಕಾಟಗಳಿಗೆ ಕಾರಣ. ಇದರ ಎಲ್ಲ ತಪ್ಪೊಪ್ಪುಗಳನ್ನು ಶಿರಸಾವಹಿಸಿ ಕಾಂಗ್ರೆಸ್ಸು ತಾನಿಟ್ಟ ಹೆಜ್ಜೆಯನ್ನು ಹಿಂತೆಗೆದುಕೊಳ್ಳಬೇಕು.”

ಭಾಷಾವಾದ ಹೇಗೆ ಯಾದವೀ ಕಲಹಕ್ಕೂ ಜಾತೀಯತೆಗೂ ಹಾದಿ ಮಾಡಿ ಕೊಡುತಿದೆಯೆಂಬದನ್ನು ನಿದರ್ಶನಪೂರ್ವಕವಾಗಿ ತೋರಿಸುತ್ತ ಅವರು ಹೇಳುವದಿಂತು.

“ಒಂದಾಗಿ ಬಾಳುತಿದ್ದ ಜನರು ಇಂದು ಇಬ್ಬಣವಾಗಿ ಹೋರಾಡಲನುವಾಗಿದ್ದಾರೆ. ನಾನಿರುವ ಪ್ರದೇಶದ ಮಾತನ್ನೆ ಹೇಳಬೇಕಾದರೆ ಅಲ್ಪಸಂಖ್ಯಾಕ ಗುಂಪು,— ಅದರ ಸಂಖ್ಯೆ ಬಹುಸಂಖ್ಯಾಕಕ್ಕಿಂತ ಅಷ್ಟೇನೂ ಕಡಿಮೆಯಿಲ್ಲದಿದ್ದರೂ ಅದರ ಆರ್ಥಿಕ ಶಕ್ತಿ ಹೆಚ್ಚಾಗಿದ್ದರೂ- ತನ್ನ ಭಾಷೆಯಲ್ಲಿ,- ಅದು ಎಲ್ಲರಿಗೂ ತಿಳಿದಿದ್ದರೂ- ಸಭಾ ಕಾರ್ಯಗಳನ್ನು ನಡೆಸಲಾರದು... ಗಾಂಧೀ ಜಯಂತಿಯ ದಿನ ಒಬ್ಬ ಕಾಂಗ್ರೆಸ್ ಕಾರ್ಯದರ್ಶಿ ಅಲ್ಪಸಂಖ್ಯಾಕರ ಭಾಷೆಯಲ್ಲಿ ಪ್ರಸಿದ್ಧಿಸಿದ ಹಸ್ತಪತ್ರಿಕೆಗಳನ್ನು ಇನ್ನೊಬ್ಬ ಕಾಂಗ್ರೆಸ್ ಕಾರ್ಯದರ್ಶಿ ಬಟ್ಟಬಯಲಲ್ಲಿ ಸುಟ್ಟು ಹಾಕಿದನು- ಕೇಳುವರಾರೂ ಇಲ್ಲದೆ ಹೋದರು... ಸ್ವಾತಂತ್ರ್ಯದ ಹೋರಾಟವಿದ್ದಾಗ ಇಂಥ ಸಂಗತಿಗಳನ್ನು, ಐಕ್ಯವನ್ನು ಕಾಯ್ದುಕೊಳ್ಳುವ ಸಲುವಾಗಿ, ಸಹಿಸಿಕೊಳ್ಳಲಾಗುತಿತ್ತು. ಸ್ವರಾಜ್ಯವೀಗ ದೊರಕಿರುವದರಿಂದ ಇನ್ನು ಬಹಿರಂಗ ತಿಕ್ಕಾಟಗಳನ್ನು ನಿರೀಕ್ಷಿಸಬಹುದು. ಈಗಾಗಲೆ ಗಡಿಗಳಿಗಾಗಿ ನಡೆದ ಬಡಿಬಾಟದಲ್ಲಿ ಪ್ರತಿಯೊಂದು ಭಾಷಾನ್ವಯ ಗುಂಪಿನ ತೋಳತಿಂಡಿಯನ್ನು ಗುರುತಿಸಬಹುದು. ಎಲ್ಲರಿಗೂ ತೃಪ್ತಿಕರವಾದ ಗಡಿಗಳನ್ನು ಗೊತ್ತುಮಾಡಲು ಸಾಧ್ಯವುಂಟೆ? ಈ ವರೆಗೆ ನೆರೆಹೊರೆಯವರೊಡನೆ ಶಾಂತಿ ಸಮಾಧಾನಗಳಿಂದ ಬಾಳುತಿದ್ದ ಎಷ್ಟು ದೊಡ್ಡ ದೊಡ್ಡ ಅಲ್ಪಸಂಖ್ಯಾಕ ಗುಂಪುಗಳು ಈಗ ಒಮ್ಮಿಂದೊಮ್ಮೆ ಶತ್ರುಗಳ ಶಿಬಿರದಲ್ಲಿ ಸಿಕ್ಕಿ ಬಿದ್ದಂತಾಗಿ ತಮಗೆ ಪ್ರಿಯವಾಗಿದ್ದುದನ್ನೆಲ್ಲ ಕಳೆದುಕೊಳ್ಳುವ ಭಯದಿಂದ ಗ್ರಸ್ತರಾಗಲಿಕ್ಕಿಲ್ಲ? ಕರ್ನಾಟಕ ಸಂಗೀತದ ಅತ್ಯುತ್ತಮ ಸಾಧಕರು ತಮಿಳರು. ತ್ಯಾಗರಾಜರು ಅವರ ನಡುವೆಯೆ ಬಾಳಿ ತೆಲುಗಿನಲ್ಲಿ ಹಾಡಿದರು. ಈಗ ಕರ್ನಾಟಕ ಸಂಗೀತದ ಅತ್ಯುತ್ತಮ ಕೃತಿಗಳ ಸಾಲಿನಲ್ಲಿ ಸ್ಥಾನ ಪಡೆದಿರುವ ಈ ತೆಲುಗು ಹಾಡುಗಳನ್ನು ತಮಿಳರು ಬಹಿಷ್ಕರಿಸಿದ್ದಾರೆ. ಭಾಷಾನ್ವಯ ವಿಭಜನೆಯ ಹೆಸರಲ್ಲಿ ಹಬ್ಬಿರುವ ಪಿಡುಗಿನ ಇದಕ್ಕಿಂತ ಬೀಭತ್ಸವಾದ ಅವತಾರ ಎಲ್ಲಿ ಸಿಕ್ಕೀತು?

“ಪಾಕಿಸ್ತಾನ ಮತ್ತು ಲಿಂಗ್ವಿಸ್ತಾನ (ಇಲ್ಲವೆ ಭಾಷಾನಿಷ್ಠ ವಿಭಜನೆಯ ಮೇರೆಗೆ ‘ಬೋಲಿಸ್ತಾನ’) ಎಂಬವು ಸಾಮಾಜಿಕರ ತಲೆಗೆ ಹಿಡಿದ ಸನ್ನಿಪಾತ ರೋಗಗಳೆಂಬುದನ್ನು ಯಾರಾದರೂ ಅರಿಯಬಹುದಾಗಿದೆ. ಮೊದಲನೆಯದು ದ್ವಿರಾಷ್ಟ್ರ ತತ್ವದ ಮೇಲೆ ಸಮರ್ಥಿಸಲ್ಪಟ್ಟದ್ದರೆ ಎರಡನೆಯದು ಪ್ರತಿಯೊಂದು ಭಾಷಾವೃತ ಜನಪದವೂ ಒಂದೊಂದು ಉಪರಾಷ್ಟ್ರವೆಂಬ ವಾದದ ಮೇಲೆ ನಿಂತಿದೆ. ಇಂಥ ಸಂಕಟ ಸಮಯದಲ್ಲಿ ಕಾಯದೆಆಜಂ ಜಿನ್ನಾರಿಗೂ ಭಾಷಾವೃತ ಪ್ರಾಂತರಚನೆಯ ಪುರಸ್ಕರ್ತರಿಗೂ ಸಾದೃಶ್ಯವನ್ನು ಕಾಣದಿರುವುದು ಒಂದು ದೊಡ್ಡ ತಪ್ಪೇ ಸರಿ. ಅವರೆಲ್ಲರೂ ಅವ್ಯವಸ್ಥೆಯ ಶಿಲ್ಪಿಗಳೇ”

ಅವರ ಸೂಚನೆ:

“ಮೂಲಭೂತ ಹಕ್ಕುಗಳ ಮೇಲಿನ ಕರಾಚಿ ಠರಾವಿನ ಆಧಾರದಿಂದ ಭಾಷಾಪ್ರಶ್ನೆಯನ್ನು ಬಗೆಹರಿಸುವ ಒಂದೇ ಒಂದು ಮಾರ್ಗವೆಂದರೆ, ನಮ್ಮ ಹೊಸ ರಾಷ್ಟ್ರಕ್ಕೆ ಅನಿವಾರ್ಯ ಅವಶ್ಯಕತೆಯೆನಿಸಿದ ರಾಷ್ಟ್ರಭಾಷೆಗಾಗಿ ಕೆಲಸ ಮಾಡುತ್ತಿರುವಾಗಲೇ ಕೇಂದ್ರದ ಅಧಿಕಾರಕ್ಕೊಳಪಡಿಸಿ ಪ್ರತಿಯೊಂದು ಭಾಷಾವೃತ ಪ್ರದೇಶಕ್ಕೂ ಒಂದೊಂದು ವಿಶ್ವವಿದ್ಯಾನಿಲಯವನ್ನು ಕೊಟ್ಟು ಅಲ್ಲಿ ರಾಷ್ಟ್ರಭಾಷೆಗೆ ಸಂಸಮವಾದ ಗೌರವವು ಪ್ರಾದೇಶಿಕ ಭಾಷೆಗೆ ಸಿಗುವಂತೆ ಮಾಡುವುದು. ರಾಜ್ಯವನ್ನು ಒಡೆಯದೆ ಬಹುಸಂಖ್ಯಾಕ, ಅಲ್ಪಸಂಖ್ಯಾಕರೆಂಬ ಗಲಿಬಿಲಿಯ ಪ್ರಶ್ನೆಯನ್ನು ಎಬ್ಬಿಸದೆ ಪ್ರಾದೇಶಿಕ ಭಾಷೆಗಳಿಗೆ ಮನ್ನಣೆ ಕೊಡುವುದರಲ್ಲಿ ಇಷ್ಟಕ್ಕಿಂತ ಮುಂದೆ ಹೋಗಲು ಸಾಧ್ಯವಿಲ್ಲ.

“೧೯೩೮ ರಲ್ಲಿ ದಿವಂಗತ ಸಿ. ವಿಜಯರಾಘವಾಚಾರ್ಯರೊಡನೆ ಮಾಡಿದ ವೈಯಕ್ತಿಕ ಚರ್ಚೆಯಲ್ಲಿ ಆ ದೊಡ್ಡ ಘಟನಾಚಕ್ರರು ಇನ್ನೊಂದು ದೃಷ್ಟಿಯಿಂದ ಭಾಷಾವೃತ ಪ್ರಾಂತಗಳತ್ತ ಭಯತಿರಸ್ಕಾರಗಳನ್ನು ವ್ಯಕ್ತಮಾಡಿದರು. ಭಾಷಾಬದ್ಧ ಪ್ರಾಂತಗಳು ನಮ್ಮ ಐಕ್ಯವನ್ನು ಸಡಿಲಿಸಿ, ಒಂದು ಅಸಂಬದ್ಧ ಪ್ರಾಂತ ಮಂಡಲವನ್ನಾಗಿ ನಮ್ಮ ಒಕ್ಕೂಟವನ್ನು ಪರಿವರ್ತಿಸಿ ಮೊದಲು ಬರುವ ಆಕ್ರಮಕನಿಗೆ ತುತ್ತುಮಾಡಿ ಕೊಡುವುವು ಎಂದು ಆಚಾರ್ಯರು ದೂರಿದರು. ಐಕ್ಯವೇ ಪರಮಾವಶ್ಯಕತೆಯೆನಿಸಿದ ಕಾಲದಲ್ಲಿ ಇದನ್ನು ಖಂಡಿತವಾಗಿ ತಪ್ಪಿಸಬೇಕು.

“ಶಾಸನ ಸಭೆಗಳ ಭಾಷೆ: ಹುರಿಮೂಸೆಯ ಮುಂದಾಳುಗಳ ಮತದ ಪ್ರಕಾರ ‘ಒಂದು ಭಾಷೆ ಒಂದು ರಾಜ್ಯ’ ಎಂಬುದು ಮಹಾಸೂತ್ರ. ಅದರ ರಕ್ಷಣೆಗಾಗಿ ಅವರು ಪ್ರಜಾಸತ್ತೆಗೆ ಶಾಸನ ಸಭೆಗಳ ಚರ್ಚೆ ಜನರ ಭಾಷೆಯಲ್ಲೇ ನಡೆಯಬೇಕೆಂಬುದೊಂದು ಪೂರ್ವಾವಶ್ಯಕತೆ ಎನ್ನುವುದು ಅವರ ಅಗ್ಗದ ಗಾದೆಯಾಧಾರ... ಕೆನಡ, ದ. ಆಫ್ರಿಕ, ಆಸ್ಟ್ರೇಲಿಯ ಮತ್ತು ಇತರ ದೇಶಗಳಲ್ಲಿ ದ್ವಿಭಾಷೆಯ ಶಾಸನ ಸಭೆಗಳಿರುವುದು ಆ ಮಹಾಶಯರಿಗೆ ಬಹುಶಃ ಗೊತ್ತಿಲ್ಲವೇನೊ! ಅವರ ವಾದವು ಅಂತ್ಯದಲ್ಲಿ ಹೇಗೆ ಅಪಹಾಸ್ಯಕ್ಕೆ ಗುರಿಯಾಗುವ ಸಿದ್ಧಾಂತಕ್ಕೆ ಒಯ್ದು ಮುಟ್ಟಿಸುತ್ತದೆಯೆಂಬುದು ಅವರಿಗೆ ಗೊತ್ತಾಗುವದಿಲ್ಲ. ಕೇಂದ್ರ ಶಾಸನ ಸಭೆಗೆ ಯುಕ್ತನೆನಿಸುವ ಯಾವ ಒಂದು ಭಾಷೆಯೂ ಅವರ ತರ್ಕದಂತೆ ಹೋದರೆ ಸಿಗಲಾರದಂತಾಗಿ ಅವರ ಪ್ರಕಾರ ನಿಜವಾಗಿ ಪ್ರಜಾಸತ್ತಾತ್ಮಕವಿರುವ ಕೇಂದ್ರ ಸರಕಾರವು ದಿಲ್ಲಿಯಲ್ಲಿ ಉಳಿಯಲಾರದು. ನಿರ್ಮಾಪಕರನ್ನೇ ತಿಂದು ತೇಗುವ ನಿರ್ಮಿತಿಯಂತೆ ಅದರ ಸ್ವಭಾವ (ಭಸ್ಮಾಸುರ ನೀತಿಗೆ ಸಮ). ಈಗಿನ ಕಾಲದಲ್ಲಿ ರಾಜಕೀಯ ಸರಕಾರವೆಂಬುದೊಂದುಹೆಚ್ಚಾಗಿ ವಿಶೇಷ ಪರಿಣತಿ ಪಡೆದ ಒಂದು ಕಲೆಯೆಂದೂ ಎರಡು ಮೂರಾದರೂ ಭಾಷೆಗಳನ್ನು ಬಲ್ಲ ಕಸಬಿನಿಂದ ರಾಜ್ಯಶಾಸ್ತ್ರಕಾರರೆನಿಸಿದವರು ಅದರ ನಿರ್ವಹಣಕ್ಕೆ ಅವಶ್ಯಕವೆಂದೂ ಅವರು ತಿಳಿದರೆ ಬಹಳ ಒಳ್ಳೆಯದಾದೀತು. ಐಕ್ಯವನ್ನು ಕಾದುಕೊಳ್ಳಬೇಕಾಗಿದ್ದರೆ ಸರಕಾರದಲ್ಲಿ ಅರ್ಥಾತ್ ಶಾಸನಸಭೆ ಮತ್ತು ಕೋರ್ಟುಗಳಲ್ಲಿ ದೇಶಭಾಷೆಯ ಜೊತೆಗೆ ಪ್ರದೇಶಭಾಷೆಯಿರುವದು ಅವಶ್ಯಕವೆಂಬುದರಲ್ಲಿ ಯಾವ ಸಂಶಯವೂ ಇಲ್ಲ.”

ಮೇಲಿನ ಮಾತುಗಳಲ್ಲಿ ಅಡಗಿದ ಮೂಲಭೂತಭಾವಗಳು ವಿಚಾರಾರ್ಹವಾಗಿವೆ

(೧೦ ನೆಯ ಪುಟಕ್ಕೆ)



ನಿಜಾಮರ ಅಸಾಧಾರಣ ಫರ್ಮಾನ್

ಒಕ್ಕಲತನ ಉತ್ಪಾದನೆಗಳ ಧಾರಣೆಗಳು

ಒಕ್ಕಲಿಗರು ತಮ್ಮ ಒಕ್ಕಲಿಗ- ಕೂಲಿಕಾರರಿಗೆ ಕೊಟ್ಟ ಕಾಳುಗಳಿಗೆ ಮಿತಿ ಮೀರಿದ ಧಾರಣೆಯನ್ನು ಹಾಕಿದ್ದರ ಉಲ್ಲೇಖವು ೧೮-೪-೧೯೪೮ ನೇ ತಾರೀಖಿನ ಹರಿಜನಬಂಧುವಿನಲ್ಲಿ ಇದೆ. ಯೋಗ್ಯ ಧಾರಣೆಯನ್ನು ತೆಗೆದುಕೊಳ್ಳಲು ಒಕ್ಕಲಿಗರಿಗೆ ಬಿನ್ನವಿಸಿಕೊಳ್ಳಲಾಗಿದೆಯಲ್ಲದೆ ತಮ್ಮ ಕೂಲಿಕಾರರಿಗೆ ಜೀವನ ವೇತನವನ್ನು ಕೊಡಬೇಕೆಂತಲೂ ಕೇಳಿಕೊಳ್ಳಲಾಗಿದೆ. ಈ ಬಿನ್ನಹದ ಪರವಾಗಿ ಬೇಕಾದಷ್ಟು ಬರೆಯಬಹುದಾಗಿದ್ದರೂ ಈ ಸಮಸ್ಯೆಯನ್ನು ಹೆಚ್ಚು ವ್ಯಾಪಕ ದೃಷ್ಟಿಯಿಂದ ವಿಚಾರ ಮಾಡಬೇಕಾಗಿದೆಯೆಂದು ನನಗನಿಸುತ್ತದೆ. ಒಕ್ಕಲಿಗ-ಕೂಲಿಕಾರರಿಷ್ಟೇ ಅಲ್ಲ ಆದರೆ ಒಕ್ಕಲಗರಿಗೂ ಜೀವನ ವೇತನ ಸಿಕ್ಕತಕ್ಕದ್ದು ಅವಶ್ಯವಾಗಿದೆ. ಜವಳಿ ಗಿರಣಿಗಾರ ಮತ್ತು ಜವಳಿ ಕೂಲಿಗಾರರ ಉದಾಹರಣೆಯನ್ನು ತೆಗೆದುಕೊಳ್ಳುವಾ. ಗಿರಣಿ ಕೂಲಿಗಾರರು ಸಂಘಟಿತರಾದ್ದರಿಂದ ಒಡೆಯರಿಂದ ಹೆಚ್ಚಿನ ಕೂಲಿಯನ್ನು ಪಡೆಯಲು ಸಮರ್ಥರಾಗಿರುವರು. ಆದರೆ ಕೊನೆಯಲ್ಲಿ ಈ ಸಂಬಳಗಳ ಭಾರವು ಗಿರಾಕಿಗಳ ಮೇಲೆಯೇ ಬೀಳುವದು. ಮತ್ತು ಈ ಹೆಚ್ಚಳದ ಮೂಲಕ ಗಿರಣಿಗಾರರು ಸ್ವಲ್ಪವೂ ಹಾನಿಗೊಳಗಾಗಬೇಕಾಗುವದಿಲ್ಲ. ಆದರೆ ಒಕ್ಕಲಿಗ ಕೂಲಿಕಾರರು ಮತ್ತೂ ಒಕ್ಕಲಿಗರ ಸಂಬಂಧದಲ್ಲಿ ಈ ಬಗೆಯ ಪರಿಸ್ಥಿತಿಯಿದೆಯೆ? ಇಂದು ಪೇಟೆಯಲ್ಲಿ ಇರುವ ಆಹಾರ ಪದಾರ್ಥಗಳ ಧಾರಣೆಗೂ ಕೂಲಿಕಾರರ ಮತ್ತು ಒಕ್ಕಲಿಗರ ಜೀವನ ವೇತನಕ್ಕೆ ಮತ್ತು ಅವುಗಳ ಮೂಲ ಬೆಲೆಗೂ ಏನಾದರೂ ಸಂಬಂಧ ವಿದೆಯೆ? ಆಹಾರ ಪದಾರ್ಥಗಳ ಧಾರಣೆಯನ್ನು ಗೊತ್ತು ಪಡಿಸಲು ಈ ವರೆಗೆ ಏನಾದರೂ ಶಾಸ್ತ್ರೀಯ ತಳಹದಿಯಿದೆಯೆ? ಇದೇ ಸಮಸ್ಯೆಯ ರಹಸ್ಯವಿದು.

ಸೀದಾ ಮತ್ತು ನಿಯಂತ್ರಣ ಜಾರಿಯಲ್ಲಿರುವ ಕಾಲಕ್ಕೂ ಸರಕಾರದವರು ಬೇರೆ ಬೇರೆ ಆಹಾರ ಪದಾರ್ಥಗಳ ಧಾರಣೆಗಳನ್ನು ಗೊತ್ತು ಪಡಿಸುವಾಗ ೧೯೩೯ ನೇ ಇಸ್ವಿಯ ಧಾರಣೆಗಳನ್ನು ತಳಹದಿಯನ್ನಾಗಿ ಹಿಡಿದುಕೊಂಡಿದ್ದರು. ಅಪರೀಗ ಉಳಿದ ಪದಾರ್ಥಗಳ ಧಾರಣೆಗಳ ಹೆಚ್ಚಳಕ್ಕಿಂತ ಆಹಾರ ಪದಾರ್ಥಗಳ ಧಾರಣೆಯಲ್ಲಾದ ಹೆಚ್ಚಳವು ಹೆಚ್ಚೆಂದು ಕಂಡುಬಂದರೂ ಈ ತುಲನೆಯು ತಪ್ಪುತಿಳಿವಳಿಕೆಯನ್ನುಂಟು ಮಾಡುವಂತಹದು. ೧೯೩೯ ನೇ ಇಸ್ವಿಯಲ್ಲಿ ಇದ್ದ ಆಹಾರ ಪದಾರ್ಥಗಳ ಧಾರಣೆಗಳು ಒಕ್ಕಲಿಗರ ದೃಷ್ಟಿಯಿಂದ ಅತ್ಯಂತ ಅನುಕೂಲವಾಗಿದ್ದವೆಂಬದಾಗಿ ಗ್ರಹಿಸಿ ಇದನ್ನು ಗೊತ್ತುಪಡಿಸಲಾಗಿದ್ದಿತು. ಅದು ಹಾಗಿರಲಿಲ್ಲೆಂಬುದು ನಮಗೆ ಗೊತ್ತುಂಟು. ಈ ಧಾರಣೆಗಳಿಂದ ಒಕ್ಕಲತನವೇನು ಲಾಭದಾಯಕ ಹೋರೆಯಾಗಲಿಲ್ಲ. ಇಲ್ಲವೆ ಒಕ್ಕಲಿಗರಿಗೆ ಜೀವನ ವೇತನವನ್ನೂ ದೊರಕಿಸಿ ಕೊಡಲಿಲ್ಲ. ವಸ್ತುಸ್ಥಿತಿಯೆಂದರೆ ಆಹಾರ ಪದಾರ್ಥಗಳ ಧಾರಣೆ ಗೊತ್ತುಪಡಿಸುವ ಶಾಸ್ತ್ರೀಯವಾಗಲಿ ಅಶಾಸ್ತ್ರೀಯವಾಗಲಿ ಯಾವದೇ ಬಗೆಯ ತಳಹದಿಯೇ ಇರಲಿಲ್ಲ. ಔದ್ಯೋಗಿಕ ಉತ್ಪಾದನೆಗಳ ಧಾರಣೆಗಳ ಪರಿಸ್ಥಿತಿ ಹಾಗಿರುವದಿಲ್ಲ. ಉದ್ದಿಮೆದಾರರು ಕಚ್ಚಾ ಸರಕಿನ ಬೆಲೆ, ಕೂಲಿ, ಯಂತ್ರಗಳ ಸವಕಳಿ, ಬಂಡವಲಿನ ಮೇಲಿನ ಬಡ್ಡಿ, ವಿಮೆ ಮತ್ತು ಉಳಿದ ಅವಶ್ಯಕ ವೆಚ್ಚಗಳ ಲೆಕ್ಕವನ್ನಿಟ್ಟು ತಮ್ಮ ಸರಕಿನ ಮೂಲ ಬೆಲೆಯನ್ನು ತೋರಿಸುವರು. ಈ ಮೂಲ ಬೆಲೆಗೆ ಅವರು ತಮ್ಮ ಲಾಭಾಂಶವನ್ನು ಕೂಡಿಸುವರು. ಸನ್ಮಾನ್ಯ ಜೀವನವನ್ನು ಸಾಗಿಸಲಿಕ್ಕೆ ಬರಬೇಕೆಂದಿಷ್ಟೇ ಅಲ್ಲ ಆದರೆ ರಾಜಠೀವಿಯಿಂದ ಜೀವನವನ್ನು ಸಾಗಿಸಿ ಬ್ಯಾಂಕಿನಲ್ಲಿ ಹಣವನ್ನೂ ಉಳಿಸುವಂತೆ ಅನುಕೂಲವಾಗುವ ದೃಷ್ಟಿಯಿಂದ ಅವರು ಈ ಲಾಭಾಂಶವನ್ನು ಗೊತ್ತುಪಡಿಸುವರು. ಇಂಥ ವಸ್ತುಗಳ ಧಾರಣೆಗಳನ್ನು ನಿರ್ಧರಿಸುವಾಗ ಸರಕಾರದವರು ಈ ತತ್ವಕ್ಕೆ ಮನ್ನಣೆ ಕೊಟ್ಟಿರುವರು.

ಒಕ್ಕಲತನದ ಉತ್ಪಾದನೆಯಲ್ಲಿಯೂ ಆನುಸರಿಸತಕ್ಕ ಸರಿಯಾದ ಪದ್ಧತಿ ಇದಲ್ಲವೆ? ಒಕ್ಕಲಿಗರೂ ಸನ್ಮಾನ್ಯ ಜೀವನ ಸಾಗಿಸಬೇಕೆಂದು ಬಯಸಬಾರದೋ? ರಾಜಠೀವಿಯ ಜೀವನದ ಮಾತನ್ನು ಒಂದೊಪ್ಪತ್ತು ಬಿಟ್ಟುಗೊಡಿರಿ. ಇದೇ ವಿಷಯದ ವಿಚಾರ ಮಾಡಲು ಹಿಂದುಸ್ತಾನ ಸರಕಾರದವರಿಂದ ನೇಮಕವಾದ ಕೃಷ್ಣಮಾಚಾರಿ ಸಮಿತಿಯವರು ಈ ತತ್ವವನ್ನು ಮತ್ತು ಇದಕ್ಕೂ ಸ್ವಲ್ಪ ಹೆಚ್ಚಿನದನ್ನು ಶಿಫಾರಸು ಮಾಡಿದ್ದು ಪ್ರೋತ್ಸಾಹಕರವಾಗಿದೆ. ೧) ಒಕ್ಕಲತನ ಉತ್ಪಾದನೆಗಳ ಧಾರಣೆಗಳು ಅದರ ವೆಚ್ಚವನ್ನನುಸರಿಸಿರಬೇಕು ೨) ಉದ್ಯೋಗ ಧಂದೆಗಳ ಮತ್ತು ಒಕ್ಕಲತನಗಳ ಉತ್ಪನ್ನದಲ್ಲಿ ಸಮಾನತೆ ಇರಬೇಕು. ಎಂಬೆರಡು ಸೂಚನೆಗಳನ್ನು ಆ ಸಮಿತಿಯು ಮಾಡಿದೆ.

ದೇಶಕ್ಕೆ ಮೂಲಾಧಾರದಂತಿರುವ ಒಕ್ಕಲತನವು ಸದ್ಯಕ್ಕೆ ಎಲ್ಲ ಬಗೆಯ ಅನಾನುಕೂಲತೆಗಳಿಂದ ಬಳಲುತಿದೆ; ಮತ್ತು ಎಲ್ಲ ಉದ್ಯೋಗಗಳಲ್ಲಿ ತೀರ ಕಡಿಮೆ ಸಂರಕ್ಷಣೆ ಪಡೆವಂಥದು ಎಂದೂ ಸಮಿತಿಯು ಒತ್ತಿ ಹೇಳಿದೆ. ಭೂಮಿಯ ತುಂಡಗಳು ಲಾಭದಾಯಕವಾದವುಗಳಲ್ಲ ಬೆಳೆಗಳು ಬಗೆಬಗೆಯ ರೋಗಗಳಿಂದ ಬಳಲುತಿವೆ ನೀರಾವರಿ ಯೋಜನೆಗಳು ತೀರ ಕಡಮೆ ಇವೆ. ಇವೆಲ್ಲ ಒಟ್ಟುಗೂಡಿ ಎಕರೆಯ ಸರಾಸರಿ ಉತ್ಪಾದನೆಯು ಬಹಳ ಕಡಿಮೆಯಾಗುತಿದೆ. ಕೊನೆಗೆಂದಾಗಿ ಧಾರಣೆಗಳು ಸರಿಯಾಗುವದಿಲ್ಲ.

ಇನ್ನೊಂದು ದೃಷ್ಟಿಯಿಂದ ಈ ಪ್ರಶ್ನೆಯ ಪರಿಶೀಲನೆ ಮಾಡಬೇಕಾಗಿದೆ. ತಂಬಾಕಿನಂಥ ವ್ಯಾಪಾರೀ ಬೆಳೆಗಳು ಆಹಾರ ಪದಾರ್ಥಗಳಿಗಿಂತ ಹೆಚ್ಚಿಗೆ ಹಣವನ್ನು ಒಕ್ಕಲಿಗರಿಗೆ ಕೊಡುವವು. ಹೀಗೆ ಮಾಡುವದು ದೇಶದ ಹಿತದೃಷ್ಟಿಯಿಂದ ವಿಘಾತಕವಾದುದೆಂದು ತಿಳಿಯಲಾಗುತಿದೆ. ತಂಬಾಕಿನಂಥ ಪದಾರ್ಥಗಳನ್ನು ಬೆಳೆಸಬಾರದೆಂದು ಒಕ್ಕಲಿಗರ ಮನವಲಿಸಬೇಕಾಗಿದ್ದರೆ ಅವರಿಗಾಗಿ ಬರಿ ಬಿನ್ನಹ ಪತ್ರಿಕೆಗಳನ್ನು ಹೊರಡಿಸಿದರೆ ತೀರದು; ಇಂಥ ಬೆಳೆಗಳನ್ನು ಬೆಳೆಸಲು ಅವರಿಗಿದ್ದ ಮೋಹವೆಲ್ಲ ಮಾಯವಾಗುವಂತೆ ಧಾರಣೆಗಳ ಯಂತ್ರವನ್ನು ಸರಿಪಡಿಸತಕ್ಕದ್ದು.

ನಮ್ಮ ಹಳ್ಳಿಗಳ ಮತ್ತು ನಗರಗಳ ಅರ್ಥಶಾಸ್ತ್ರವನ್ನು ಸರಿಪಡಿಸಬೇಕೆಂದು ಬಯಸುವ ಸಾಮಾಜಿಕ ಕಾರ್ಯಕರ್ತರು ಈ ಪ್ರಶ್ನೆಯತ್ತ ದಕ್ಷತೆಯಿಂದ ಗಮನಿಸಬೇಕಾದುದು ಅವಶ್ಯವಾಗಿದೆ. ಒಕ್ಕಲತನ ಉತ್ಪಾದನೆಗಳ ಧಾರಣೆಗಳನ್ನು ಗೊತುಪಡಿಸುವ ಶಾಸ್ತ್ರೀಯ ಪದ್ಧತಿಯನ್ನು ಹುಡುಕಬೇಕಾಗಿದೆ, ಪಟವಾರಿಗಳು ಪೂರಯಿಸುವ ಹರಕು ಮುರಕು ಅಂಕಿಗಳನ್ನೆ ಸರಕಾರವು ಸದ್ಯಕ್ಕೆ ಅವಲಂಬಿಸುತ್ತದೆ. ಈ ವಿಷಯದಲ್ಲಿ ನಮ್ಮ ಸಾಮಾಜಿಕ ಕಾರ್ಯಕರ್ತರು ಮುಂಬಂದು ಈ ದೃಷ್ಟಿಯಿಂದ ಯೋಗ್ಯ ಪದ್ಧತಿಯಲ್ಲಿ ಲೆಕ್ಕವನ್ನಿಡಲು ಕೆಲವೊಂದು ವಿಶಿಷ್ಟ ಪ್ರದೇಶದಲ್ಲಿ ಕೆಲ ಮಾದರಿಯ ಒಕ್ಕಲಿಗರನ್ನು ಹಿಡಿಯಲಿ. ಇದರಿಂದ ಆರ್ಥಿಕ ಸಮಾನತೆಯ ಸದ್ಯದ ಬೇಡಿಕೆಯನ್ನು ಕಾರ್ಯರೂಪದಲ್ಲಿ ತರುವ ಒಕ್ಕಲಿಗರಿಗೆ ಕ್ರಾಂತಿಕಾರಕವಾದ ಮುದ್ದೆಯನ್ನು ತಾನಾಗಿಯೆ ಒದಗಿಸಿಕೊಟ್ಟಂತಾಗುವದು.

ನಾಗಪುರ ಝವೇರಭಾಯಿ ಪಟೇಲ
೧೦-೫-೪೮

ಭಾಷಾನ್ವಯ ವಿಭಜನೆ

[೯ನೆಯ ಪುಟದಿಂದ]

ಎಂಬುದಕ್ಕೆ ನಾನೂ ಒಪ್ಪುವೆ. ಅವುಗಳ ಎಲ್ಲ ಸಲಹೆಗಳನ್ನೂ ಒಪ್ಪುವೆನೆಂದು ಮಾತ್ರ ನಾನು ಹೇಳಲಾರೆ. ಘಟನಾ ನಿರ್ಮಾಣವು ಇಲ್ಲಿಯವರೆಗೆ ಬಹಳ ಕಾಲ ಎಚ್ಚರಿಕೆಯಿಂದ ಬೆಳಸಿದ ಭಾವಗಳ ಮೇಲೆ ನಡೆದಿದ್ದರೂ ಇಡಿ ಸಂಗತಿಯನ್ನು ಪುನರವಲೋಕನಕ್ಕೆ ಗುರಿಪಡಿಸುವದಕ್ಕೆ ಕಾಲ ಮೀರಿಹೋಯಿತೆನ್ನಲಾಗದು. ಮೊದಲಿಗನ ಪ್ರಾಂತ ನಿರಾಸ ಮತ್ತು ಜಿಲ್ಲಾ ನಿರ್ಮಾಣದ ಸಲಹೆಯನ್ನು ಆಚರಣೀಯವಾಗದೆಂದು ತಳ್ಳಿಹಾಕಬಹುದು. ಚಿಕ್ಕ ಸಂಸ್ಥಾನಗಳಿಗೆ ದೊಡ್ಡ ಗುಂಪಾಗಿ ಸೇರಿ ಪ್ರಾಂತತ್ವ ಪಡೆಯಲು ಪ್ರೋತ್ಸಾಹಿಸಿದ ಭಾರತ ಸರಕಾರದ ಸಂಸ್ಥಾನ ಸಂಬಂಧಿ ಧೋರಣೆಗೆ ಅದು ಅಸಮಂಜಸವೆನಿಸೀತು. ವಿವಿಧ ಮುಖ್ಯ ಭಾಷೆಗಳ ಏಳಿಗೆಗೆ ಅಗತ್ಯವಾದ ಅನುಕೂಲ್ಯವನ್ನು ಕಲ್ಪಿಸಿಕೊಟ್ಟು ಬಹುಭಾಷಾ ಪ್ರಾಂತಗಳನ್ನು ಇಟ್ಟುಕೊಳ್ಳುವದು ಅಸಾಧ್ಯವಾಗದು. ಬಳ್ಳಾರಿ ಪತ್ರಕರ್ತನು ಸೂಚಿಸಿದ ಪರಿಹಾರೋಪಾಯ ವಿಚಾರಣೀಯವಾಗಿದೆ. ನಾವು ಎರಡು ಅತಿಪ್ರವೃತ್ತಿಗಳನ್ನೂ ದೂರ ಹಿಡಬೇಕು, ಅವೆಂದರೆ, ಕೇಂದ್ರದ್ದಿರಲಿ, ಪ್ರಾಂತದ ಶಾಸನಸಭೆಯಿರಲಿ—ಅಲ್ಲಿ ಒಂದೇ ಭಾಷೆಯಿರಬೇಕೆಂಬುದು ಇಲ್ಲವೆ ಬಹುಭಾಷೆಗಳಿರಬೇಕೆಂಬುದು. ಧರ್ಮದ ಭೇದದಂತೆ ಭಾಷಾಭೇದವು ಅವ್ಯವಸ್ಥೆಯನ್ನು ತರುವ ಕಾರಣವಾಗಕೂಡದು.

ಪಾರ, ೩೦-೫-೪೮

—ಕಿ. ಘ. ಮಶ್ರುವಾಲ

ಹಿಂದ ಹೈದರಾಬಾದ ಮಾತುಕತೆಗಳ ಮುಕ್ತಾಯ

ಹಿಂದುಸ್ತಾನವು ಶಾಂತಿಗೂ ಸಿದ್ಧ ಸಮರಕ್ಕೂ ಸಿದ್ಧ

ಜನಸಂರಕ್ಷಣೆಗೆ ಉಗ್ರೋಪಾಯ-ರಜಾಕಾರರ ಮೇಲೆ ಪ್ರತಿದಾಳಿ

ತಾ. ೯ ರ ನಿನ್ನಿನ ದಿವಸ ಹೈದರಾಬಾದದ ರಜಾಕಾರರೂ ಪುಂಡರೂ ಸೊಲ್ಲಾಪುರದಿಂದ ೪೫ ಮೈಲಿನ ಮೇಲಿರುವ ಮಾಡಲಗಿ ಮೇಲೆ ದಾಳಿ ಮಾಡಿದಾಗ ಸೊಲ್ಲಾಪುರ ಜಿಲ್ಲಾ ಪೋಲೀಸರು ಅವರ ಮೇಲೆ ನಿಕರದ ಪ್ರತಿದಾಳಿ ಮಾಡಿದರು. ದಾಳಿಗಾರರಿಗೂ ಪೋಲೀಸರಿಗೂ ಹೋರಾಟ ನಡೆದು ನಾಲ್ವರು ರಜಾಕಾರರು ಮರಣ ಹೊಂದಿದರು ಪೋಲೀಸರಲ್ಲಿ ಇಬ್ಬರಿಗೆ ಗಾಯವಾಗಿದ್ದು ಅವರನ್ನು ಸೊಲ್ಲಾಪುರ ಆಸ್ಪತ್ರಿಗೆ ತರಲಾಗಿದೆ.

ಸೇರ್ಪಡೆ ಮತ್ತು ಹೊಣೆಗಾರ ಸರಕಾರ

ಹಿಂದುಸ್ತಾನ ಸರಕಾರ ಮತ್ತು ನಿಜಾಂ ಸರಕಾರಗಳ ನಡುವೆ ನಡೆದ ದೀರ್ಘ ಚರ್ಚೆಯು ತಾ. ೯ ಕ್ಕೆ ಮುಕ್ತಾಯವಾಯ್ತು. ಈ ಬಗ್ಗೆ ಹಿಂದುಸ್ತಾನ ಸರಕಾರವು ಒಂದು ಅಧಿಕೃತ ಪ್ರಕಟನೆ ಹೊರಡಿಸಿದೆ. ಈ ಪ್ರಕಟನೆಯೆಂದರೆ ಭಾರತ ಸರಕಾರವು ನಿಜಾಂ ಸರಕಾರಕ್ಕೆ ಕೊಟ್ಟ ಕೊನೆಯ ಎಚ್ಚರಿಕೆಯೇ ಎಂದು ಭಾವಿಸಲಾಗಿದೆ. ಹೈದರಾಬಾದವು ಹಿಂದಿ ಒಕ್ಕೂಟದಲ್ಲಿ ಸೇರ್ಪಡೆಹೊಂದಲು ಒಪ್ಪಬೇಕು, ಮತ್ತು ಸಂಸ್ಥಾನದಲ್ಲಿ ಹೊಣೆಗಾರ ಸರಕಾರ ಸ್ಥಾಪಿಸಬೇಕು ಎಂಬ ಎರಡು ಕರಾರುಗಳಿಗೆ ಹಿಂದುಸ್ತಾನ ಸರಕಾರವು ಬಹಳ ಮಹತ್ವ ಕೊಟ್ಟು ಅವಕ್ಕೆ ಅಂಟಿಕೊಂಡಿತು. ಈ ಬಗ್ಗೆ ಜನಮತಗಣನೆಯಾಗಲಿ ಎಂದು ಹೈದರಾಬಾದ ಶಿಷ್ಟಮಂಡಲದವರು ಪ್ರತಿಸೂಚನೆ ಮಂಡಿಸಿದರಾಗಿ ತಿಳಿಯುತ್ತದೆ. ಆದರೆ ಈ ಸೂಚನೆಯನ್ನು ಅಂಗೀಕರಿಸುವದಾದರೆ ಹೊಣೆಗಾರ ಸರಕಾರ ಸ್ಥಾಪನೆಯ ವಿಷಯದಲ್ಲಿ ಇಬ್ಬರಿಗೂ ಸಮ್ಮತವಾಗುವ ಹಾಗೆ ಒಪ್ಪಂದವಾಗಬೇಕು, ಎರಡನೆಯದಾಗಿ ಇಂದಿನಿಂದ ಜನಮತಗಣನೆ ಮುಗಿಯುವ ವರೆಗೆ ನಿಜಾಮ ಸರಕಾರದವರು ಸೇರ್ಪಡೆ ಪತ್ರದಲ್ಲಿ ಕಾಣಿಸಲಾದ ವಿಷಯಗಳ ಅಧಿಕಾರವನ್ನು ಹಿಂದುಸ್ತಾನ ಸರಕಾರಕ್ಕೆ ಒಪ್ಪಿಸಬೇಕು ಎಂದು ಕರಾರುಗಳನ್ನು ಹಾಕಿತ್ತಾಗಿ ತಿಳಿಯುತ್ತದೆ.

ಹಿಂದುಸ್ತಾನದ ತಾಳ್ಮೆ ಮೀರಿತು

ಗಡಿಗಳಲ್ಲಿ ನಡೆದಿರುವ ಘಟನೆಗಳನ್ನೂ ಹಿಂದುಸ್ತಾನ ಪ್ರದೇಶವು ಅವ್ಯಾಹತವಾಗಿ ಆತಿಕ್ರಮಿಸಲ್ಪಡುತ್ತಿರುವುದನ್ನೂ ಹಿಂದುಸ್ತಾನ ಸರಕಾರವು ಇನ್ನು ಮುಂದೆ ಸಹಿಸದೆಂದೂ ಇನ್ನು ಮೇಲೆ ಹಿಂದುಸ್ತಾನದ ಪೋಲೀಸರು ಹಾಗು ಸೈನಿಕರು ದಾಳಿಗಾರರನ್ನು ಹೈದರಾಬಾದ ಪ್ರದೇಶದಲ್ಲಿ ಬೆನ್ನಟ್ಟಿ ಆದ ಹಾನಿಯ ಸಂಪೂರ್ಣ ಪರಿಹಾರ ಮಾಡಿಕೊಳ್ಳುವರೆಂದೂ ದಾಗಿ ಸರಕಾರಿ ಪ್ರಕಟನೆಯಲ್ಲಿ ಸ್ಪಷ್ಟಪಡಿಸಲಾಗಿದೆ.

ಸಮಪ್ರಾತಿನಿಧ್ಯ ಹಾಸ್ಯಾಸ್ಪದ

ಈ ಸಂದರ್ಭದಲ್ಲಿ ಹಿಂದುಸ್ತಾನ ಸರಕಾರದವರು ಹೈದರಾಬಾದ ಶಿಷ್ಟಮಂಡಲಕ್ಕೆ ಇನ್ನೊಂದು ಮಾತನ್ನು ತೀರ ತಿಳಿಯಾಗಿ ಹೇಳಿದೆ. ಅದೆಂದರೆ, ನಡುಗಾಲ ಸರಕಾರದಲ್ಲಿ ಹಿಂದು ಮುಸಲ್ಮಾನ ಸಮಪ್ರಾತಿನಿಧ್ಯಕ್ಕೆ ಹಿಂದುಸ್ತಾನ ಸರಕಾರವು ಎಂದೂ ಒಪ್ಪದೆಂಬುದು ೧೦೦ ಕ್ಕೆ ೮೫ ರಷ್ಟಿರುವ ಮುಸಲ್ಮಾನರಿಗೆ ೧೫ ರಷ್ಟಿರುವ ಮುಸಲ್ಮಾನೇತರರಷ್ಟೇ ಪ್ರಾತಿನಿಧ್ಯ ಒದಗಿಸಿಕೊಡುವದು ಹಾಸ್ಯಾಸ್ಪದವೇಸರಿ. ಸಮಪ್ರಾತಿನಿಧ್ಯಕ್ಕೆ ಒಪ್ಪಿ ಬಹು ಸಂಖ್ಯಾಕರನ್ನು ಅಲ್ಪ ಸಂಖ್ಯಾಕರ ಗುಲಾಮರಾಗಿರಿಸಬೇಕೆನ್ನುವ ನಿಜಾಮರಿಗೆ ಹಿಂದುಸ್ತಾನ ಸರಕಾರ ನೆರವಾಗಬೇಕೆ?

ರಜಾಕಾರರ ವಿಸರ್ಜನೆ

ಹಿಂದುಸ್ತಾನ ಸರಕಾರವು ರಜಾಕಾರರ ಖಾಸಗಿ ಸೈನ್ಯವನ್ನು ಕೂಡಲೇ ವಿಸರ್ಜಿಸಬೇಕೆಂದು ಸೂಚಿಸಿದ್ದರೂ ಹೈದರಾಬಾದ ಸರಕಾರವು ಈ ಬಗ್ಗೆ ಯಾವದೇ ಕ್ರಮ ಕೈಕೊಳ್ಳುವ ಲಕ್ಷಣ ಕಂಡುಬರುವದಿಲ್ಲ. ಹೈದರಾಬಾದದ ವಿಶೇಷಸ್ಥಾನಮಾನವೆಂಬ ಹೆಸರಿನಲ್ಲಿ ಈಗ ಅಲ್ಲಿ ಅಧಿಕಾರಿ ವರ್ಗವೆಲ್ಲ (೧೦೦ ಕ್ಕೆ ೭೫ ರಷ್ಟು) ಮುಸಲ್ಮಾನರೇ ಆಗಿದ್ದಾರೆ. ಈ ಬಗ್ಗೆ ಸಹ ಹಿಂದುಸ್ತಾನ ಸರಕಾರದವರು ಕೆಲವೊಂದು ಆವಧಿಯವರೆಗೆ ಇದಕ್ಕೂ ಅಡ್ಡಿ ಇಲ್ಲವೆಂದು ಒಪ್ಪಿದರು. ಆದರೂ ಒಟ್ಟಿನಲ್ಲಿ ಎರಡೂ ಸರಕಾರಗಳ ನಡುವೆ ನಡೆದ ಮಾತುಕತೆಗಳು ನಿಷ್ಫಲವಾದವು.

ಸಂಧಾನಭಂಗದ ಪ್ರತಿಕ್ರಿಯೆ

ಹೈದರಾಬಾದ ಸರಕಾರದ ವಕ್ತಾರನು ಹಿಂದುಸ್ತಾನ ಸರಕಾರದ ಕರಾರುಗಳು ಅಗ್ರಾಹ್ಯವೆಂದು ಹೇಳಿದನು. ಈ ಬಗ್ಗೆ ಮುದರಿಯುತ್ತ ಇವರು, ೧೯೪೭ ಅಗಸ್ಟ ೧೫ರ ಮೊದಲು ಗಡಿಯ ಮೇಲೆ ದಾಳಿ ನಡೆದರೆ ದಾಳಿಗಾರರನ್ನು ಬೆನ್ನಟ್ಟಿ ಹೊಡೆಯಲು ಎರಡೂ ಸರಕಾರಗಳಿಗೆ ಅಧಿಕಾರವಿತ್ತು ಎಂದು ಅಂದಿದ್ದಾರೆ. ರಜಾಕಾರರ ಮುಂದಾಳಾದ ಕಾಶೀಮ ರಜವಿಯಂತೂ ಹುಚ್ಚೆದ್ದು ಕುಣಿಯುತ್ತ, ಪಾಣಿಪತ್ತ ಯುದ್ಧದ ಪುನರಾವೃತ್ತಿಯಾಗುವದೆಂದೂ ಮಾತು ಮುರಿದದ್ದರಿಂದ ತನಗೆ ಸಂತೋಷವಾಗಿದೆಯೆಂದೂ ಹೈದರಾಬಾದವನ್ನು ಗುಲಾಮಗಿರಿಯಿಂದ ರಕ್ಷಿಸಲು ಮತ್ತು ಭಾರತದಲ್ಲಿ ನಾನಾ ತರದ ಪೀಡೆಗೆ ಗುರಿಯಾದ ೪।। ಕೋಟಿ ಮುಸಲ್ಮಾನರನ್ನು ಉದ್ಧರಿಸಲು ಇನ್ನೊಂದು ಪಾಕಿಸ್ತಾನ ಕಟ್ಟಬೇಕೆಂದೂ ಹಿಂದುಸ್ತಾನದ ಭೂಗೋಲವನ್ನು ಬದಲಿಸಿ ನಿಜಾಮರ ಮನೆತನದ ಅಸಫಶಾಹಿ ಧ್ವಜವನ್ನು ದಿಲ್ಲಿಯ ಕೆಂಪು ಕೋಟೆಯ ಮೇಲೆ ಹಾರಿಸೋಣವೆಂದೂ ಸಿಕ್ಕಾ ಬಟ್ಟೆ ಕೂಗಾಡಿದ್ದಾನೆ.

ಯುದ್ಧ ಸಿದ್ಧತೆ

ಹಿಂದುಸ್ತಾನ ಸರಕಾರದ ಅಸಂದಿಗ್ಧ ಘೋರಣೆಗೆ ನಿಜಾಮರು ಯಾವ ಉತ್ತರ ಕೊಡುವರೋ. ಅದೇನಿದ್ದರೂ ಮುಂಜಾಗ್ರತೆಯೆಂದು ಗಡಿ ಪ್ರದೇಶದಲ್ಲಿರುವ ಪೋಲೀಸರಿಗೂ ಸೈನಿಕರಿಗೂ ದಾಳಿಗಾರರನ್ನು ಬೆನ್ನಟ್ಟಿ ಹೊಡೆಯಲು ಆಜ್ಞೆ ಕೊಡಲಾಗಿದೆ ಎಂದು ತಿಳಿಯುತ್ತದೆ. ಈ ರೀತಿ ಆಜ್ಞೆ ಕೊಟ್ಟದ್ದು ಔಪಚಾರಿಕವಾಗಿ ಯುದ್ಧ ಸಾರಿರದಿದ್ದರೂ ಯುದ್ಧ ಹೂಡಿದಂತೆಯೇ ಎಂದು ಕೆಲವರ ಅಭಿಪ್ರಾಯವಾಗಿದೆ. ಇತ್ತ ನಿಜಾಮರೂ ಯುದ್ಧ ಸಿದ್ಧತೆಯಲ್ಲಿದ್ದಾರಾಗಿ ತಿಳಿಯುತ್ತದೆ. ನಿಜಾಮ ಸೈನಿಕರು ಮತ್ತು ರಜಾಕಾರರು ಹಿಂದುಸ್ತಾನದ ಮೇಲೆ ದಾಳಿ ಮಾಡಲು ಸಿದ್ಧರಾಗಿರುವರಂತೆ. ಇತ್ತ ಹೈದರಾಬಾದವು ಹಿಂದುಸ್ತಾನದ ಮೇಲೆ ದಾಳಿ ಪ್ರಾರಂಭಿಸುತ್ತಲೇ ಅತ್ತ ಪಾಕಿಸ್ತಾನ ಸೈನಿಕರು ಕಾಶ್ಮೀರದ ಮೇಲೆ ಹೊಸ ದಾಳಿ ಪ್ರಾರಂಭಿಸಿ ಹೊಸದಿಲ್ಲಿಯ ಕಡೆಗೆ ಏರಿ ಹೋಗುವರಂತೆ. ಲಂಡನದಲ್ಲಿ ಓರ್ವ ನುರಿತ ವೈಮಾನಿಕ ತಜ್ಞನ ನೇತೃತ್ವದಲ್ಲಿ ಬಾಂಬರ ಪಡೆಯೊಂದು ತುದಿಗಾಲ ಮೇಲೆ ಸಿದ್ಧವಾಗಿ ನಿಂತಿದೆಯಂತೆ. ಯುದ್ಧ ಸಂಭವಿಸಿದರೆ ಅನುಕೂಲವಾಗಲೆಂದೇ ನಿಜಾಮರು ಗೋವೆಯ ಬಗ್ಗೆ ಪೋರ್ತುಗೀಜರೊಡನೆ ಸಂಧಾನ ನಡೆಸಿದ್ದರೆಂದೂ ಇದು ತಿಳಿದು ಬರುತ್ತಲೇ ಹಿಂದುಸ್ತಾನ ಸರಕಾರವು ಪೋರ್ತುಗಾಲ ಸರಕಾರಕ್ಕೆ ಒಂದು ರಾಯಭಾರ ಕಳುಹಿ ಗೋವೆಯ ಸದ್ಯದ ಸ್ಥಾನಮಾನಗಳಲ್ಲಿ ಯಾವದೇ ಬದಲಾವಣೆಯಾದದ್ದು ಕಂಡುಬಂದಲ್ಲಿ ಹಿಂದುಸ್ತಾನ ಸರಕಾರವು ತನ್ನ ಗಡಿರಕ್ಷಣೆಯ ಉದ್ದೇಶದಿಂದ ಗೋವೆಯನ್ನು ತನ್ನ ಆಡಳಿತಕ್ಕೆ ಒಳಪಡಿಸಿಕೊಳ್ಳಬೇಕಾಗುವದು ಎಂದು ತಿಳಿಸಿದ್ದರು ಇದರ ಫಲವಾಗಿ ನಿಜಾಮರ ಹೊಂಚು ಸದ್ಯಕ್ಕಂತೂ ನಿಷ್ಫಲವಾಗಿದೆ. ಹಿಂದುಸ್ತಾನ ಹೈದರಾಬಾದದ ನಡುವೆ ಯುದ್ಧವಲ್ಲದೆ ಇನ್ನು ಬೇರೆ ಮಾರ್ಗವಿಲ್ಲ ಎನ್ನುವ ಸ್ಥಿತಿ ಇಂದು ಬಂದಿದೆ.

ಕೋಲಾರ ಚಿನ್ನದ ಗಣಿಯ ಕಮ್ಯುನಿಸ್ಟ ಪಕ್ಷದ ೧೦೧ ಜನ ಕೂಲಿಕಾರರು ಮಂತ್ರಿವರ್ಯ ಮರಿಯಪ್ಪನವರನ್ನು ಕಂಡು ತಮ್ಮ ದೂರುಗಳನ್ನು ತೋಡಿಕೊಂಡರು ಆಹಾರ ಸೀದಾ ಪ್ರಮಾಣ ಹೆಚ್ಚಿಸಬೇಕು ಕೇವಲ ಅಕ್ಕಿ ರಾಗಿ ಕೊಡಿಸಬೇಕು ಎಂಬುದೇ ಅವರ ಮುಖ್ಯ ಬೇಡಿಕೆ. ಆದರೆ ಮೈಸೂರ ಸಂಸ್ಥಾನದಲ್ಲಿ ಅಕ್ಕಿ ರಾಗಿ ಮೇಲಿನ ನಿಯಂತ್ರಣ ಹೋಗಿದ್ದರಿಂದ ಕೂಲಿಕಾರರಿಗೆ ಅವನ್ನು ಒದಗಿಸಲು ಸಾಧ್ಯವಿಲ್ಲದಾಗಿದೆ.

ಹಣದ ಅತಿ ಪ್ರಸರಣ ಇನ್ನು ಸಾಕು

ಧಾರಣೆ-ಕೂಲಿ ದರಗಳ ಓಟವನ್ನು ತಡೆಯುವ ಉಪಾಯಗಳು

(ಲೇ:— ಎನ್. ಆರ್. ಅಪರಂಜಿ, ಎಂ. ಎ.)

ಹಣದ ಅತಿ ಪ್ರಸರಣವು ಪ್ರಪಂಚದ ಎರಡನೇ ಮಹಾಯುದ್ಧದಲ್ಲಿ ಹುಟ್ಟಿದ ಕೂಸು. ಹಿಂದುಳಿದ ಮತ್ತು ಮುಂದುವರಿದ ದೇಶಗಳು ಎಂಬ ತಾರತಮ್ಯವಿಲ್ಲದೆ ಎಲ್ಲ ಕಡೆಗೂ ಹಬ್ಬಿದ ಜಾಡ್ಯವಿದು. ಇಂದು ಇದು ಪ್ರಪಂಚದ ಸಮಸ್ಯೆಯಾಗಿ ಕುಳಿತಿದೆ. ಈಚಿಗೆ ಅಮೇರಿಕದ ಅಧ್ಯಕ್ಷ ಟ್ರೂಮನ್ನರು ಅಲ್ಲಿಯ ಹಣದ ಅತಿಪ್ರಸರಣವನ್ನು ತಡೆಯದೇ ಬಿಟ್ಟರೆ ಮುಂದೆ ಎಂತಹ ಗಂಭೀರ ಪರಿಸ್ಥಿಯನ್ನದು ತಂದೊಡ್ಡಬಹುದು ಎಂದು ಅಲ್ಲಿಯ ಸರಕಾರಕ್ಕಾಗಲೇ ಎಚ್ಚರಿಕೆ ಇತ್ತಿದ್ದಾರೆ. ಅತಿಪ್ರಸರಣವನ್ನು ತಡೆಯಲು ತಮ್ಮ ಏಳು ಸೂಚನೆಗಳನ್ನು ಕೊಟ್ಟದ್ದಾರೆ. ಬ್ರಿಟನ್ನಿನಲ್ಲೂ ಕಳೆದ ಮೇ ೧೮ ನೇ ತಾರೀಖು ಕೂಲಿಕಾರ ಪಕ್ಷದ ಸಭೆಯಲ್ಲಿ ಮಾತನಾಡುತ್ತ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಡಾ. ಡಾಲ್ಟನ್‌ರವರು ಬ್ರಿಟನ್ನಿನ ಹಣದ ಅತಿ ಪ್ರಸರಣವು ಈಗ ಎಂತಹ ವಿಷಮಸ್ಥಿತಿಗೆ ಮುಟ್ಟಿದೆ ಎಂಬುದನ್ನು ವಿವರಿಸಿ ಮುಂದೆ ಬರಬಹುದಾದ ಭೀಕರ ಪರಿಸ್ಥಿತಿಯನ್ನು ತಪ್ಪಿಸಲು ಉಗ್ರ ಉಪಾಯಗಳನ್ನು ಕೈಕೊಳ್ಳಲೇಬೇಕೆಂದು ಸೂಚಿಸಿದರು. ಎಷ್ಟು ಪ್ರಾರ್ಥಿಸಿಕೊಂಡರೂ ದೊಡ್ಡ ದೊಡ್ಡ ವ್ಯಾಪಾರಸ್ಥರು ಮತ್ತು ಉದ್ದಿಮೆಗಾರರು ತಮ್ಮ ಲಾಭಗಳನ್ನು ಕಡಿಮೆ ಮಾಡಿಕೊಳ್ಳಲಿಲ್ಲ—ಸರಕಾರದವರೇ ಇನ್ನು ಒತ್ತಾಯದಿಂದ ಅವರ ಭಯಂಕರ ಲಾಭದ ಮಟ್ಟವನ್ನು ಇಳಿಸಬೇಕು. ಇದರೊಡನೆ ವಸ್ತುಗಳ ಉತ್ಪಾದನೆಯನ್ನೂ ಹೆಚ್ಚಿಸಬೇಕು ಎಂದು ಡಾ. ಡಾಲ್ಟನ್ನರು ನುಡಿದರು.

ಡಾ. ಡಾಲ್ಟನ್ನರವರ ಮಾತು ನಮ್ಮ ದೇಶಕ್ಕೂ ಎಷ್ಟು [illegible] ಅನ್ವಯಿಸುತ್ತದೆಂದು ಬೇರೆ ಹೇಳಬೇಕಾಗಿಲ್ಲ. ನಮ್ಮ ದೇಶದಲ್ಲೂ ಹಣದ ಅತಿಪ್ರಸರಣವು ಕನಸಿನಲ್ಲಿಯೂ ನೆನೆಯದಿದ್ದಷ್ಟು ಮಟ್ಟಕ್ಕೆ ಏರಿದೆ. ೧೯೩೯ ನೇ ವರ್ಷ ಅಗಸ್ಟ ತಿಂಗಳಲ್ಲಿ ನಮ್ಮ ದೇಶದಲ್ಲಿ ಒಟ್ಟು ೧೭೯ ಕೋಟಿ ರೂಪಾಯಿಗಳ ನೋಟುಗಳು ಚಲಾವಣೆಯಲ್ಲಿದ್ದವು. ಆಗ ಎಲ್ಲರಿಗೂ ತಿಳಿದಂತೆ ನಮ್ಮ ದೇಶದಲ್ಲಿ ವಸ್ತುಗಳ ಧಾರಣೆಗಳು ಸಮಂಜಸವಾಗಿದ್ದವು. ಕೂಲಿ, ಲಾಭ ಮತ್ತು ಬಡ್ಡಿ ದರಗಳು ಹೆಚ್ಚು ಕಡಿಮೆ [illegible] ಮಟ್ಟದಲ್ಲಿದ್ದವೆಂದೇ ಹೇಳಬೇಕು. ಆದರೆ ಇಂದು ನಮ್ಮ ನೋಟುಗಳ ಚಲಾವಣೆಯು ೧೭೯ ಕೋಟಿ ರೂಪಾಯಿಗಳಿಂದ [illegible] ಕೋಟಿ ರೂಪಾಯಿಗಳಿಗೇರಿದೆ. ಈ ಹಣದ ಚಲಾವಣೆಗೆ ತಕ್ಕಂತೆ ನಮ್ಮ ವಸ್ತುಗಳ ಉತ್ಪಾದನೆಯು [illegible] ನಮ್ಮ ಬೆಲೆಗಳು ಮತ್ತು ಲಾಭಗಳು ಇಂದಿನ ಮಟ್ಟಕ್ಕೆ ಏರುತ್ತಿರಲಿಲ್ಲ. ಅದಕ್ಕೆ ಬದಲಾಗಿ ನಮ್ಮ ದೇಶದ ನಿರುದ್ಯೋಗತನ ತೊಲಗುತ್ತಿತ್ತು. ಹೆಚ್ಚಿದ ಉತ್ಪಾದನೆಯು ನಮ್ಮ ಯುದ್ಧ ಪ್ರಯತ್ನಕ್ಕೆ ಹೋಗುತ್ತಿತ್ತು. ಮೊದಲಿದ್ದ ಧಾರಣೆಗಳು [illegible] ಎಲ್ಲರಿಗೂ ಅನುಕೂಲವಾಗುವಂತೆ [illegible] ತ್ತಿದ್ದವು.

ಜೀವನದ ವೆಚ್ಚ ಏರಿತು

ಆದರೆ ಈಗಾದ ಸ್ಥಿತಿಯೇ ಬೇರೆ. ಯಾವುದೇ ದೇಶದಲ್ಲಿ ವಸ್ತುಗಳ ಧಾರಣೆಗಳು ವಸ್ತುಗಳ ಬೇಡಿಕೆ ಮತ್ತು ಪೂರೈಕೆಗಳಿಂದ ನಿರ್ಧರಿಸಲ್ಪಡುತ್ತವೆ ಎಂಬುದು ಅರ್ಥಶಾಸ್ತ್ರದ ಸಾಮಾನ್ಯ ತತ್ವ. ಹಾಗೆಯೇ ಎಲ್ಲ ವಸ್ತುಗಳ ಧಾರಣೆಗಳೂ ಆ ವಸ್ತುಗಳನ್ನು ಕೊಂಡುಕೊಳ್ಳಲು ಜನರ ಕೈಯಲ್ಲಿ ಎಷ್ಟು ಹಣವಿದೆ ಎಂಬುದನ್ನು ಅವಲಂಬಿಸುತ್ತದೆ. ೧೯೩೯ ರಲ್ಲಿ ಎಲ್ಲ ವಸ್ತುಗಳ ಧಾರಣೆಗಳೂ ಸಮಂಜಸವಾಗಿದ್ದಾಗ ದೇಶದ ಒಟ್ಟು ಹಣ ೧೭೯ ಕೋಟಿ ರೂಪಾಯಿಗಳಿದ್ದವು. ೧೯೪೮ ರಲ್ಲಿ ಈ ಹಣದ ಮುದ್ರಣವು [illegible] ಕೋಟಿ ರೂಪಾಯಿಗಳಷ್ಟಿದೆ. [illegible]

[illegible]

ಪರಿಣಾಮವೇನು

೧ ಹಣದ ಅತಿಪ್ರಸರಣವನ್ನು ಮಾಡದೆ ಜನರಿಂದ ಬರುವ ಹೆಚ್ಚು ತೆರಿಗೆ ಅಥವಾ ಸಾಲಗಳ ಮೂಲಕ ಯುದ್ಧ ಪ್ರಯತ್ನವನ್ನು ಸಾಗಿಸಬೇಕಾಗಿದ್ದಿತು.

೨ ಹಣದ ಮುದ್ರಣವನ್ನು ಹೆಚ್ಚಿಸುವದೇ ಉದ್ದಿಶ್ಯವಾಗಿದ್ದಿದ್ದರೆ ಅದರೊಡನೇ ಅನುಕ್ರಮವಾಗಿ ವಸ್ತುಗಳ ಉತ್ಪತ್ತಿಯನ್ನೂ ಹೆಚ್ಚಿಸಬೇಕಾಗಿತ್ತು.

ಆದರೆ ಆಗಿದ್ದ ಸರಕಾರವು ಇಲ್ಲಿ ಈ ಎರಡು ವಿಧಾನಗಳನ್ನೂ ಅನುಸರಿಸಲಿಲ್ಲ. ಯುದ್ಧವನ್ನು ಗೆಲ್ಲಬೇಕಾದ್ದರಿಂದ ಸುಲಭವಾದ ಹಾದಿಯಾದ ನೋಟುಗಳ ಅತಿಪ್ರಸರಣವನ್ನೇ ಅವರು ಕೈಕೊಂಡರು. ಇದರಿಂದ ಧಾರಣೆಗಳು ಮಿತಿಮೀರಿ ಏರಿದವು. ಲಾಭಗಳು ಮುಗಿಲು ಮುಟ್ಟಿದವು. ಆದರೆ ಅದಕ್ಕೆ ತಕ್ಕಂತೆ ಕೂಲಿ ಮತ್ತು ಸಂಬಳಗಳು ಏರಲಿಲ್ಲ. ದೇಶದ ಕಾರ್ಮಿಕರೆಲ್ಲರಿಗೂ ಅವರ ಜೀವನಮಟ್ಟದಲ್ಲಿ ಕಡಿತವುಂಟಾಯಿತು. ಅವರೂ ಹೆಚ್ಚು ಕೂಲಿ ಮತ್ತು ಸಂಬಳಗಳನ್ನು ಬೇಡಿದರು. ಇದರಿಂದ ವಸ್ತುಗಳ ಬೆಲೆಗಳು ಮತ್ತೂ ಹೆಚ್ಚಿದವು. ಈಗ ಧಾರಣೆ ಮತ್ತು ಕೂಲಿಗಳು ಚಕ್ರಭೀಮನ ಕೋಟೆಯಲ್ಲಿ ಸಿಕ್ಕಿಕೊಂಡಂತಾಗಿವೆ. ಎರಡೂ ಹಾದಿಯನ್ನು ತಪ್ಪಿಸಿಕೊಂಡಿವೆ.

ಹಣದ ಅತಿಪ್ರಸರಣವನ್ನು ಹೀಗೆಯೇ ಲಗಾಮಿಲ್ಲದೆ ಬಿಟ್ಟರೆ ಏನಾಗುತ್ತದೆ ಎಂಬುದೂ ಒಂದು ಪ್ರಶ್ನೆ. ಪ್ರಪಂಚದ ಮೊದಲನೆಯ ಮಹಾಯುದ್ಧದ ನಂತರ ಜರ್ಮನಿಯಲ್ಲಿ ಹಣದ ಅತಿಪ್ರಸರಣವು [illegible]. ಆಗ ಜನರು ಸಾಮಾನು ವಸ್ತುಗಳನ್ನು ಕೊಂಡುಕೊಳ್ಳಬೇಕಾದರೂ [illegible] ಕೊನೆಗೆ ವಸ್ತುಗಳ ಬದಲಾಗಿ ನೋಟುಗಳನ್ನು ಕೊಡುವುದರ ಬದಲು ವಸ್ತುಗಳನ್ನೇ [illegible] ಮಾಡುವ ಪರಿಸ್ಥಿತಿಯು ಬಂದಿತ್ತು. [illegible] ಹೀಗೆಯೇ [illegible] ಕೊನೆಗೊಂದು ದಿನ ನಾವೂ ಒಂದು ಮಣ ತುಪ್ಪಕ್ಕೆ ೧೦೦೦೦ ರೂಪಾಯಿ ಒಂದು ಬದನೆಕಾಯಿಗೆ ೫ ರೂಪಾಯಿಗಳನ್ನು ಕೊಡಬೇಕಾಗಬಹುದು. ಈ ಸ್ಥಿತಿಗೆ ಮುಟ್ಟಿದ ನಂತರ ತಿಳಿದೇ ಇದೆ ವಸ್ತುಗಳನ್ನು ಅದಲು ಬದಲು ಮಾಡುವ ಉಪಕ್ರಮ. ಆಗ ಹಣವು ತಾನಾಗಿಯೇ ನಾಶವಾಗುವದು.

ಇಂತಹ ಪ್ರಸಂಗವು ಬಾರದಂತೆ ಸರಕಾರವು ಈಗಿನಿಂದಲೇ ಹಣದ ಅತಿಪ್ರಸರಣವನ್ನು ತಡೆಯುವದು ಉಚಿತ. ಈ ಹಿಂದೆ ಹಿಂದುಸ್ತಾನದ ಎಲ್ಲ ಅರ್ಥಶಾಸ್ತ್ರಜ್ಞರು ಸೇರಿ ಎರಡು ಸಾರಿ ಸರಕಾರಕ್ಕೆ ಮನವಿಯೊಂದನ್ನು ಒಪ್ಪಿಸಿದ್ದರು. ಅದರಲ್ಲಿ ಅವರು ಹಣದ ಅತಿಪ್ರಸರಣವನ್ನು ಕೂಡಲೆ ತಡೆಯಬೇಕೆಂದು ಸೂಚಿಸಿದ್ದರು.

ಸರಿಯಾದ ಮಾರ್ಗ

ಸದ್ಯಕ್ಕೆ ನಮ್ಮಲ್ಲಿಯೂ ಹೆಚ್ಚಾಗಿ ಮುದ್ರಿತವಾದ ನೋಟುಗಳನ್ನು ಸರಕಾರವು ವಾಪಸ ತೆಗೆದುಕೊಳ್ಳಬೇಕು. ಡಾ. ಡಾಲ್ಟನ್ನರವರು ಸೂಚಿಸಿದಂತೆ [illegible] ಲಾಭವನ್ನು [illegible] ಕಡಿಮೆ ಮಾಡಬೇಕು. [illegible]

[illegible]

[illegible]

ರೂಪರಂಗ

ಮನರಂಜನೆ

ಇಂದಿನ ಚಲಚ್ಚಿತ್ರವು ಕೇವಲ ಮನರಂಜನೆಯನ್ನು ಅರ್ಥಾತ್ ಹಣ್ಮೂಲಕ ರೊಕ್ಕಗಳಿಸುವುದನ್ನು ತನ್ನ ಗುರಿಯನ್ನಾಗಿ ಇಟ್ಟುಕೊಂಡಿದೆ. ಅದರಿಂದಲೇ ಒಳ್ಳೆಯ ಚಿತ್ರಗಳು, ನಾಗರಿಕತೆಯಲ್ಲಿ ಮೇಲ್ಮಟ್ಟದವುಗಳು ದುರ್ಲಭವಾಗಿವೆ. ಎಂಥ ಚಿತ್ರವನ್ನಾದರೂ ಅದು ಹಾಗಿದೆ ಹೀಗಿದೆ, ಅವಳ ನರ್ತನವಿದೆ, ಇವಳ ಮತ್ತೊಂದಿದೆ ಎಂದು, ಪ್ರಕಟನೆಗಳ ಮೂಲಕ ಬಹುಸಂಖ್ಯಾಕ ಅರ್ಥರಸಿಕರ ಮನಸ್ಸನ್ನು ಮರುಳುಗೊಳಿಸುವುದೇ ತಮ್ಮ ಧರ್ಮವೆಂದು ನಿರ್ಮಾಪಕರೂ ಪ್ರದರ್ಶಕರೂ ತಿಳಿದಂತಿದೆ. ಈ ಮಾತನ್ನು ರೋಜರ ಮಾನ್ವೆಲ್ಲರು ವಿವರಿಸುತ್ತ ಮನರಂಜೆಯಲ್ಲಿ ಈಗ ಇರುವ ರಂಜಕಗಳ ಪಟ್ಟಿಯನ್ನು ಈ ಕೆಳಗಿನಂತೆ ಕೊಟ್ಟದ್ದಾರೆ.

(೧) ಸುಂದರರು ಸುಂದರಿಯರನ್ನು ಪಡೆಯುವುದು.

(೨) ಸುಂದರಿಯರು ಸುಂದರರನ್ನು ಪಡೆಯುವುದು.

(೩) ಬಟ್ಟೆ ಬರೆ, ಆಭರಣಾದಿಗಳ ವೈಭವ.



ಇಂಗ್ಲೆಂಡಿನ ಹೆಲ್‌ಸ್ಟನ್ನಿನಲ್ಲಿ ದಾರಿಯುದ್ದಕ್ಕೂ ಬೆಳಗಿನಿಂದ ಸಂಜೆಯ ತನಕ ಹೂವಿನುಡಿಗೆಯ ನರನಾರಿಯರು ಕಳೆದ ಮೇ ೮ರಲ್ಲಿ ಕುಣಿಯುತ್ತ ಸಾಗಿದ್ದು ಹಳೆಯ ಕಾಲದ ಒಂದು ನರ್ತನವ್ರತವನ್ನು ನಿದರ್ಶಿಸುತ್ತದೆ. ಮೇಲಿನದು ಆ ನರ್ತನದಲ್ಲಿಯ ಒಂದು ದೃಶ್ಯ. ಪೋರಾ ಡೆ ಎಂಬವಳು ನರ್ತನಕ್ಕೆ ಜನರನ್ನು ಕರೆದೊಯ್ಯುತ್ತಿದ್ದಾಳೆ.

(೪) ಹೆಂಗಸರು, ಅವರಿಗಿಂತ ಸ್ವಲ್ಪ ಕಡಿಮೆಯೆಂಬಷ್ಟು, ಗಂಡಸರು— ಅದೃಶ್ಯ ವಸ್ತ್ರ ಧರಿಸುವುದು (ನಗ್ನರಾಗಿರುವುದು).

(೫) ಲಿಂಗಬುದ್ಧಿಯನ್ನು ಪ್ರೇರಿಸುವ ಸಂಶಯಾತ್ಮಕ ಸನ್ನಿವೇಶಗಳು.

(೬) ಅಪರಾಧ ಮತ್ತು ಕ್ರೌರ್ಯಗಳಿಂದ ಉತ್ಸುಕತೆ ತಾಳುವುದು.

(೭) ಅಪರಾಧದ ಪತ್ತೆಯಿಂದ ಆನಂದೋದ್ರೇಕ ಹೊಂದುವುದು.

(೮) ಅತಿರೇಕವಾದ ದೈಹಿಕ ಅಪಾಯದಿಂದ ಉಲ್ಲಾಸಗೊಳ್ಳುವುದು.

[illegible]

(೧೩) ಮಾತೃಪ್ರೇಮ [illegible] ಚಿಂತನ.

(೧೭) ಅಪರಿಚಿತವೆನಿಸುವ [illegible] ನಡೆನುಡಿಗಳನ್ನು ಕಂಡು ವಿಲಕ್ಷಣ [illegible] ಹಲ ಪಡುವುದು.

(೧೮) ಅಪೂರ್ವ ರೀತಿನೀತಿ [illegible] ಸಂಸ್ಥೆಗಳನ್ನು ಕಂಡು [illegible]

(೧೯) ಕೃತಕ ವಿಜ್ಞಾನ [illegible] ವಿಲಕ್ಷಣ ಕುತೂಹಲ.

(೨೦) ಧಾರ್ಮಿಕರತ್ತ ಮತ್ತು [illegible] ಭಾವಿಗಳ ಕಡೆಗೆ ಕಂಡು ಭಯಭಕ್ತಿ [illegible] ವುದು.

(೨೧) ಸುಂದರಿಯರ ಪ್ರೇಮದ [illegible] ಯನ್ನು ನೋಡಿ ಭಯಭಕ್ತಿ [illegible] ಮಾಡುವುದು.

(೨೨) ಆಮುಷ್ಮಿಕ ಮತ್ತು [illegible] ಪ್ರಿಯಸತ್ಯದತ್ತ ನಮ್ರಭೀತಿ [illegible]

ಇವು ಜನರ ಮನವನ್ನು [illegible] ಚಲಚ್ಚಿತ್ರ ನಿರ್ಮಾಪಕರ ಗುರಿಗಳು!

—[illegible]

ಆಜ್ ಔರ್ ಕಲ್

“ಚಿತ್ರಾ ಪ್ರೊಡಕ್ಷನ್ಸ್” ದಲ್ಲಿ ಆಜ್ [illegible] ಕಲ್ ಎಂಬ ಚಿತ್ರ ತಯಾರಾಗಿದೆ. [illegible] ನಯನತಾರೆ ಮತ್ತು ಶ್ಯಾಮರು [illegible] ಪಾತ್ರ ವಹಿಸಿದ್ದಾರೆ. ಗೀತೆ, ರಶೀ[illegible] ಮತ್ತು ಆರೀಫ್ ಎಂಬವರು [illegible] ರಿಗಳು. ಈ ಚಿತ್ರದ ಕಥೆಯನ್ನು [illegible] ನಯದಲ್ಲಿ ಶ್ರೀ ಕೆ. ಏ. ಅಬ್ಬಾಸರು [illegible] ದ್ದಾರೆ. ಶ್ರೀ ಕುರ್ಶೀದ ಅನ್ವಾರರು [illegible] ನಿರ್ದೇಶಕರು. ಕಥೆಯ ಮುಖ್ಯ [illegible] ವುದು “ಇಂದಿನ ಹುಡುಗನು [illegible] ಗಿಯನ್ನು ಎದುರಾಗುವುದರಲ್ಲಿ” [illegible] ಅಂದರೆ ತರುಣಿಯ ಜೀವನ ದೃಷ್ಟಿ [illegible] ಹೊಂದಿದ್ದು ತರುಣನದು ಈ ಕಥೆಯಲ್ಲಿ [illegible] ಲಾಗಿಲ್ಲ. ಇದರಿಂದ ತರುಣನು ಬಹಳ [illegible] ಜನಕ ಸ್ಥಿತಿಗೀಡಂತಾಗುವದು.

ಲಂಡನ್ನಿನಲ್ಲಿ ಚಲಚ್ಚಿತ್ರ

ಬಹಳ ಮಟ್ಟಿಗೆ ಲಂಡನ್ ಚಿತ್ರ[illegible] ಬ್ರಿಟಿಶ ನಟನಟಿಯರನ್ನೇ ಅವಲಂಬಿಸಿ[illegible] ಆದರೂ ಅಲ್ಲಲ್ಲಿ ಹೊಸಬರನ್ನೂ [illegible] ರನ್ನೂ ತೆಗೆದುಕೊಂಡ ಉದ[illegible] ಅಮೇರಿಕದ ಪ್ರಸಿದ್ಧ ತಾರನೆನಿಸಿದ [illegible] ಗೋಡ್ಡಾರ್ಡ್, ಸ್ವೀಡನ್ನಿನ [illegible] ಜೆಟ್ಟರಲಿಂಗ್, ಫ್ರೆಂಚ ತಾರೆ [illegible] ಸೈಮನ್ ಮುಂತಾದವರೀಗ ಆಂಗ್ಲ [illegible] ಯಗಳಲ್ಲಿ ಕಾಣಿಸಿಗುತ್ತಾರೆ ಎಂದು [illegible] ಎಚ್ ವುಲ್ಸೀನ್ ಬರ್ಗರು ಬರೆಯು[illegible]

ಮೊದಲು ಹಾಲಿವುಡ್ಡಿಗೆ ಆಂಗ್ಲ [illegible] ಯರನ್ನು ಕರೆಸಿಕೊಳ್ಳಲಾಗುತ್ತಿದ[illegible] ಲಂಡನ್ನಿಗೆ ಹಾಲಿವುಡ್ಡಿನ ಕಲಾ[illegible] ಬಂದು ಕೆಲಸ ಮಾಡುತ್ತಿದ್ದಾರೆ. [illegible] ಯುರೋಪಿನ ಅಭಿನೇತರು [illegible] ಕಾಣಬರುವರು. ಇದರಿಂದ ಬ್ರಿಟಿಶ [illegible] ಭಾಗವಹಿಸಿದ ತಮ್ಮ ಕೀರ್ತಿ ಹೆಚ್ಚು[illegible] ಕಲೆಗಾರರೂ ಅನ್ಯದೇಶದ [illegible] ತಮ್ಮಲ್ಲಿ ಪಾತ್ರವಹಿಸಿದರೆ [illegible] ಪೇಟೆಯಲ್ಲಿ ತಮ್ಮ ಚಿತ್ರಗಳಿಗೆ [illegible] ಬರಬಹುದೆಂದು ಬ್ರಿಟಿಶ ನಿರ್ಮಾ[illegible]

[illegible]

ಕಾರ್ಯವೇ [illegible] ಯಾಗಲು ಕಾರಣವಾಯಿತು. ಬ್ರಿಟಿಶ ರೂಪರಂಗ ತನ್ನವೇ [illegible]

[illegible] ಅವನ್ನತಿಶ[illegible] ನಾಡಿನ ತಾರತಾರೆಯರ [illegible] ವೈಶಿಷ್ಟ್ಯ ವೈವಿಧ್ಯಗಳಿಗೆ [illegible] ಬಂದಿಲ್ಲ. ಇನ್ನತ್ತಿನ ವಿಶಿಷ್ಟ [illegible] ಹಬ್ಬಾಗುವ ಚಿತ್ರಗಳಿಗೆ [illegible] ಆಧಾರ ದೊರೆತಂತಾಗಿದೆ.

[illegible] ಕಲಿಸಿದರೆ
ವಯಸ್ಕ ಶಿಕ್ಷಣದಲ್ಲಿ

[illegible]

[illegible] ವಯಸ್ಕರ ಶಿಕ್ಷಣದ [illegible] ಅವನಿಗೆ ಓದು [illegible] ಅವನ [illegible] ಮತ್ತು [illegible] ಅವನಿಗೆ ನೈತಿಕ [illegible] ಸಾಮಾಜಿಕ [illegible] ಕೊಟ್ಟು [illegible] ಜೀವನವನ್ನು [illegible] ರಾಷ್ಟ್ರ ತನ್ನ ಮನಶ್ಶಕ್ತಿಯನ್ನು, [illegible] ನ್ಯಾಯವಿವೇಕವನ್ನು, ನಿಷ್ಪಕ್ಷಪಾತ [illegible] ಶಕ್ತಿಯನ್ನು ಹೊಂದು ಮಾಡಿ [illegible] ವನೋ ಅದು ಬಹಳ ಕಾಲ ಬಾಳಲಾ[illegible]

ನಿಜವಾದ ಶಿಕ್ಷಣ

[illegible] ಭಾವನೆಯಿಂದಲೂ ಉದಾರ [illegible] ಕಲ್ಪಿಸಲ್ಪಟ್ಟ ಶಿಕ್ಷಣದಿಂದ [illegible] ತಾವೇ ತಮ್ಮೊಳಗೆ ವಿಚಾರ ಮಾಡುವ [illegible] ಸತ್ಯಾಸತ್ಯವಿವೇಕವೂ ಜಾತೀಯ [illegible] ರಾಜಕೀಯ ಪ್ರಚಾರದ ರಭಸಕ್ಕೆ [illegible] ಹೋಗದಿರುವ ಸಾಮರ್ಥ್ಯವೂ ಬರು[illegible]ಬೇಕು. ಶಾಲೆ, ಆಕಾಶವಾಣಿ, ಚಲ[illegible], ನಾಟಕ, ಪತ್ರಿಕೆ ಇವೆಲ್ಲವೂ ಒಂದೇ [illegible] ಮತ್ತು ಸಾಂಸ್ಕೃತಿಕ ಪದ್ಧತಿಯ [illegible]ಗಳೆಂದು ಭಾವಿಸಿ ಜನರ ನೈತಿಕ, ಸಾಮಾಜಿಕ, ಸಾಂಸ್ಕೃತಿಕ ಮಟ್ಟವನ್ನು ಎತ್ತ[illegible] ಜನಜೀವನವನ್ನು ಸುಸಂಪನ್ನವಾಗಿ [illegible] ಉಪಯೋಗಿಸಬೇಕು. ಚಲಚ್ಚಿತ್ರ, ಆಕಾಶವಾಣಿ, ರಂಗಭೂಮಿ, ಪತ್ರಿಕಾ ಪ್ರಪಂಚ [illegible] ಸಸ್ಯಕ್ಕೆ ಮುಸುಕಿರುವ ನೀರಸ ನಿರ[illegible]ತೆಯನ್ನು ಕಳಚಿ ಒಗೆದು, ಅಲ್ಲಿ ದೇಶದ [illegible]ವಂತರು ಪ್ರಕಾಶಕ್ಕೆ ಬರುವಂತೆ [illegible] ದೂರದರ್ಶಿ ಧೋರಣೆಯನ್ನು ಸರಕಾ[illegible] ವಹಿಸಬೇಕು. ಸ್ವಾರ್ಥಿಗಳ ಪ್ರಾಬಲ್ಯ[illegible]ದಿಂದ ಅವುಗಳನ್ನು ಮುಕ್ತಗೊಳಿಸಿ [illegible] ಶಿಕ್ಷಣದ ಸಾಧನಗಳಾಗಿ ಮಾತ್ರ [illegible] ಸಾಮಾಜಿಕ ಕರ್ತವ್ಯ ಭಾವನೆಯ[illegible] ಲಾಭಬಡುಕರ ಧನಸಂಗ್ರಹದ ಉಪಾಯ[illegible] ಆಗಗೊಡಬಾರದು.

ವಯಸ್ಕ ಶಿಕ್ಷಣ ಚಳವಳಿ ನಮ್ಮ ಜನರ ಜೀವನವನ್ನು ಸುಸಂಪನ್ನವಾಗಿ ಮಾಡಬೇಕು; [illegible]ಭಾಗದಲ್ಲಿ ಸತ್ಯಾಸತ್ಯವಿವೇಕವನ್ನೂ, ಆಚಾರಭಾಗದಲ್ಲಿ ನ್ಯಾಯಾನ್ಯಾಯವಿವೇಕ [illegible] ಉಂಟುಮಾಡುವ ವಿಚಾರ ಶಕ್ತಿಯನ್ನು ಅವರಲ್ಲಿ ಬೆಳೆಸಬೇಕು. ವಯಸ್ಕ ಶಿಕ್ಷಣ ಕೇಂದ್ರ[illegible] ನಮ್ಮ ರಾಷ್ಟ್ರೀಯ ಜೀವನಕ್ಕೆ ಸಜೀ[illegible]ಗಬೇಕು; ಅಲ್ಲಲ್ಲಿಯ ಸಮಾಜದ ಸಾಂಸ್ಕೃತಿಕ ಸಾಮರ್ಥ್ಯವನ್ನು ಒಗ್ಗೂಡಿಸಿ, ಸಹಕಾರದ ಬಲದಿಂದ ತಮ್ಮ ಸುತ್ತಣ ವಾತಾವರಣವನ್ನು ಲೀಲಾಯಮಾನವಾಗಿ ಆತ್ಮೋ[illegible]ದ್ಧಾರಕ್ಕಾಗಿ ವಿನಿಯೋಗಿಸಿಕೊಳ್ಳಲು ಸಾಧ್ಯ[illegible] ಜನರ ಮನಸಿನಲ್ಲಿ ಬಿಂಬಿಸುವ ಸತ್ವಶಾಲಿ ಸ್ಥಾನಗಳಾಗಬೇಕು. ಪ್ರಾಮಾಣಿಕ, ಸಮಾಜ ಸೇವಾಬುದ್ಧಿಯ ಕೆಲವು ಜನ ಕಾರ್ಯಕರ್ತರಾದರೂ ಇದ್ದು ಅವರಿಗೆ ಬುದ್ಧಿ[illegible] ಮಾರ್ಗದರ್ಶನ ಸಿಗಬಹುದಾದಲ್ಲೆಲ್ಲ ಅಂಥ ಕೇಂದ್ರಗಳನ್ನು ಸ್ಥಾಪಿಸುವದು ಸಾಧ್ಯವೂ ಇದೆ, ಅಪೇಕ್ಷಣೀಯವೂ ಹೌದು.

ಎಲ್ಲರೂ ಸ್ವಾಗತಿಸದಿರರು

ತಮ್ಮ ಜೀವನಕ್ಕೆ [illegible] ಆನಂದ, ಪ್ರಕಾಶ, [illegible]ಗಳನ್ನು ತರಲು ಹವಣಿಸುವ ಪ್ರಯ[illegible]ಗಳನ್ನು ಯಾವ ಸಮಾಜವೂ—ಅದೆಷ್ಟೇ [illegible]ನಿಯರಲಿ, ಹೊಟ್ಟೆ ಹೊರೆಯುವದರಲ್ಲೇ [illegible] ಬಹಳ ಕಾಲ [illegible]ಲಾರದು. ಸಂಜೆ ಹೊತ್ತಿನಲ್ಲಿ ಒಂದೆಡೆ ಕಲೆತು [illegible] ಹೋಗಿ ಬತ್ತಿ ಸೇದಿ, ಹಾಡಿ, ಕತೆ ಹೇಳಿ, ಭಜನೆ—ಪಾರಾಯಣಗಳನ್ನು ನಡೆಸುವ ಸಂಪ[illegible]ಗಳು ಒದಗಿದಲ್ಲಿ ಅವರು ಸಂತೋಷಿ[illegible]ದಿರರು. ಹಾಗಾದರೆ ಇಂಥ ಕೂಟಗಳಿಂದಲೆ [illegible] ಪ್ರಾರಂಭಿಸಬಾರದು? ಹೀಗೆ ಪ್ರಾರಂಭ [illegible] ಕೂಟಗಳಲ್ಲಿ ಕೆಲವರು ಸರ್ವಸಾಮಾ[illegible]ನ್ಯವಾದ ಸಮಸ್ಯೆಗಳ ಚರ್ಚೆಯನ್ನು ತೆಗೆ[illegible]ಬಹುದು. "ಚರ್ಚಾಕೂಟ"ಗಳನ್ನು ನಿರ್ಮಿಸಲು ಇದೊಂದು ಒಳ್ಳೆಯ ಅವಕಾಶ. ಅಲ್ಲಿಂದ "ಶಿಕ್ಷಣ ಕ್ರಮ"ಗಳನ್ನೂ ಎಲ್ಲರಿಗೂ ರುಚಿಸುವ, ಉಪಯುಕ್ತವಾದ ವಿಷಯಗಳ ಮೇಲೆ ಭಾಷಣಗಳನ್ನೂ ನಡೆಸಬಹುದು. ಆ ಕೇಂದ್ರದ ಕಾರ್ಯಕರ್ತನಲ್ಲಿ ಮುಂದಾಳ್ತನದ ಕೌಶಲವೂ ಪ್ರೌಢರ ಮಾನಸಿಕ ಅವಸ್ಥೆಯ ಅಲ್ಪಸ್ವಲ್ಪ ಪರಿಜ್ಞಾನವೂ ಇದ್ದರೆ ಅವರು ಅವನ್ನು ವಿಚಾರವಿನಿಮಯದ ರಂಗವನ್ನಾಗಿಯೂ ತತ್ಕಾಲೀನ ವಿಷಯಗಳಲ್ಲಿ ಜನರ ಆಸ್ಥೆ ಬೆಳೆಯುವಂತೆ ಮಾಡುವ ಸಾಧನವನ್ನಾಗಿಯೂ ಮಾಡಿ ತೋರಿಸಬಲ್ಲನು. ಜನರ ಕಲೆ, ಸಂಗೀತಗಳಲ್ಲಿ ಅವರ ಆಸ್ಥೆ ಹೆಚ್ಚಿ[illegible] ಅವರ ಜೀವನ ಸುಸಂಪನ್ನವಾಗಬಲ್ಲದು ಮಾತ್ರವಲ್ಲ, ಕೇಳ್ಪಟ್ಟದ ಸೀಟಿಯ [illegible] ಸಂಗೀತಗಳಿಗೆ [illegible] ಬಲ್ಲದು. ಈ ಒಟ್ಟಿನಲ್ಲಿ [illegible] ಚಲಚ್ಚಿತ್ರಗಳೇ ಮೊದಲಾದ ದರ್ಶನ [illegible] ಸಾಧನಗಳನ್ನು ಉಪಯೋಗಿಸಿ ಅವರ ಆಸ್ಥೆಯನ್ನು ಹೆಚ್ಚಿಸಬಹುದು, ಬುದ್ಧಿ ವೈಶಾಲ್ಯವನ್ನು ವಿಸ್ತರಿಸಬಹುದು. [illegible] ಧ್ಯೇಯಗಳನ್ನು ನಿಜವಾದ ಹುರುಪು, ಆದರ್ಶವಾದಗಳಿಂದ ಮಾತ್ರ ಸಾಧಿಸುವದು ಸಾಧ್ಯ. ಈ ಕೆಲಸದಲ್ಲಿ ಪ್ರತಿಯೊಬ್ಬ ಸುಶಿಕ್ಷಿತನೂ ಕೈಗೊಡುವದವಶ್ಯ.

ರೈತರ ಲೋಕ

ಒಕ್ಕಲುತನವೂ ಒಕ್ಕಲಿಗರೂ

ಲೇ: ಶ್ರೀ [illegible]ಸ್. ಜಿ. ಬಳ್ಳಾರಿ, ಬಿ. ಎಜಿ.

[illegible] ಪುರಾತನ ಕಾಲದಿಂದಲೂ ಭಾರತವು ಒಕ್ಕಲುತನದ ದೇಶವೆಂದು ಪ್ರಸಿದ್ಧಿ ಹೊಂದಿದೆ. ಈಗಲೂ ಪ್ರತೀತಿಯಿದೆ. ಇಷ್ಟು ಫಲವತ್ತಾದ ಭೂಮಿ [illegible] ಇರುವದರಿಂದ [illegible] ವಿಧವಾದ ಬೆಳೆಗಳೂ ಇಲ್ಲಿ ಬೆಳೆಯುತ್ತವೆ. ಈಗಲೂ ೧೦೦ಕ್ಕೆ ೮೦ ರಷ್ಟು ಜನರು ಒಕ್ಕಲುತನದಿಂದಲೇ ಉಪಜೀವಿಸುತ್ತಲಿದ್ದಾರೆ. ಬೇರೆ ಇನ್ನಾವ ದೇಶದಲ್ಲಿಯೂ ಇಷ್ಟು ಜನರು ಒಕ್ಕಲುತನದಲ್ಲಿ ತೊಡಗಿದಂತೆ ತೋರುವದಿಲ್ಲ. ಇಷ್ಟಿದ್ದರೂ ಇಂದು ನಮ್ಮ ಒಕ್ಕಲುತನ ಹದಗೆಟ್ಟಿದೆ. ಹೀನಸ್ಥಿತಿಗೆ ಇಳಿಯುತ್ತಲಿದೆ. ಇದನ್ನು ಈಗಲೆ ತಡೆಗಟ್ಟದಿದ್ದರೆ ಭಯಂಕರವಾದ ವಿಪತ್ತಿಗೊಳಗಾಗಬೇಕಾಗುತ್ತದೆ.

ಎಷ್ಟು ನೈಸರ್ಗಿಕ ಅನುಕೂಲತೆಗಳಿದ್ದರೂ ನಮಗೆ ಸಾಲುವಷ್ಟು ಆಹಾರವನ್ನು ಇಂದು ನಾವು ಬೆಳೆಯಲಾರೆವು. ಜನರು ಅನ್ನಾನ್ನಗತಿಕರಾಗಿ ಅಲೆದಾಡುತ್ತಿದ್ದಾರೆ. ಹಸಿದ ಹಿಂದುಸ್ಥಾನವು ಬಾಯ್ಬಿಡುತ್ತಿದೆ. ಅನ್ನಕ್ಕಾಗಿ, ನಮಗಿಂತಲೂ ಈಗ ಮುಂದುವರಿದ ರಾಷ್ಟ್ರಗಳ ನ್ನೊರೆಹೋಗಬೇಕಾಗಿದೆ. ಇಂಥ ನವನಾಗರಿಕತೆಯಲ್ಲಿಯೂ ಭೀಕರ ಬರಗಾಲದ ಭಯ ಇದ್ದೇ ಇದೆ. ಹಸಿವೆಯಿಂದ ಅದೆಷ್ಟು ಜನ ಕಾಲಸಿಗೆ ಆಹುತಿಯಾಗಿಲ್ಲ. ಇದಕ್ಕೆಲ್ಲ ಏನು ಕಾರಣ? ಯಾರು ಹೊಣೆ?

ರೈತರ ಅನಾಸ್ಥೆ

ಇದಕ್ಕೆಲ್ಲ ಅನೇಕ ಕಾರಣಗಳಿದ್ದರೂ ಭೂಮಿ ಸಾಗುವಳಿ ಮಾಡುವವರಲ್ಲಿ ನಾವು ವಹಿಸುವ ಅಸ್ಥೆ, ತಳೆದ ಧೋರಣ, ಅನುಸರಿಸುವ ಮಾರ್ಗಗಳೇ ಮುಖ್ಯವೆನ್ನಬಹುದು. ಅಲ್ಲದೆ ಪರದಾಸ್ಯದಿಂದ, ಪರಕೀಯರ ಪ್ರಭಾವದಿಂದ ಪಾಶ್ಚಿಮಾತ್ಯರ ಜೀವನಾಡಂಬರವು ನಮ್ಮ ಹಳ್ಳಿಗಳನ್ನೂ ಹೊಕ್ಕಿದೆ. ನೇಗಿಲಯೋಗಿ ಎಂದೆನಿಸಿದ ರೈತನೂ ಅದರ ಪ್ರಭಾವಕ್ಕೆಸಿಲುಕಿ ಬಿದ್ದು ತನ್ನ ಮೇಲಿದ್ದ ಜವಾಬ್ದಾರಿಯನ್ನು ಮರೆತಿದ್ದಾನೆ. ತಾನೇ ದೇಶದ ಅನ್ನೋತ್ಪಾದಕನೆಂಬ ಅರಿವು ಅವನಿಗೆ ಮರೆಯಾಗಿದೆ. ಕೃತ್ರಿಮ ಜೀವನಕ್ಕೆ ಮನಸೋತು, ಮರುಳಾಗಿದ್ದಾನೆ. ಹೀಗಾಗಿ ಅವನ ಆರ್ಥಿಕ ಸ್ಥಿತಿಯೂ ಕೆಟ್ಟಿದೆ. ಸಾಮಾಜಿಕ, ಧಾರ್ಮಿಕ, ನೈತಿಕ ವ್ಯಕ್ತಿಯೂ ಬೇರೆಯಾಗಿ ಸಮಾಜದಲ್ಲಿ ಅವನಿಗೆ ಇರಬೇಕಾದ ಯೋಗ್ಯ ಸ್ಥಾನವಿಲ್ಲ. ಇದು ಬರಿ ದೋಷಾರೋಪಣೆಯಲ್ಲ. ವಸ್ತುಸ್ಥಿತಿ ಹೀಗಿದೆ.

ಒಕ್ಕಲಿಗ, ಒಕ್ಕಲುತನವೆಂದರೆ ಜುಗುಪ್ಸೆಯಾಗಿದೆ. ಮಾತಿನಲ್ಲಿಯೂ "ನಾನೇನು ಒಕ್ಕಲಿಗನೇ?" ಎಂದು ಹೇಳುವಷ್ಟು ಕೆಳಗಿಳಿದಿದೆ ನಮ್ಮ ಒಕ್ಕಲು ಮಕ್ಕಳ ಸ್ಥಿತಿ. ಇತ್ತೀತ್ತಲಾಗಿ ಕೆಲ ಹಳ್ಳಿಗರು ಕೂಡ ಒಕ್ಕಲುತನದಲ್ಲಿ ಅನಾಸಕ್ತಿ ತೋರಿಸುತ್ತಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು. ಕೆಲವರಂತೂ ಹಳ್ಳಿಯ ಜೀವನಕ್ಕೆ ಬೇಸತ್ತು ಪಟ್ಟಣಗಳಲ್ಲಿ ಬಂದು ನೆಲಸುತ್ತಿದ್ದಾರೆ. ಹೊಲಗಳಲ್ಲಿ [illegible] ಸಂಖ್ಯೆ ಕಡಿಮೆಯಾಗಿ ಅಳಿವ ತುಟಾಗ್ರತೆ ಎಲ್ಲೆಡೆಯಲ್ಲಿಯೂ ಹೆಚ್ಚಿ ಮೊದ್ದ ಮೊದ್ದ ಕಮತಗಳು ಮುರಿಯುವ ಪ್ರಸಂಗ ಬಂದೊದಗಿದೆ. ದುಡಿತಕ್ಕೆ ತಕ್ಕಹಾಗೆ ಫಲವೂ ದೊರೆಯದಾಗಿದೆ. ಬಂದ ಬೆಳೆಗೆ ಸಾಕಷ್ಟು ಬೆಲೆ ಬಾರದ್ದರಿಂದ ಜೀವನಾವಶ್ಯವಾದ ಪದಾರ್ಥಗಳನ್ನೂ ಕೊಳ್ಳಲಾರದಷ್ಟು ಆರ್ಥಿಕ ಮುಗ್ಗಟ್ಟಾಗಿದೆ ನಮ್ಮ ರೈತನದು. ಒಕ್ಕಲುತನದ ಬಗ್ಗೆ ಅಪ್ರೀತಿ, ಅನಾದರಗಳುಂಟಾಗಹತ್ತಿವೆ.

ಇಂದು ಒಕ್ಕಲುತನದಲ್ಲಿ ಬಿಡಿಸಬೇಕಾದ ಅನೇಕ ಸಮಸ್ಯೆಗಳಿವೆ. ಒಂದು ಹೊಸ ಮಾದರಿಯ ಭದ್ರವಾದ ತಳಹದಿಯ ಮೇಲೆ ಪುನಃ ಒಕ್ಕಲುತನವನ್ನು ಕಟ್ಟಬೇಕಾಗಿದೆಯಾದ್ದರಿಂದ ಅದರ ಬಗ್ಗೆ ನಿಜವಾದ ಜ್ಞಾನ ಹೊಂದಬೇಕು. ಜನರಲ್ಲಿ ನಿಜವಾಗಿಯೂ ಆದರ ಉಂಟಾಗಬೇಕು.

ರಾಜಮಾರ್ಗವಿಲ್ಲ

ಒಕ್ಕಲುತನದಲ್ಲಿ ಪರಿಪೂರ್ಣತೆಯನ್ನು ಹೊಂದಲು ಅನುಸರಿಸಬೇಕಾದ ಯಾವ ರಾಜಮಾರ್ಗವೂ ಇಲ್ಲವೆಂದು ಹೇಳಬಹುದು. ಬರೀ ಹಣದಿಂದಲೂ ಹಾಗೆ ಜಯ ಹೊಂದಲಾರ. ಇಲ್ಲಿ ಬೇಕಾದದ್ದು ದುಡಿತ, ಅನುಭವ. ಇದರಲ್ಲಿ ಗಳಿಸಿದ ಕೀರ್ತಿ, ಗೆಲುವು ಮುಖ್ಯವಾಗಿ ಅವನ ದುಡಿಮೆಯಿಂದ ಬಂದವುಗಳೇ ವಿನಾ ಅವನು ವ್ಯಯ ಮಾಡಿದ ಹಣದಿಂದಲ್ಲ.

ಸ್ವತಂತ್ರ ಹಿಂದುಸ್ಥಾನವನ್ನು ಬಲಗೊಳಿಸಬೇಕಾದರೆ ಬಹು ಜನರ ಉದ್ಯೋಗವಾದ ಒಕ್ಕಲುತನವೂ ದೇಶದ ಆಧಾರ ಸ್ತಂಭನೆಂದೆ. ನಿಸುವ ಒಕ್ಕಲಿಗನಸ್ಥಿತಿಯೂ ಸುಧಾರಿಸಬೇಕು ಈಗ ಸರಕಾರ ನಮ್ಮದಿದೆ. "ಹಳ್ಳಿಗಳ ಸುಧಾರಣೆ" "ಹಳ್ಳಿಗಳ ಪುನರುದ್ಧಾರವೇ ದೇಶದ ಉದ್ಧಾರ" ಎಂಬ ಕೂಗು ಎಲ್ಲೆಡೆಯಲ್ಲಿಯೂ ಕೇಳಬರುತ್ತಿದೆ. ಪೂಜ್ಯ ಬಾಪೂಜಿಯವರಾದರೂ ಹಳ್ಳಿಗರ ಉದ್ಧಾರಕ್ಕೆ ಬಹಳ ಮಹತ್ವ ಕೊಟ್ಟಿದ್ದರು. ಇಂದು ನಮ್ಮ ದೇಶದ ನಾಯಕರಾದರೂ ಅದಕ್ಕಾಗಿಯೇ ಪ್ರಯತ್ನಿಸುತ್ತಿದ್ದಾರೆ. ಈಗಾಗಲೇ ಕೆಲವೆಡೆಯಲ್ಲಿ ಕಾರ್ಯಾರಂಭವೂ ಆಗಿದೆ. ಆದರೆ ಇತರ ಉದ್ಯೋಗಗಳಂತೆ ಒಕ್ಕಲುತನದಲ್ಲಿ ಅಷ್ಟೊಂದು ಪ್ರಗತಿ ಕಾಣಲೊಲ್ಲದು. ಎಂಥ ಬಲಾಢ್ಯ ಸರಕಾರವಿದ್ದರೂ ಎಂಥ ಸುಮನ್ನೇಶ ವಿದ್ದರೂ ಎಷ್ಟೇ ಪ್ರಯತ್ನಿಸಿದಾಗ್ಯೂ ಜನರ ಸಹಕಾರವಿಲ್ಲದೆ ಸುಧಾರಣೆಗಳಾಗಲಾರವು, ಒಂದು ವೇಳೆ ಆದರೂ ಬಹುಕಾಲ ಬಾಳಲಾರವು. ಅದರಲ್ಲೂ ಈ ಒಕ್ಕಲುತನದಲ್ಲಿ ಪರಸ್ಪರ ಸಹಾಯ ಸಹಕಾರ ಬೇಕೇ ಬೇಕು.

ತಮ್ಮಿಂದಲೇ ತಮ್ಮ ಉದ್ಧಾರ

ಆದ್ದರಿಂದ ಮೊದಲು ಹಳ್ಳಿಗರೇ ಮುಂದೆ ಬರಬೇಕು. ತಮ್ಮ ಜೀವನವನ್ನು ಹೇಗೆ ಮೇಲ್ಮಟ್ಟಕ್ಕೆ ಒಯ್ಯಬಹುದು, ತಮ್ಮ ಮುಕ್ತಿ ಎಲ್ಲಿದೆ ಎಂಬವನ್ನು ಅರಿಯಬೇಕು. ಹೀಗೆಂದ ಮಾತ್ರಕ್ಕೆ ಸರಕಾರದ ಸಹಾಯ ಅನವಶ್ಯಕವೆಂದು ಅಭಿಪ್ರಾಯವಲ್ಲ. ಸರಕಾರವೂ ಎಲ್ಲ ಬಗೆಯ ಸಹಾಯ ಸೌಕರ್ಯಗಳನ್ನೊದಗಿಸಬೇಕು. [illegible] ಯೋಗವಾಗದಂತೆ [illegible] ಜನತೆಯ ಕರ್ತವ್ಯ.

ಇದು ವರೆಗೆ ಒಕ್ಕಲುತನದಲ್ಲಿ ನಡೆದ ಸಂಶೋಧನೆಯ ಪರಿಣಾಮಗಳು ಹೆಚ್ಚಾಗಿ ಪ್ರಯೋಗಶಾಲೆಗಳಲ್ಲಿಯೇ ಉಳಿದಿವೆಯಲ್ಲದೆ ಸರ್ವಸಾಮಾನ್ಯ ಒಕ್ಕಲಿಗನ ಉಪಯೋಗಕ್ಕೆ ನಿಲುಕದಾಗಿವೆ. ಪ್ರಯೋಗಶಾಲೆಗಳಿಗಿಂತಲೂ ಪ್ರಾತ್ಯಕ್ಷಿಕೆಯ ಕೇಂದ್ರಗಳು ಇನ್ನೂ ಹೆಚ್ಚಾಗಬೇಕು. ನಮ್ಮ ಸರಕಾರವು ಭೂಸುಧಾರಣೆಗಾಗಿ, [illegible] ವಿಧಗಳಲ್ಲಿ ಅನುಕೂಲಗಳ [illegible]ಯಾಗುವಂತೆ ಒಂದು ಯೋಜನೆಯನ್ನು ಸಿದ್ಧಗೊಳಿಸಿ ಅದು ಕಾರ್ಯರೂಪಕ್ಕೆ [illegible] ಉಗ್ರವಾದ ಚಳವಳಿಯನ್ನು [illegible]. ಇದಕ್ಕಾಗಿ ಒಕ್ಕಲುತನದಲ್ಲಿ ಶಿಕ್ಷಣ ಹೊಂದಿದವರೂ ಅಧಿಕಾರಿಗಳೂ ಜನತೆಯೂ ಪರಸ್ಪರ ಸಹಕರಿಸಬೇಕು. [illegible] ಈಗಿನ ನಮ್ಮ ಒಕ್ಕಲುತನದ ನೋಟಕ್ಕೆ ಹೊಸದೊಂದು ಬೆಳಕು ಬಿಂಬಿಸಿದಂತಾಗುತ್ತದೆ. ಜನರು ಒಕ್ಕಲುತನದಲ್ಲಿ [illegible] ಪಡೆದ ಈಗಿನ ಇಮ್ಮಡಿ ಮುಮ್ಮಡಿಯಾಗಿ ಅಷ್ಟೇ ಹೊಲದಲ್ಲಿ ಬೆಳೆ ತೆಗೆಯಬಹುದು. ಇದರಿಂದ ರೈತನ ಆರ್ಥಿಕ ಸಾಮಾಜಿಕ ಸ್ಥಿತಿಯೂ ಸುಧಾರಿಸಿದಂತಾಗುತ್ತದೆ. ಅದೇ ನಿಜವಾದ ರೈತನ ಉದ್ಧಾರ. ಭಾವೀಭಾರತದ ಏಳಿಗೆ, ರೈತರಾಜ್ಯ, ರಾಮರಾಜ್ಯ.

[illegible]

● ಲಖನೋವಿನಲ್ಲಿಯ ಯುಕ್ತಪ್ರಾಂತ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಹಾಗು ಘಟನಾಸಮಿತಿ ಸದಸ್ಯ ಠಾಕೂರ ಫೂಲಸಿಂಗರು, ಏರುತಿರುವ ಬಟ್ಟೆಯ ಬೆಲೆಯನ್ನು ದಾರಿಗೆ ತರಲು ಹಿಂದುಸ್ಥಾನದಲ್ಲೆಲ್ಲ "ಈಗ ಬಟ್ಟೆಕೊಳ್ಳಬೇಡಿರಿ" ಎಂಬ ಆಂದೋಲನ ಪ್ರಾರಂಭಿಸಬೇಕೆಂದರು

ಕರ್ನಾಟಕ

ಧಾರವಾಡ

ಧಾರವಾಡ ಜಿಲ್ಹೆಯಲ್ಲಿ ಪೋಲೀಸ ಪ್ರಾಸಿಕ್ಯೂಟರರಾಗಿರುವ ಶ್ರೀ ದೇಶಪಾಂಡೆಯೆಂಬವರು ಒಂದು ಪಕ್ಷದವರಿಂದ ೨೫೦ ರೂ ಲಂಚ ತೆಗೆದುಕೊಂಡರೆಂದು ಅವರನ್ನು ಲಂಚ ನಿರ್ಮೂಲನ ಶಾಖೆಯ ಸಬ್. ಇನಸ್ಪೆಕ್ಟರರು ರಾಣೆಬಿನ್ನೂರಲ್ಲಿ ಬಂಧಿಸಿದರು. ಅದರಂತೆಯೆ ಸಾಮಾನಗಳನ್ನು ಕಳಿಸುವ ಬಗ್ಗೆ ೧೬ ರೂ: ಲಂಚ ಸ್ವೀಕರಿಸುತ್ತಿದ್ದ ಬ್ಯಾಡಗಿ ಸ್ಟೇಶನ ಮಾಸ್ತರರನ್ನೂ ಇದೇ ಸಬ್ ಇನಸ್ಪೆಕ್ಟರರು ಬಂಧಿಸಿದರು.

ನಿಜಾಮ ಹದ್ದಿಗೆ ಹೊಂದಿರುವ ಕವಲೂರು ಅಳವಂಡಿ ಗಟ್ಟಿರಡ್ಡಿಹಾಳಮೊದಲಾದ ಹಳ್ಳಿಗಳಲ್ಲಿ ರಜಾಕಾರರ ಹಾವಳಿಹೆಚ್ಚಾಗಿದ್ದುದರಿಂದ ಅಲ್ಲಿಯ ಜನರು ಗುಳೇಕಟ್ಟಿಕೊಂಡು ಮುಂಡರಗಿ ಪೇಠಾ ಹದ್ದಿಗೆ ಬರಹತ್ತಿದ್ದಾರೆ. ಪೇಠಾದ ಸಾರ್ವಜನಿಕರು ಅವರಿಗೆ ಎಲ್ಲ ಬಗೆಯ ಸಹಾಯ್ಯ ನೀಡಬೇಕೆಂದು ಗೃಹರಕ್ಷಕ ದಳದವರು ಬಿನ್ನವಿಸುತ್ತಾರೆ.

ಧಾರವಾಡ ಕರ್ನಾಟಕ ಹಾಯಸ್ಕೂಲಿನ ವಿದ್ಯಾರ್ಥಿಯಾದ ಎನ್. ಎಸ್. ದೇಶಪಾಂಡೆ ಇವನಿಗೆ ಕಳೆದ ಮ್ಯಾಟ್ರಿಕ ಪರೀಕ್ಷೆಯಲ್ಲಿ ೫೮೨ ಗುಣಗಳು ಬಿದ್ದು ಧಾರವಾಡ ಕೇಂದ್ರಕ್ಕೆ ಅವನು ಮೊದಲನೆಯ ನಂಬರು ಬಂದಿರುವನು. ಸರದಾರ ರಾಮರಾವ ಭೀಮರಾವ ಅಕಬರ ನವೀಸ ಸಂಸ್ಕೃತ ಶಿಷ್ಯವೃತ್ತಿಯು ಅವನಿಗೆ ದೊರೆತಿದೆ.

ಕರ್ನಾಟಕ ಮಾಧ್ಯಮಿಕ ಶಿಕ್ಷಣ ಸಂಘ ಹುಬ್ಬಳ್ಳಿ ಇವರು ಜುಲೈ ಮಧ್ಯದ ಸುಮಾರಿಗೆ ಸೇರಿ ಕರ್ನಾಟಕ ಮಾಧ್ಯಮಿಕ ಶಾಲೆಗಳಲ್ಲಿ ಉಪಯೋಗಿಸಲು ಯೋಗ್ಯವಾದ ಪಠ್ಯ ಪುಸ್ತಕ ವಿಚಾರ ಮಾಡಲಾಗುವದು. ಆದುದರಿಂದ ಆಯಾ ಗ್ರಂಥಕರ್ತರು ಪ್ರಕಾಶಕರು ತಮ್ಮ ಪುಸ್ತಕಗಳ ಒಂದೊಂದು ಪ್ರತಿಯನ್ನು ಸಂಘದ ಸೆಕ್ರೆಟರಿಗಳ ಹೆಸರಿನಲ್ಲಿ ಕಳಿಸಿ ಕೊಡಬೇಕು. ಪಠ್ಯ ಪುಸ್ತಕಗಳ ವಿಷಯದ ಬಗ್ಗೆ ಸಲಹೆ ಸೂಚನೆಗಳನ್ನೂ ಬರೆದು ಕಳಿಸಬಹುದು.

ರಾಣೇಬಿನ್ನೂರ ತಾಲೂಕ ಲಮಾಣಿ ಜನರ ಪರಿಷತ್ತು ಕಳೆದ ವಾರ ಕಜ್ಜರಿ ತಾಂಡೇದಲ್ಲಿ ಮಾಮಲೇದಾರ ಸಾಹೇಬರ ಅಧ್ಯಕ್ಷತೆಯಲ್ಲಿ ಸೇರಿತ್ತು. ಆಗ ಮಾಮಲೇದಾರರಾದ ಶ್ರೀ ಎಸ್. ಎಸ್. ಹೊಳೆಹೊಸೂರ ಹಾಗು ಉದ್ಘಾಟಕರಾದ ಶ್ರೀ. ಎಫ್. ಡಿ. ಫೋಡಕೆಯವರು ಉಪದೇಶಪರ ಭಾಷಣ ಮಾಡಿದರು. ಲಮಾಣಿ ಜನರಿಗೆ ಒತ್ತಾಯದ ಶಿಕ್ಷಣ ಕೊಡಬೇಕು ರಾಣೇಬಿನ್ನೂರ ಗದಗ, ಕಂಬಾರಗಣವಿ ಸಮೀಪದಲ್ಲಿ ಲಮಾಣಿಗಳ ವಸಾಹತು ಕಟ್ಟಬೇಕು ಲಮಾಣಿ ಹೆಣ್ಣುಮಕ್ಕಳಿಗೆ ಗೃಹ ಕೈಗಾರಿಕೆ ಕಲಿಸಬೇಕು ಮೊದಲಾದ ಗೊತ್ತುವಳಿಗಳು ಪಾಸಾದವು.

ಹುಬ್ಬಳ್ಳಿಯಲ್ಲಿ ಆಹಾರ ಪದಾರ್ಥಗಳ ಧಾರಣಿಗಳು ಮಿತಿಮೀರಿ ಏರಿದ್ದನ್ನು ಅಧಿಕಾರಿಗಳ ಗಮನಕ್ಕೆ ತರುವದಕ್ಕಾಗಿ ರೇಲ್ವೆ ಕೆಲಸಗಾರರು ಮತ್ತು ಇನ್ನಿತರ ಕೆಲಸಗಾರರು ೩ ನೇ ತಾರೀಕು ಪ್ರಚಂಡ ಮೆರವಣಿಗೆ ತೆಗೆದಿದ್ದರು. ಇಂದಿನ ಕಠಿನ ದಿನಗಳಲ್ಲಿ ವ್ಯಾಪಾರಿಗಳ ಸಂಗ್ರಹದಲ್ಲಿದ್ದ ಕಾಳುಗಳನ್ನು ಜಪ್ತ ಮಾಡಿ ಜನರಿಗೆ ಹಂಚಿ ವ್ಯಾಪಾರಿಗಳನ್ನು ಹಾದಿಗೆ ತರಬೇಕೆಂದು ಸರಕಾರಕ್ಕೆ ಕೇಳಿಕೊಳ್ಳಲಾಯಿತು.

ಬೆಂಗಳೂರು--ಮೈಸೂರು

ಅಂತರ್ ರಾಷ್ಟ್ರೀಯ ಕೂಲಿಕಾರ ಪರಿಷತ್ತಿಗೆ ಮೈಸೂರ ಕೂಲಿಕಾರ ಮಂತ್ರಿಗಳಾದ ಶ್ರೀ. ಕೆ.ಟಿ. ಭಾಷ್ಯಂ ಇವರೊಬ್ಬರು ಪ್ರತಿನಿಧಿಗಳಾಗಿರುವರು. ಇವರು ಇದೇ ೭ ನೇ ತಾರೀಕಿಗೆ ವಿಮಾನದಿಂದ ಕಲಕತ್ತೆಗೆ ಹೋಗಿ ಮುಂದೆ ಪ್ರಯಾಣ ಬೆಳೆಸಿದರು. ಅಮೇರಿಕೆಯಲ್ಲಿ ಶ್ರೀ. ಭಾಷ್ಯಂರು ಟೆನ್ನಿಸಿವ್ಯಾಲಿ ಯೋಜನೆ ನೋಡಿಕೊಂಡು ವಿದ್ಯುಚ್ಛಕ್ತಿಯ ವಿವಿಧ ಯೋಜನೆಗಳನ್ನು ಅಭ್ಯಸಿಸಲು ಇಂಗ್ಲಂಡ ಸ್ವಿತ್ಸಲರ್ಂಡ ಮೊದಲಾದ ದೇಶಗಳನ್ನು ಸಂಚರಿಸಿ ೨ ತಿಂಗಳುಗಳ ನಂತರ ಮರಳಿ ಬರುವರು.

ಮೈಸೂರು ನಗರದ ವಿದ್ಯುತ್ ಶಾಖೆಯ ನೌಕರರು ಹೆಚ್ಚು ವೇತನ ಬೇಕೆಂದು ಸಂಪು ಹೂಡಿರುವರು. ಅರುಜನ ಕೆಲಸಗಾರರನ್ನು ಸುರಕ್ಷಿತತೆ ಕಾಯದೆಯನ್ವಯ ಸೆರೆಹಿಡಿಯಲಾಗಿದೆ. ನಗರದಲ್ಲಿ ಒಂದು ತಿಂಗಳ ವರೆಗೆ ಸಭೆ ಮೆರವಣಿಗೆ ನಡೆಯಕೂಡದೆಂದು ವಿಧಿಸಲಾಗಿದೆ.

ಬೆಳಗಾವಿ

ವಿಲೀನಹೊಂದಿದ ದಕ್ಷಿಣ ಸಂಸ್ಥಾನ ಕಾಂಗ್ರೆಸ ಕಾರ್ಯಕರ್ತರ ಸಭೆ ಸಾಂಗಲಿಯಲ್ಲಿ ಶ್ರೀ ರಮಾನಂದ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ೭ ಕ್ಕೆ ಸೇರಿತ್ತು. ಕಾಂಗ್ರೆಸ ಮತ್ತು ಅದರ ಕಾರ್ಯಕ್ರಮಗಳಲ್ಲಿ ನಂಬಿಕೆಯನ್ನು ಹಾಗು ನೆಹರು ಸರಕಾರದಲ್ಲಿ ಸಂಪೂರ್ಣ ವಿಶ್ವಾಸವನ್ನು ವ್ಯಕ್ತಮಾಡಲಾಯಿತು. ಹಿಂದುಸ್ಥಾನದ ರಾಜಕಾರಣದಲ್ಲಿ ಜಾತೀಯತೆಯನ್ನು ಅಹಿಂಸಾತ್ಮಕವಾಗಿ ಕಿತ್ತೊಗೆಯಬೇಕೆಂದ್ಯ ಗೊತ್ತಾಯಿತು. ವಿಲೀನ ಹೊಂದಿದ ಸಂಸ್ಥಾನಗಳಿಗೆ ಶಾಸನ ಸಭೆಯಲ್ಲಿ ಸ್ಥಾನ ಕೊಡಬೇಕು ಮತ್ತು ಸಾಂಗಲಿ ಜಿಲ್ಹೆಯನ್ನು ನಿರ್ಮಿಸಬೇಕೆಂದು ಕೇಳಿಕೊಳ್ಳಲಾಯಿತು.

ಸವದತ್ತಿ ತಾಲೂಕಿನ ಇನಾಮಗ್ರಾಮಗೋಪನಕೊಪ್ಪ ಹದ್ದಿಯ ಗುಡ್ಡದಲ್ಲಿ ಕಬ್ಬಿಣ ಅದಿರುಗಳಿದ್ದು ಅವು ಮಳೆಗಾಳಿಗೆ ಸವೆದು ಹಾಳಾಗಿ ಹೋಗಹತ್ತಿವೆ. ಸರಕಾರದವರು ಅಲ್ಲಿ ಹೊರಡುವ ಲೋಹವನ್ನು ಪರೀಕ್ಷಿಸಿ ಉಪಯೋಗ ತೆಗೆದುಕೊಳ್ಳಬೇಕೆಂದು ಹುಲಿಕಟ್ಟಿ ಶಾಲೆಯ ಶ್ರೀ ಜಾಲೀಕಟ್ಟಿ ಮಾಸ್ತರರು ತಿಳಿಸುತ್ತಾರೆ.

ಬೆಳಗಾವಿ ಜಿಲ್ಹಾ ಕಾಂಗ್ರೆಸ ಸಮಿತಿಯ ಸಭೆ ಸೇರಿ ಈರಪ್ಪಾ ಸುತಗಟ್ಟಿಯವರು ಅಧ್ಯಕ್ಷರು, ಕುಟ್ರೆಯವರು ಉಪಾಧ್ಯಕ್ಷರು, ರಾಮಕೃಷ್ಣ ಪ್ರಭು ಇವರು ಕಾರ್ಯದರ್ಶಿ ಮತ್ತು ಗವಿಶಿದ್ದಪ್ಪ ಬೆಳವಡಿಯವರು ಸಹಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಬೆಳಗಾವಿ ಜಿಲ್ಹೆಯ ಲಂಚ ನಿರ್ಮೂಲ ಖಾತೆಯ ಶ್ರೀ ಶೇಖರವರು ಬೆಳಗಾವಿ ಡಿ ಎಸ್ ಪಿ ಕಚೇರಿಯ ಕಾರಕೂನರಾದ ಶ್ರೀ ಭುಭಲೆಯವರನ್ನು ಒಬ್ಬನಿಂದ ೫೦ ರೂಪಾಯಿ ಲಂಚ ತೆಗೆದುಕೊಳ್ಳುವಾಗ ಹಿಡಿದರು.

ಬೆಳಗಾವಿ ಲಿಂಗರಾಜ ಕಾಲೇಜಿನ ಕು. ಕುಸುಮ ಸುಂಠಣಕರರು ಈ ವರ್ಷದ ಬಿ ಎಸ್ ಸಿ. ಫಿಜಿಕ್ಸ ತೆಗೆದುಕೊಂಡು ೧ ನೇ ವರ್ಗದಲ್ಲಿ ಡಿಸ್ಟಿಂಕ್ಶನ ಪಡೆದು ಉತ್ತೀರ್ಣರಾಗಿರುವರು. ಕೆ. ಸಿ. ಪಾಲಿ ಇವರೂ ಫಿಜಿಕ್ಸದಲ್ಲಿ ೧ ನೇ ವರ್ಗದಲ್ಲಿ ಡಿಸ್ಟಿಂಕ್ಶನ ಪಡೆದಿರುವರು.

ವಿಜಾಪುರ

ವಿಜಾಪುರ ವಿಜಯ ಕಾಲೇಜಿನ ವಾಯಿಸ ಪ್ರಿನ್ಸಿಪಾಲರಾದ ಶ್ರೀ ಟಿ ಸಿನೇಟ ಚುನಾವಣಿಗೆ ರೂಬೆನ್‌ರು ಮುಂಬಯಿ ವಿಶ್ವವಿದ್ಯಾಲಯದ ಶಿಕ್ಷಕ ಮತದಾರ ಸಂಘದಿಂದ ನಿಂತಿರುವರೆಂದು ತಿಳಿಯುತ್ತದೆ.

ಇದೇ ವಾರದಲ್ಲಿ ಡರ್ಬಿಶಾಯರದ ಬಕ್ಸಟನ್ ಎಂಬಲ್ಲಿ ಬಟ್ಟೆ ಸಾಮಾನುಗಳ ಸೂತ್ರ ಪ್ರಮಾಣವನ್ನು ಗೊತ್ತುಮಾಡುವದಕ್ಕೋಸ್ಕರ ಅಂತರ್ ರಾಷ್ಟ್ರೀಯ ಪರಿಷತ್ತು ಕೂಡುವದಿದ್ದು ಹಿಂದುಸ್ಥಾನ ಸರಕಾರದವರು ಪಿ. ಸಿ. ಹಳಕಟ್ಟಿಯವರನ್ನು ತಮ್ಮ ಪ್ರತಿನಿಧಿಗಳನ್ನಾಗಿ ನೇಮಿಸಿರುವರು. ಇವರು ಮ್ಯಾಂಚೆಸ್ಟರ ವಿಶ್ವವಿದ್ಯಾಲಯದ ಟೆಕ್ಸಟಾಯಿಲ್ ಪದವೀಧರರು. ಇವರು ಕಳೆದ ತಿಂಗಳು ೨೫ ಕ್ಕೆ ವಿಮಾನ ಮಾರ್ಗವಾಗಿ ಪರದೇಶಕ್ಕೆ ಹೋಗಿದ್ದು ಎರಡು ತಿಂಗಳು ಅಲ್ಲಿ ಸಂಚರಿಸುವರು.

ವಿಜಾಪುರ ಜಿಲ್ಹಾ ಕಾಂಗ್ರೆಸ ಸಮಿತಿಯ ಸಭೆ ಸೇರಿ ಶ್ರೀ ರಾಜಾರಾಮ ದುಬೆಯವರು ಅಧ್ಯಕ್ಷರು, ಮುರಿಗೆಪ್ಪಾ ಸುಗಂಧಿ ಉಪಾಧ್ಯಕ್ಷರು, ಬಿ ಟಿ ಮುರನಾಳ ಕಾರ್ಯದರ್ಶಿ, ಎಸ್ ಬಿ ವಸ್ತ್ರದ ಸಹಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ವಾರ್ಷಿಕ ಲೆಕ್ಕದ ಪರಿಶೀಲನೆ ನಡೆದಾಗ ಶ್ರೀ ಹುಜರೆ ಮತ್ತು ದುಬೆಯವರಲ್ಲಿ ಸ್ವಲ್ಪ ತಿಕ್ಕಾಟವಾಯಿತೆಂದು ತಿಳಿಯುತ್ತದೆ.

ಉತ್ತರ ಕನ್ನಡ

ಕಾರವಾರ ಜಿಲ್ಹಾ ಜಜ್ಜರಾದ ಶ್ರೀ ಪಿ. ಎಸ್. ದೇವಧರರು ಕೊಲ್ಹಾಪುರ ಸಂಸ್ಥಾನದಲ್ಲಿ ಗಾಂಧೀಜಿಯ ಕೊಲೆ ನಂತರ ಸಂಭವಿಸಿದ ಗಲಭೆಯ ವಿಚಾರಣೆಗಾಗಿ ಸ್ಪೆಶಲ್ ಜಜ್ಜರಾಗಿ ನೇಮಿಸಲ್ಪಟ್ಟಿದ್ದಾರೆ. ಅವರು ಇಷ್ಟರಲ್ಲಿಯೇ ಕೊಲ್ಹಾಪುರಕ್ಕೆ ಹೋಗಲಿದ್ದಾರೆ.

ಕಾರವಾರದಲ್ಲಿ ಅಕ್ಕಿಯ ಧಾರಣೆ ಮಿತಿಮೀರಿ ಏರಿದೆ, ಒಂದು ಪಾಯಲಿಗೆ ಸಣ್ಣ ಧಾರಣೆಯು ೩-೧೨-೦ ಕೆಳ ತರಗತಿ ಅಕ್ಕಿ ಧಾರಣೆ ೨.೧೨.೦ ಆಗಿರುವದು. ನಿಯಂತ್ರಣ ಧಾರಣೆಗಿಂತ ಈ ಧಾರಣೆಗಳು ನೂರಕ್ಕೆ ನೂರರಿಂದ ೧೨೫ ಪಟ್ಟು ಹೆಚ್ಚಿಗಿರುವವು.

ಕಾರವಾರ ಹಿಂದೂ ಹಾಯಸ್ಕೂಲಿನ ವಿದ್ಯಾರ್ಥಿ ಸುರೇಶ ಕೃಷ್ಣ ಉಪ್ಪೋಣಿ ಇವನು ಈ ಸಲ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ೫೫೮ ಗುಣಗಳನ್ನು ಪಡೆದು ಕರ್ನಾಟಕಕ್ಕೆ ಒಂದನೇ ನಂಬರು ಬಂದಿರುವನು.

ಉತ್ತರ ಕನ್ನಡ ಜಿಲ್ಹಾ ಕಾಂಗ್ರೆಸ ಸಮಿತಿಯ ಸಭೆಸೇರಿ ಶ್ರೀ ಎಸ್. ಎನ್. ಕೇಶವಾಯಿನ್‌ರು ಅಧ್ಯಕ್ಷರಾಗಿಯೂ ಹರಿ ಅನಂತಷ್ಟೆ ಹಾಗೂ ದೇವರ ಕೃಷ್ಣ ಹೆಗಡೆ ಇವರು ಉಪಾಧ್ಯಕ್ಷರಾಗಿಯೂ ಬಶೆಟ್ಟಿಪ್ಪ ಭೂಮಾ ಇವರು ಕೋಶಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು. ಕಾರ್ಯದರ್ಶಿಗಳನ್ನು ಆರಿಸಿಕೊಳ್ಳಲು ಅಧ್ಯಕ್ಷರಿಗೆ ಅಧಿಕಾರ ಕೊಡಲಾಯಿತು.

ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಹಾ ಕಾಂಗ್ರೆಸ ಸಮಿತಿ ಸಭೆ ಸೇರಿ, ಶ್ರೀ ಬಿ. ದಾಮೋದರ ಜಾಳಿಗರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಕೆ. ಈಶ್ವರ ಹಾಗು ಹಾಜಿ ಹಸನಸಾಹೇಬರು ಉಪಾಧ್ಯಕ್ಷರು. ಪಿ. ಶ್ರೀನಿವಾಸರಾವ ಮತ್ತು ಬಿ. ಸುಬ್ಬಣ್ಣಶೆಟ್ಟಿ ಇವರು ಕಾರ್ಯದರ್ಶಿಗಳಾದರು. ೧೦ ಜನರ ಕಾರ್ಯಕಾರೀ ಸಮಿತಿಯೂ ಸ್ಥಾಪಿತವಾಯಿತು.

ಬೋಳಾರದಲ್ಲಿ ಪೋಲೀಸರು ೪ ನೇ ತಾರೀಕು ಚಿನ್ನಯ್ಯ ಪೂಜಾರಿ ಇವರ ಮನೆಯನ್ನು ಮುತ್ತಿ ಸ್ಥಾನಬದ್ಧತೆಯಲ್ಲಿರಬೇಕಾಗಿದ್ದ ಲಿಂಗಪ್ಪ ಸುವರ್ಣ ಇವರನ್ನು ಸೆರೆ ಹಿಡಿದರು. ಇವರು ಕಮ್ಯುನಿಷ್ಟ ಕಾರ್ಯಕರ್ತರು. ಇವರಿಗೆ ಆಶ್ರಯ ಕೊಟ್ಟಿದ್ದಕ್ಕೆ ಪೂಜಾರಿಯವರನ್ನು ಹಿಡಿಯಲಾಗಿದೆ. ಸುವರ್ಣರ ಮೇಲೆ ಮತ್ತೊಂದು ಆರೋಪವೂ ಇದೆ.

ಬಳ್ಳಾರಿ

ಮದ್ರಾಸ ವಿಶ್ವವಿದ್ಯಾಲಯಕ್ಕೆ ಬಳ್ಳಾರಿ ಕಾಲೇಜಿನ ಮಾನ್ಯತೆಯ ಪ್ರಶ್ನೆ ಇನ್ನೂ ನಿರ್ಧಾರವಾಗಿಲ್ಲವಾದರೂ ಅದರ ಕೊನೆಯ ಅಭಿಪ್ರಾಯವನ್ನು ನಿರೀಕ್ಷಿಸುತ್ತ ಜೂನಿಯರ ಇಂಟರಮೀಜಿಯೇಟ ತರಗತಿಗಳಿಗೆ ಹಾಕಿಕೊಂಡ ಅರ್ಜಿಗಳನ್ನು ಪರಿಶೀಲಿಸಲಾಗುವದೆಂದು ಪ್ರಿನ್ಸಿಪಾಲರು ಪ್ರಸಿದ್ಧಿಸುತ್ತಾರೆ.

ರಾಮಪುರದಲ್ಲಿ ಕನ್ನಡ ಹೈಸ್ಕೂಲು ಸ್ಥಾಪಿಸುವ ಸಭೆಯ ಅಧ್ಯಕ್ಷತೆ ವಹಿಸಲು ದಯಮಾಡಿಸಿದ್ದ ಉರವಕೊಂಡ ಮಹಾಸ್ವಾಮಿಗಳು ಪೂರ್ವಗಡಿಯಲ್ಲಿ ಏಕೀಕರಣದ ಜಾಗ್ರತಿ ಸಲ್ವಾಗಿ ಶಿದ್ಧಾಪುರ ನಾಗಸಮುದ್ರ ಮೊದಲಾದ ರಾಯದುರ್ಗ ತಾಲೂಕ ಗಡಿ ಹಳ್ಳಿಗಳಲ್ಲಿ ಪ್ರವಾಸ ಮಾಡಿದರು.

ಬಳ್ಳಾರಿ ಜಿಲ್ಹೆಯಲ್ಲಿ ಕುಚ್ಚಗಿ ಅಕ್ಕಿ ಲಭ್ಯವಿರುವ ನರೆಗೆ ಜೋಳ ಮೊದಲಾದವುಗಳನ್ನು ನಿಲ್ಲಿಸಲು ಬೋರ್ಡಿನವರು ಅಪ್ಪಣೆ ಕೊಟ್ಟಿದ್ದಾರೆಂದೂ ಗೋವಿನ ಜೋಳ ಬಂದದ್ದರಿಂದ ಸಧ್ಯದ ಆಹಾರ ಸಂಗ್ರಹ ಸಾಕಷ್ಟಾಗಿದೆಂದೂ ಜಿಲ್ಹಾಧೀಶರು ಆಹಾರ ಸಮಿತಿ ಸಭೆಯಲ್ಲಿ ಹೇಳಿದರು. ಸೀಡಾದಲ್ಲಿ ಅಕ್ಕಿ ಜೋಳ ಧಾರಣೆ ತುಟ್ಟಿ ಮಾಡುತಿರುವ ಬಗ್ಗೆ ಶ್ರೀ ಬಿ. ಭೀಮರಾವ ಇವರು ದೂರಿಕೊಂಡರು.

ಪಂ ಬುರ್ಲಿ ಶ್ರೀನಿವಾಸಾಚಾರ್ಯರ ಶೋಚನೀಯ ನಿಧನ



ಬೆಳಗಾವಿಯ ಮಧುರವಾಣಿ ಎಂಬ ಸಂಸ್ಕೃತ ಮಾಸಪತ್ರಿಕೆಯ ಸಂಪಾದಕರಾಗಿದ್ದ ಪಂಡಿತ ಬುರ್ಲಿ ಶ್ರೀನಿವಾಸಾಚಾರ್ಯರು ತಾ. ೪-೬-೧೯೪೮ ನೆಯ ದಿನ ಉದರರೋಗದಿಂದ ವೈಕುಂಠವಾಸಿಗಳಾದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ.

ಆಚಾರ್ಯರು ಬಾಗಲಕೋಟೆಯ ಪ್ರಸಿದ್ಧ ಪಂಡಿತ ಮನೆತನದವರು. ಇವರು ಬಾಲ್ಯದಲ್ಲಿ ಬಾಗಲಕೋಟೆಯಲ್ಲಿಯೆ ಸಂಸ್ಕೃತ ಸಾಹಿತ್ಯದ ಅಭ್ಯಾಸ ಮಾಡಿ ರಾಮದುರ್ಗ ಮತ್ತು ಸಾತಾರಾ ಆಚಾರ್ಯರ ಹತ್ತರ ವ್ಯಾಕರಣ ಶಾಸ್ತ್ರದ ಅಭ್ಯಾಸ ಮಾಡಿದರು. ಅನಂತರ ಕೆಲಕಾಲ ಶ್ರೀ ಶ್ರೀ ಸತ್ಯಧ್ಯಾನ ತೀರ್ಥರವರಲ್ಲಿ ವೇದಾಂತ ಶಾಸ್ತ್ರದ ಅಭ್ಯಾಸವನ್ನೂ ಮಾಡಿದರು. ಶ್ರೀ ಭಾಗವತ ಪುರಾಣವನ್ನು ಇವರು ಬಹಳ ಚೆನ್ನಾಗಿ ಹೇಳುತಿದ್ದರು. ಬೆಳಗಾವಿಯಲ್ಲಿ ಇವರು ಹಲವಾರುಸಲ ಭಾಗವತ ಸಪ್ತಾಹವನ್ನು ಮಾಡಿದ್ದಲ್ಲದೆ ಜ್ಞಾನಸತ್ರವನ್ನೂ ಮಾಡಿದರು. ಸಂಸ್ಕೃತ ಸಾಹಿತ್ಯದ ಪ್ರಚಾರಕ್ಕಾಗಿ ಇವರು ತಮ್ಮ ಮಿತ್ರರಾದ ಪಂಡಿತ ಗಲಗಲಿ ರಾಮಾಚಾರ್ಯರ ಸಹಕಾರದಿಂದ ಮಧುರವಾಣಿ ಎಂಬ ಮಾಸಪತ್ರಿಕೆಯನ್ನು ಹೊರಡಿಸಿ ಉತ್ತಮ ರೀತಿಯಿಂದ ಅದನ್ನು ನಡೆಯಿಸಿಕೊಂಡು ಬಂದಿರುವರು. ಆಗಾಗ ಅವರು ತೆಗೆದ ಮಧುರವಾಣಿಯ ವಿಶೇಷ ಸಂಚಿಕೆಗಳು ಬಹಳ ಲೋಕಪ್ರಿಯ ಮತ್ತು ಸಂಗ್ರಾಹ್ಯವಾಗಿವೆ. ಸಂಸ್ಕೃತ ಸಮ್ಮೇಲನಗಳನ್ನು ಕೂಡಿಸಿ ಸಂಸ್ಕೃತ ಸಾಹಿತ್ಯ ಪ್ರಚಾರಕಾರ್ಯ ಮಾಡಿದರು. ಸಂಸ್ಕೃತ ಭಾಷೆಯ ಮೇಲೆ ಇವರ ಪ್ರಭುತ್ವ ಚೆನ್ನಾಗಿದ್ದುದರಿಂದ ಬಳ್ಳಿ ಸುಲಭವಾದ ಶೈಲಿಯಲ್ಲಿ ಸಂಸ್ಕೃತವನ್ನು ಬರೆಯುತಿದ್ದರಲ್ಲದೆ ಭಾಷಣವನ್ನೂ ಮಾಡುತಿದ್ದರು. ಈ ರೀತಿಯಾಗಿ ಸಂಸ್ಕೃತ ಸಾಹಿತ್ಯ ಮತ್ತು ಸನಾತನ ಧರ್ಮದ ಪ್ರಚಾರ ಕಾರ್ಯವನ್ನು ಕೈಕೊಂಡು ಅದಕ್ಕಾಗಿಯೆ ಶ್ರಮಿಸುತಿದ್ದ ಆಚಾರ್ಯರು ಅಕಾಲದಲ್ಲಿಯೆ ಸ್ವರ್ಗಸ್ಥರಾದುದು ತುಂಬ ಬರೆಲಾರ ದಹಾನಿಯು. ಮರಣ ಕಾಲಕ್ಕೆ ಇವರಿಗೆ ಸುಮಾರು ೫೮ ವರುಷಗಳಾಗಿದ್ದುವು. ಇವರ ಮರಣದಿಂದ ಇವರ ಮಕ್ಕಳಿಗೂ ಆಪ್ತೇಷ್ಟರಿಗೂ ಗಲಗಲಿ ಆಚಾರ್ಯರಿಗೂ ಆದ ದುಃಖದಲ್ಲಿ ನಾವೂ ಪಾಲುಗಾರರಿರುವೆವು. ಪರಮಾತ್ಮನು ಇವರ ಆತ್ಮಕ್ಕೆ ಚಿರ ಶಾಂತಿಯನ್ನೀಯಲಿ.

ಕನ್ನಡ ಸಂಸ್ಥಾನ

ತುಂಗಭದ್ರಾ ಆಣೆಕಟ್ಟಿನ ಸ್ಥಳದಲ್ಲಿ ಮಳೆಯ ಮೂಲಕ ಭೂಮಿಯು ಕುಸಿದು ೧೦ ಚಿಕ್ಕ ಮಕ್ಕಳು ಸತ್ತಿರುವರೆಂದು ಪ್ರಕಟಿಸಲಾಗಿದೆ. ಗೋಡೆಬಿದ್ದು ೨೦ ಜನ ಸತ್ತಿರುವರೆಂಬ ಸುದ್ದಿ ಪ್ರಸಿದ್ಧವಾದದ್ದು ತಪ್ಪಾಗಿರುವದು.

ಮಹಾತ್ಮರ ಕೊಲೆಯ ನಂತರ ಕೊಲ್ಹಾಪುರ ಸಂಸ್ಥಾನದಲ್ಲಿ ಸಂಭವಿಸಿದ ಗಲಭೆಗಳ ಸಂಬಂಧದಲ್ಲಿ ಬಾಗಲ ಮಂತ್ರಿಮಂಡಳದ ಪ್ರಚೋದನೆಯ ಬಗ್ಗೆ ವಿಚಾರಣೆ ನಡೆಸಲು ಕೇಂದ್ರ ಸರಕಾರದವರು ಮುಂಬಯಿ ಹಾಯಕೋರ್ಟಿನ ನ್ಯಾಯಮೂರ್ತಿ ಕೊಯಾಜಿಯವರನ್ನು ನೇಮಿಸಿದ್ದಾರೆ. ಆರೋಪಿಗಳ ವಿಚಾರಣೆ ನಡೆಸಲು ನೇಮಿಸಲ್ಪಟ್ಟ'ವ್ಯಾ. ದವಳೆಯವರು ವಿಚಾರಣೆ ಪ್ರಾರಂಭಿಸುವರು.

ತಿಪಟೂರಲ್ಲಿ ಒಂದು ಶಾಲೆಯ ಗಿರಾಕಿಗಳಲ್ಲಿ ಜನೇ ತಾರೀಕು ತಿಕ್ಕಾಟ ನಡೆದು ಇಬ್ಬರು ಸತ್ತಿದ್ದು ಇಬ್ಬರಿಗೆ ಗಾಯಗಳಾದವು. ಕೆಲ ಮಂದಿಗಳೂ ಸೆರೆಯಲ್ಲಿಟ್ಟು ಮರು ಹುಡ್ಡಿ ಬಿಡದಿ.

ಹಿಂದುಸ್ತಾನ

ಮುಂಬಯಿ

ಮುಂಬಯಿ ವಿಶ್ವವಿದ್ಯಾಲಯದಿಂದ ಈ ಸಲದ ಮೆಟ್ರಿಕ್ ಪರೀಕ್ಷೆಗೆ ೧೭೩೬೦ ವಿದ್ಯಾರ್ಥಿಗಳು ಕುಳಿತಿದ್ದರು. ಅವರಲ್ಲಿ ೧೨೩೭೦ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅಂದರೆ ಈ ಸಲ ನೂರಕ್ಕೆ ೭೩ ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾದ ಹಾಗಾಯಿತು. ಹೋದ ವರ್ಷ ೬೫ ರಷ್ಟು ಉತ್ತೀರ್ಣರಾಗಿದ್ದರು.

ಮುಂಬಯಿಯಲ್ಲಿ ನೆರೆಯುತ್ತಿರುವ ನೂತನ ಜನೆಲ್ರು ಪ್ರಾಂತಿಕ ಕಾಮಗಾರ ಪರಿಷತ್ತನ್ನು ಮುಂಬಯಿ ಸರಕಾರದ ಮುಖ್ಯ ಪ್ರಧಾನರಾದ ಬಾಳಾಸಾಹೇಬ ಖೇರರು ಉದ್ಘಾಟಿಸುವರೆಂದು ತಿಳಿದು ಬಂದಿದೆ. ಈ ಪರಿಷತ್ತು ಮೂರು ದಿನಗಳ ವರೆಗೆ ನಡೆಯಲಿದ್ದು ಆ ಕಾಲಕ್ಕೆ ಕಾಮಗಾರರಿಗೆ ಯೋಗ್ಯವಾಗುವ ಉದ್ಯೋಗಗಳ ಪ್ರದರ್ಶನವೂ ನಡೆಯುವದು.

ಸೈನಿಕ ಶಾಲೆಗಳಿಗೆ ಹೆಚ್ಚಿನ ವೆಚ್ಚದ ಸಲುವಾಗಿ ಧನಸಹಾಯವೆಂದು ಮುಂಬಯಿ ಸರಕಾರವು ೩೭ ಸಾವಿರ ರೂಪಾಯಿ ಮಂಜೂರ ಮಾಡಿದೆ.

ಧನಮಂಜೂರ ಮಾನ್ಯತಾ ಸಾರ್ವಜನಿಕ ಎಂಬ ಗುಜರಾತಿ ಸಂಸ್ಥಾನಗಳು ಸುರತ ಜಿಲ್ಹೆಯಲ್ಲಿ ವಿಲೀನವಾಗಲಿವೆ.

ಶಿವಾಜಿ ವಂಶಜರಾದ ಮತ್ತು ಸಾತಾರಾದ ಅರಸ ಶ್ರೀಮಂತ ಶಾಹೂ ಮಹಾರಾಜರು ತಾ ೪ ಕ್ಕೆ ಶ್ರೀ ಬಾಳಾಸಾಹೇಬ ಖೇರರನ್ನು ಕಂಡು ಶ್ರೀ ಶಿವಾಜಿ ಮಹಾರಾಜರ ಕುಲದೇವತೆಯಾದ ಶ್ರೀ ಭವಾನಿಯ ಮೂರ್ತಿಯನ್ನು ಅರಮನೆಯಲ್ಲಿ ಮತ್ತೆ ಸ್ಥಾಪಿಸುವಂತೆ ಪ್ರಯತ್ನಿಸಬೇಕೆಂದು ಬಿನ್ನವಿಸಿಕೊಂಡರು. ಅದನು ಹಿಯು ಸಧ್ಯಕ್ಕೆ ಹಿಂದ ಸರಕಾರದ ಅಧಿಕಾರದಲ್ಲಿದೆ. ಮೂರ್ತಿಯನ್ನು ಅದರ ಮೊದಲಿನ ಸ್ಥಳದಲ್ಲಿ ಪ್ರತಿಷ್ಠೆಗೊಳಿಸಲು ಸರ್ವವಿಧ ಪ್ರಯತ್ನಗಳನ್ನು ಮಾಡುವದಾಗಿ ಶ್ರೀ ಬಿ ಜಿ. ಖೇರರು ಆಶ್ವಾಸನ ಕೊಟ್ಟರಾಗಿ ತಿಳಿಯುತ್ತದೆ.

ಪಾಕಿಸ್ತಾನ ಸರಕಾರದ ಓವರ್ಸೀಸ ಏಜಂಟ ಮತ್ತು ಜನರಲ ಕಮೀಶನರರು ಮುಂಬಯಿಯಲ್ಲಿ ಪಾಕಿಸ್ತಾನಕ್ಕಾಗಿ ಜನರ ಮತ್ತು ಸಾಮಾನು ಸಾಗಣಿಗಾಗಿ ವಿಮಾನ ಮುಖಾಂತರ ತಾ ೩ ಕ್ಕೆ ಹೋಗಿ ಹಿಂದ ಪಾಕಿಸ್ತಾನ ಒಪ್ಪಂದದ ಮೇರೆಗೆ ೫೦ ಸಾವಿರ ಗಂಟುಗಳನ್ನು ಕೊಂಡರೆಂದು ತಿಳಿಯುತ್ತದೆ.

ಪ್ರಾಂತದ ಜಿಲ್ಹಾ ಮ್ಯಾಜಿಸ್ಟ್ರೇಟರು ಕಳ್ಳಬ್ಬಟ್ಟಿ ಬೆಲೆಯ ನಿಯಂತ್ರಣವನ್ನು ಜೆಯ ಬಗಿಯಾಗಿರುವಂತೆ ನೋಡಿಕೊಳ್ಳಬೇಕೆಂದು ಮುಂಬಯಿ ಸರಕಾರವು ವಿಧಿಸಿರುವದು. ಬಾಹ್ಯ ಜನಕನವನ್ನು ತಡೆಯುವದೇ ಸರಕಾರದ ಉದ್ದೇಶವಾಗಿದೆ. ಕಳ್ಳಬ್ಬಯ ಮಂಡಳಿಯ ಇನ್ನೆ ಜಿಲ್ಹಾ ಮಟ್ಟಕ್ಕೆ ಸಹಾಯ ಸಮಿತಿಗಳನ್ನು ವಿಚಾರಿಸಿ ಯೋಗ್ಯ ಕ್ರಮಗಳನ್ನು ಕೈಕೊಳ್ಳಲು ಅವರಿಗೆ ತಿಳಿಸಲಾಗಿದೆ. ಕಾರ್ಯವಿದ್ದಷ್ಟು ಹೆಚ್ಚು ಎಚ್ಚರಿಯನ್ನು ಪೂರೈಸಲು ಯತ್ನಿಸುವದಾಗಿ ಸರಕಾರವು ತಿಳಿಸುತ್ತದೆ.

ಯುಕ್ತಪ್ರಾಂತ.

ಕಾನಪುರದ ಪೋಲೀಸರು ತಾ ೫ ಕ್ಕೆ ೧೫ ಮುಸ್ಲಿಂರನ್ನು ಜಾತೀಯ ಭಾವನೆಯನ್ನು ಕೆರಳಿಸಿ ಗಲಭೆ ಉಂಟುಮಾಡುತ್ತಿದ್ದರೆಂಬ ಅರೋಪದ ಮೇಲೆ ಬಂಧಿಸಿದ್ದಾರೆ. ಬಂಧಿತರಾದವರಲ್ಲಿ ಸರಕಾರಿ ಪ್ರಮುಖ ಅಧಿಕಾರಿಗಳು, ಖಾನ ಸಾಹೇಬರು, ಅಲ್ಲದೆ ನಿವೃತ್ತ ಸರಕಾರಿ ಅಧಿಕಾರಿಗಳು ಇರುವರು. ಪೋಲೀಸರು ನಗರದಲ್ಲೆಲ್ಲ ಶೋಧ ನಡೆಸಿ ಪಾಕಿಸ್ತಾನ–ಹೈದರಾಬಾದ ಪ್ರಚಾರ ಸಾಹಿತ್ಯವನ್ನು ಜಪ್ತ ಮಾಡಿ ಆ ಮೇಲೆ ಮೇಲ್ಯಾಚಿಸಿದ ಬಂಧನದ ಕಾರ್ಯವನ್ನು ಕೈಕೊಂಡರು.

ಕಾನಪುರದ ಜಿಲ್ಹಾ ಮ್ಯಾಜಿಸ್ಟ್ರೇಟರು ೧೪೪ ನೇ ಕಲಮಿನನ್ವಯ ತಾ. ೫ ಕ್ಕೆ ಒಂದು ಹುಕುಮನ್ನು ಹೊರಡಿಸಿ ಮೆರವಣಿಗೆ ಸಾರ್ವಜನಿಕ ಸಭೆ, ೫ ಕ್ಕಿಂತ ಹೆಚ್ಚು ಜನ ನೆರೆಯುವದು, ಶಸ್ತ್ರಾಸ್ತ್ರ ಹಿಡಿದುಕೊಂಡು ಅಡ್ಡಾಡುವದು ಇವನ್ನೆಲ್ಲ ಪ್ರತಿಬಂಧಿಸಿದ್ದಾರೆ. ಅಲ್ಲದೆ ಸಾರ್ವಜನಿಕ ಸ್ಥಳದಲ್ಲಿ ಪಾಕಿಸ್ತಾನ ರೆಡಿಯೋ ಕೇಳಕೂಡದೆಂದೂ ಪಾಕಿಸ್ತಾನ ಸರಕಾರಕ್ಕಾಗಲೀ ಯಾವದೇ ವಿದೇಶ ಸರಕಾರಕ್ಕಾಗಲೀ ನಿಷ್ಠೆ ವ್ಯಕ್ತಪಡಿಸುವ ಭಾಷಣ, ವಾಕ್ಯ, ಪ್ರಚಾರ ಪ್ರಾಂತ ಹಾಗೂ ಸಂಕೇತಗಳ ಪ್ರದರ್ಶನ ಮಾಡಕೂಡದೆಂದೂ ನಿಷೇಧಿಸಿದ್ದಾರೆ.

ಹೊಸದಿಲ್ಲಿ

ತಾ ೩ ಕ್ಕೆ ದಿಲ್ಲಿಯ ಸಬ್ಜಿಮಂಡಿಯಲ್ಲಿ ಹಗಲು ಹೊತ್ತಿನಲ್ಲಿ ದರೋಡೆ ಸಂಭವಿಸಿತು. ಒರ್ವನು ಒಬ್ಬನ ಅಂಗಡಿಯಲ್ಲಿ ನೋಟುಗಳನ್ನು ಎಣಿಸುತ್ತ ಕೂತಾಗ ಹುಡುಗನೊಬ್ಬನು ನುಗ್ಗಿ ೩೯೦೦ ರೂ. ನೋಟುಗಳನ್ನು ದೋಚಿಕೊಂಡು ಹೋದನು. ಕೂಡಲೆ ಜನರು ಅವನನ್ನು ಬೆನ್ನಟ್ಟಿ ಹಿಡಿದು ಪೋಲೀಸರಿಗೆ ಒಪ್ಪಿಸಿದರು.

ಮಾರ್ಚ ೩೧ ಕ್ಕೆ ಭೂಮಿಗತರಾದ ೪೦ ಕಮ್ಯುನಿಸ್ಟರನ್ನು ಅಮೃತಸರ ಪೋಲೀಸರು ಹುಡುಕುತ್ತಿದ್ದಾರೆಂದು ಅಧಿಕೃತವಾಗಿ ತಿಳಿಯುತ್ತದೆ.

ತಾ ೪ ರಂದು ಇಳಿಹೊತ್ತಿನಲ್ಲಿ ದಿಲ್ಲಿಯಲ್ಲಿ ತಾಸಿಗೆ ೫೦ ಮೈಲು ವೇಗವುಳ್ಳ ಬಿರುಗಾಳಿಯು ಬೀಸಿತು. ತರುವಾಯ ಮಳೆಸುರಿದು ಉಷ್ಣತಾಮಾನವು ೨೪ ಡಿಗ್ರಿ ಕಡಿಮೆಯಾಯಿತು. ನೂರಾರು ಗಿಡಗಳು ಬಿದ್ದು ಜನರು ಹೋಗಬರುವ ದಾರಿಗಳು ಕಟ್ಟಾಗಿಬಿಟ್ಟವೆಂದು ತಿಳಿಯುತ್ತದೆ.

ದಿಲ್ಲಿ ಮ್ಯಾಜಿಸ್ಟ್ರೇಟರು ಒಂದು ಅಪ್ಪಣೆ ಹೊರಡಿಸಿ ಹೆಡ್ ಕಾನಸ್ಟೇಬಲ್ ಮೇಲಿನ ದರ್ಜೆಯ ಎಲ್ಲ ಪೋಲೀಸ ಅಧಿಕಾರಿಗಳಿಗೆ ದಿಲ್ಲಿಯಲ್ಲಿ ಬರುವ ಎಲ್ಲ ಮೋಟಾರುಗಳನ್ನೂ ಅವುಗಳಲ್ಲಿರುವ ಎಲ್ಲ ಜನರನ್ನೂ ಶಸ್ತ್ರಾಸ್ತ್ರ ಬಾಂಬ ಮೊದಲಾದವುಗಳ ಸಂಬಂಧದಲ್ಲಿ ಝಡತಿ ನಡೆಸಲು ಅಧಿಕಾರ ಕೊಟ್ಟಿದ್ದಾರೆ. ತಾ ೨೨ ರ ವರೆಗೆ ಈ ಅಪ್ಪಣೆ ಜಾರಿಯಲ್ಲಿರುವದು.

ದಿಲ್ಲಿಯ ಪೋಲೀಸ ಪಡೆಯನ್ನು ಇತ್ತೀಚೆ ಬೆಳೆಸಲಾಗಿದೆ. ಈ ವರೆಗೆ ೧೦೦೦ ಜನರನ್ನು ಸೇರಿಸಿಕೊಳ್ಳಲಾಗಿದೆ. ಇವರಿಗೆ ಸೈನ್ಯ ತಂತ್ರಜ್ಞರಿಂದ ಶಿಕ್ಷಣ ಕೊಡಿಸಲಾಗುವದು. ಇವರಿಗಾಗಿ ಒಂದು ಶಿಕ್ಷಣ ಕೇಂದ್ರವನ್ನೂ ತೆರೆಯಲಾಗುವದು. ಸ್ತ್ರೀ ಪೋಲೀಸ ದಳವನ್ನೂ ಪ್ರಾರಂಭಿಸಲಾಗಿದ್ದು ಇದುವರೆಗೆ ೫೧ ಸ್ತ್ರೀಯರನ್ನು ಸೇರಿಸಿಕೊಳ್ಳಲಾಗಿದೆ. ಇವರೆಲ್ಲರೂ ನಿರಾಶ್ರಿತರೇ ಆಗಿದ್ದಾರೆ.

ಮುಂಬಯಿ ಪುಣೆ ಬೆಂಗಳೂರ ಮಾರ್ಗದಲ್ಲಿ ವಿಮಾನ ಸಾರಿಗೆ ಇಡಲು ವಿಮಾನ ಸಾರಿಗೆ ಲಾಯಸೆನ್ಸ ಸಮಿತಿಯವರು ಅಂಬಿಕಾ ಏರ ಲಾಯಿನ್ಸ ಸಂಸ್ಥೆಗೆ ತಾತ್ಪೂರ್ತಿಕ ಅನುಮತಿ ಕೊಟ್ಟಿದ್ದಾರೆ. ೧೯೪೮ ಸಪ್ಟೆಂಬರ ೩೦ ರ ವರೆಗೆ ಈ ಅನುಮತಿಯ ಅವಧಿ ಇರುವದು. ಅವಶ್ಯಕತೆ ಕಂಡರೆ ಮಾತ್ರ ಈ ವಿಮಾನಗಳು ಹೈದರಾಬಾದದಲ್ಲಿ ಇಳಿಯುವವು.

ಪಶ್ಚಿಮ ಪಂಜಾಬದಲ್ಲಿ ೧೪ ಸಾವಿರ ಹರಿಜನರು ಸಿಕ್ಕುಬಿದ್ದಿದ್ದು ಅವರು ಹಿಂದುಸ್ತಾನಕ್ಕೆ ಬರಲು ಹಾತೊರೆಯುತ್ತಿದ್ದಾರೆಂದೂ ಪಾಕಿಸ್ತಾನ ಸರಕಾರವು ಅವರನ್ನು ಬಿಟ್ಟಿಹಿಡಿದು ದುಡಿಸಿಕೊಳ್ಳುತ್ತಿರುವರೆಂದೂ ಹರಿಜನರ ಮುಖಂಡರಾದ ಶ್ರೀ ಭಗತ ಅಮೀಚಂದರು ಪ್ರಕಟಣೆ ಹೊರಡಿಸಿದ್ದಾರೆ. ಹಿಂದುಸ್ತಾನ ಸರಕಾರವು ಪಾಕಿಸ್ತಾನ ಸರಕಾರದೊಡನೆ ಯೋಗ್ಯ ವಿಚಾರ ವಿನಿಮಯವಮಾಡಿ ಇಷ್ಟು ಜನ ಹರಿಜನರನ್ನು ಕರೆಯಿಸಿಕೊಳ್ಳಬೇಕೆಂದೂ ಆ ಪ್ರಕಟಣೆಯಲ್ಲಿ ಕಾಣಿಸಿದೆ.

ಹಿಂದುಸ್ತಾನ ಸರಕಾರವು ಒಂದು ಪ್ರಕಟಣೆ ಹೊರಡಿಸಿ ಬಟ್ಟೆಯ ದರ ಮತ್ತು ಹಂಚಿಕೆಯ ಮೇಲಿನ ನಿಯಂತ್ರಣ ಎತ್ತಿದ್ದರಿಂದ ಜವಳಿ ನಿಯಂತ್ರಣ ಮಂಡಲ ಹಾಗು ಅದರ ಉಪಸಮಿತಿಗಳನ್ನು ವಿಸರ್ಜಿಸಲಾಗಿದೆಯೆಂದೂ ಅದರೂ ಜವಳಿ ಕಮಿಶನರರಿಗೆ ವಿವಿಧ ವಿಷಯಗಳಲ್ಲಿ ಸಲಹೆ ಕೊಡಲು ೩ ಹೊಸ ಸಮಿತಿಗಳನ್ನು ನಿಯೋಜಿಸಲಾಗಿದೆಂದೂ ಹೇಳಿದ್ದಾರೆ.

ಭಾರತದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಜುಲೈ ೧ ನೇ ವಾರದಲ್ಲಿ ಲಂಡನಕ್ಕೆ ಹೋಗುವ ಸಂಭವವಿರುವದರಿಂದಲೂ ಡಾ. ರಾಜೇಂದ್ರ ಪ್ರಸಾದರ ಮತ್ತೂ ಸರದಾರ ಪಟೇಲರ ಪ್ರಕೃತಿಯು ಇನ್ನೂ ಸುಧಾರಿಸದಿರುವದರಿಂದಲೂ ಆಗಸ್ಟದಲ್ಲಿ ಮುಕ್ತಾಯಗೊಂಡುವ ಅಧಿವೇಶನವನ್ನು ಕಾಯದೆಗಳನ್ನಾಗಿ ಮಾರ್ಪಡಿಸಲು ಹಿಂದೋಲಗದ ಸಭೆ ಸೇರಬೇಕಾದ್ದರಿಂದಲೂ ಘಟನಾ ಸಮಿತಿ ಸಭೆ ಸಪ್ಟೆಂಬರಕ್ಕೆ ಮುಂದೆ ಬೀಳಬಹುದೆಂದು ತಿಳಿಯುತ್ತದೆ.

ಡಾ. ಕೈಲಾಸನಾಥ ಕಟಜು ಅವರ ನಂತರ ಬ್ಯಾ. ಆಸಫ ಅಲ್ಲಿ ಅವರನ್ನು ಒಡಿಸಾದ ಗವರ್ನರರನ್ನಾಗಿ ನೇಮಿಸಬಹುದೆಂದು ತಿಳಿದು ಬರುತ್ತದೆ. ಈಗ ಸಂಸ್ಥಾನ ಖಾತೆಯ ಕಾರ್ಯದರ್ಶಿಗಳಾಗಿರುವ ವ್ಹಿ. ಪಿ. ಮೆನನ್ನರನ್ನು ಈ ಸ್ಥಳಕ್ಕೆ ನೇಮಿಸಬಹುದೆಂಬ ಸುದ್ದಿಗೆ ಬೆಂಬಲವಿಲ್ಲ.

ಮಧ್ಯಪ್ರಾಂತ

ಮಧ್ಯಪ್ರಾಂತದ ವರ್ಧಾ ಜಿಲ್ಲೆಯಲ್ಲಿರುವ ಅಕೋಲಾ, ಬುಲಢಾಣ ಜಿಲ್ಹೆಗಳಲ್ಲಿ ಸಾರ್ವಜನಿಕ ಶಾಂತತೆಗೆ ಭಂಗಬರಹತ್ತಿರುವದರಿಂದ ಮಧ್ಯಪ್ರಾಂತ ಸರಕಾರವು ಗುಂಡಾ ಕಾನೂನು ಈ ಪ್ರದೇಶಕ್ಕೆ ಅನ್ವಯಿಸಬೇಕೆಂದು ನಿರ್ಧರಿಸಿದೆ.

ಮದ್ರಾಸ

ಮದ್ರಾಸ ಸರಕಾರದವರು ಪ್ರಾಂತದಲ್ಲಿಯ ಕಾರಖಾನೆಗಳು ಯಂತ್ರಗಳನ್ನು ಸರಕಾರದ ಅಪ್ಪಣೆಯಿಲ್ಲದೆ ಸ್ಥಳಾಂತರಿಸದಂತೆಯೂ ಅವುಗಳನ್ನು ಬಿಚ್ಚದಂತೆಯೂ ನೋಡಿಕೊಳ್ಳಲು ಗ್ಯಾಜೆಟದಲ್ಲಿ ಒಂದು ಮಸೂದೆಯನ್ನು ಪ್ರಸಿದ್ಧಿಸಿದ್ದಾರೆ.

ಹಿಂದೀ ಸಂಸ್ಥಾನ

ಲಾರ್ಡ ಮೌಂಟ ಬ್ಯಾಟನ್ನರು ಸಪತ್ನೀಕರಾಗಿ ತಾ. ೧೪ ಕ್ಕೆ ಬರೋಡೆಗೆ ಬಂದು ವಲ್ಲಭ ವಿದ್ಯಾ ನಗರದಲ್ಲಿ ಬಿರ್ಲಾ ಎಂಜಿನಿಯರಿಂಗ ಕಾಲೇಜಿನ ಉದ್ಘಾಟನ ಮಾಡುವರೆಂದು ತಿಳಿಯುತ್ತದೆ. ಅವರು ಆ ನಗರದಲ್ಲಿಯ ಉಳಿದ ಶಿಕ್ಷಣ ಸಂಸ್ಥೆಗಳಿಗೂ ಭೆಟ್ಟಿಕೊಡುವರು.

ಇತ್ತೆಹಾದುಲ ಅಧ್ಯಕ್ಷರಾದ ಕಾಸೀಮ ರಜವಿಯವರು ಅಸ್ಪೃಶ್ಯರ ಸಭೆಯಲ್ಲಿ ಭಾಷಣ ಮಾಡುತ್ತ ಹೈದ್ರಾಬಾದ ಜನರು ಸಾರ್ವತ್ರಿಕ ಮತಗಣನೆಗೆ ಅಂಜಲ್ಲವೆಂದೂ ಅಸ್ಪೃಶ್ಯರು ೮೫ ಲಕ್ಷ ಮತ್ತು ಮುಸಲ್ಮಾನರು ೩೫ ಲಕ್ಷ ಇರುವರೆಂದು ಕೃತಕ ಕಾಲ್ಪನಿಕ ಅಂಕಿಗಳ ಆಧಾರದಿಂದ ಮತಗಣನೆಯ ಫಲಿತಾಂಶಕ್ಕೆ ಅಂಜಿಲ್ಲವೆಂದೂ ಹೈದರಾಬಾದದ ಪ್ರಜೆಗಳಾರೂ ಒಕ್ಕೂಟಕ್ಕೆ ಸೇರಲು ಒಪ್ಪುವದಿಲ್ಲವೆಂದೂ ಬಡಾಯಿ ಕೊಚ್ಚಿದರು.

ಪಾಕಿಸ್ತಾನ

ವಾಡು (ಕರಾಚಿ) ಪೋಸ್ಟ ಮಾಸ್ತರರಾದ ಗುಲಾಮ ರಸೂಲರು (ಪಾಕಿಸ್ತಾನ) ಸರಕಾರದ ೨೫ ಸಾವಿರ ರೂಪಾಯಿ ಎತ್ತಿಹಾಕಿದ್ದುದು ಕಂಡು ಬಂದಿದ್ದರಿಂದ ರೋಹರಿಯಲ್ಲಿ ಅವರನ್ನು ಬಂಧಿಸಲಾಗಿದೆ. ಕೆಲವು ದಿನಗಳಿಂದ ಪೋಸ್ಟ ಮಾಸ್ತರರು ಕಾಣೆಯಾಗಿದ್ದರು.

ಪಾಕಿಸ್ತಾನ ಸರಕಾರದವರು ಹಿಂದುಸ್ತಾನದ ವಿಭಜನೆಯ ಇತಿಹಾಸವನ್ನು ಸಿದ್ಧಪಡಿಸಲು ನಿಶ್ಚಯಿಸಿ ಸರಕಾರದ ಎಲ್ಲ ಖಾತೆಗಳಿಗೆ ಸಂಬಂಧಿಸಿದ ವಿವರಗಳನ್ನು ಸಂಗ್ರಹಿಸಲು ತಿಳಿಸಿದ್ದಾರೆಂದು ಗೊತ್ತಾಗುತ್ತದೆ.

ಪೂ. ಪಾಕಿಸ್ತಾನದಿಂದ ೧೨ ಲಕ್ಷ ನಿರಾಶ್ರಿತರು

ಪೂರ್ವ ಬಂಗಾಲದಿಂದ ಒಟ್ಟು ೧೨ ಲಕ್ಷಕ್ಕಿಂತ ಹೆಚ್ಚು ನಿರಾಶ್ರಿತರು ಪ. ಬಂಗಾಲಕ್ಕೆ ಬಂದಿರುವರೆಂದೂ ಇವರಲ್ಲಿ ೬ ಲಕ್ಷಕ್ಕಿಂತ ಹೆಚ್ಚು ಜನರು ಔದ್ಯೋಗಿಕ ಪ್ರದೇಶದಲ್ಲಿರುವರೆಂದೂ ನಾದಿಯಾ ಜಿಲ್ಹೆಯೊಂದರಲ್ಲಿಯೇ ೨ ಲಕ್ಷಕ್ಕಿಂತ ಹೆಚ್ಚು ನಿರಾಶ್ರಿತರು ಆಶ್ರಯ ಪಡೆದಿರುವರೆಂದೂ ಕಲಕತ್ತಾ ನಗರದಲ್ಲಿ ೧ ಲಕ್ಷಕ್ಕಿಂತ ಹೆಚ್ಚು ನಿರಾಶ್ರಿತರು ಪುನರ್ನಿವೇಶನ ಪಡೆದಿರುವರೆಂದೂ ಪಶ್ಚಿಮ ಬಂಗಾಲದ ನಿರಾಶ್ರಿತ ಪುನರ್ನಿವೇಶನ ಕಮಿಶನರರಾದ ಶ್ರೀ ಎ. ಬಿ. ಗಂಗೂಲಿಯವರು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಹೇಳಿದರು.

ಪಶ್ಚಿಮ ಬಂಗಾಲ ಸರಕಾರವು ಬೇರೆ ಬೇರೆ ಜಿಲ್ಹೆಗಳಲ್ಲಿ ಕೂಡಿ ಒಟ್ಟು ೫ ಲಕ್ಷ ಎಕರೆ ಭೂಮಿಯನ್ನು ವಶಪಡಿಸಿಕೊಂಡು ಪೂರ್ವ ಪಾಕಿಸ್ತಾನದಿಂದ ಬಂದ ನಿರಾಶ್ರಿತರ ೧ ಲಕ್ಷ ಕುಟುಂಬಗಳಿಗೆ ಪುನರ್ನಿವೇಶನ ಒದಗಿಸಿ ಕೊಡಲಾಗುವದೆಂದೂ ಶ್ರೀ. ಗಂಗೂಲಿಯವರು ಹೇಳಿದರು.

ಭಾರತಕ್ಕೆ ಅಮೇರಿಕನ್ನರ ಸಾಲ

ಭಾರತದ ವಿಧಾಯಕ ಮತ್ತು ಸ್ವಾವಲಂಬಿ ಯೋಜನೆಗಳಿಗಾಗಿ ಅಮೇರಿಕೆಯ ಅನೇಕ ಖಾಸಗಿ ಉದ್ದಿಮೆದಾರರು ಸುಮಾರು ೨೦೦ ಕೋಟಿ ಡಾಲರುಗಳ ವರೆಗೆ ಹಣವನ್ನು ಸಾಲರೂಪವಾಗಿ ಕೊಡಲು ಸಿದ್ಧರಿದ್ದಾರೆಂದು ಅಮೇರಿಕೆಯಲ್ಲಿ ಹಿಂದುಸ್ತಾನದ ರಾಯಭಾರಿಯಾಗಿ ಹೋಗಿದ್ದ ಶ್ರೀ ಅಸಫ ಅಲ್ಲಿಯವರು ತಾ. ೩ ರಂದು ಹೊಸದಿಲ್ಲಿಯಲ್ಲಿ ಹೇಳಿದರು. ಈ ಬಗೆಯ ಸಾಲಗಳನ್ನು ಸ್ವೀಕರಿಸುವ ಬಗ್ಗೆ ಭಾರತ ಸರಕಾರವು ನಿಶ್ಚಿತ ಧೋರಣವನ್ನೂ ಕ್ರಮವನ್ನೂ ಗೊತ್ತುಪಡಿಸಬೇಕೆಂದೂ ಜಗತ್ತಿನಲ್ಲಿ ಅಮೇರಿಕೆಯಲ್ಲದೆ ಇನ್ನು ಯಾವ ರಾಷ್ಟ್ರವೂ ಭಾರತಕ್ಕೆ ಬೇಕಾಗುವ ಯಂತ್ರ ಸಾಮಗ್ರಿ ಮೊದಲಾದವುಗಳನ್ನು ಅಲ್ಪಾವಕಾಶದಲ್ಲಿ ಪೂರೈಸಲಾರದೆಂದು ನುಡಿದರು.

ಮಾಂಕ್ಟನ್ನರಿಗೆ ೧ ಲಕ್ಷ ೨೨ ಸಾವಿರ ಪೌಂಡು

ನಿಜಾಮರ ಘಟನಾ ಸಲಹೆಗಾರರಾದ ಸರ್ ವಾಲ್ಟರ ಮಾಂಕ್ಟನ್ನರು ಮರಳಿ ಹೈದರಾಬಾದಕ್ಕೆ ಬರಬೇಕಾದರೆ ಅವರಿಗೆ ಅಪಾರ ಧನದ ಆಮಿಷ ತೋರಿಸಲಾಯಿತೆಂದು ನಮ್ಮ ಲಂಡನ ಪ್ರತಿನಿಧಿ ತಿಳಿಸುತ್ತಾರೆ. ಅವರು ಮೊದಲು ಹೈದರಾಬಾದಕ್ಕೆ ಬರಲು ಒಪ್ಪಲಿಲ್ಲವಂತೆ. ಆದರೆ ನಿಜಾಮರು ಸರ ಮಾಂಕ್ಟನ್ನರ ಪ್ರವಾಸ ಮತ್ತು ಇತರ ವೆಚ್ಚಕ್ಕಾಗಿ ನಿಸಲ್ಲೆಂದೂ ೧ ಲಕ್ಷ ೨೨ ಸಾವಿರ ಪೌಂಡುಗಳನ್ನು ಕೊಟ್ಟಿರುವರೆಂದು ವಿಶ್ವಸನೀಯವಾಗಿ ತಿಳಿದು ಬರುತ್ತದೆಯಾಗಿ ನಮ್ಮ ಪ್ರತಿನಿಧಿ ಅರುಹುತ್ತಾರೆ. ಈ ಸಲ ಸರ ಮಾಂಕ್ಟನ್ನರು ತಮ್ಮ ಜೊತೆಗೆ ಪಾಕಿಸ್ತಾನ ಪಕ್ಷಪಾತಿಗಳು ಬ್ರಿಗೇಡಿಯರ ಡಿಸ್ಮಂಡ ಯಂಗ ಎಂಬವರನ್ನು ಕರೆತಂದಿದ್ದಾರೆ. ಪಾಕಿಸ್ತಾನ ಸ್ಥಾಪನೆಯಾದ ನಂತರ ಬ್ರಿ. ಯಂಗ ಇವರು ಲಾಹೋರಕ್ಕೆ ಹೋಗಿ 'ಪಾಕಿಸ್ತಾನ ಟೈಮ್ಸ' ಎಂಬ ಪತ್ರಿಕೆಯ ಸಂಪಾದಕರಾಗಿದ್ದರು. ಆ ಮೇಲೆ ಸಹ-ಸ್ಪೆಕ್ಟೇಟರ' ಪತ್ರಿಕೆಯಲ್ಲಿ ಹಿಂದುಸ್ತಾನದ ಬಗ್ಗೆ ಅಪಪ್ರಚಾರ ಪೂರಿತ ಲೇಖ ಬರೆದ ಮಹನೀಯರಿವರು.ಹೈದರಾಬಾದ ಹಿಂದುಸ್ತಾನಗಳಲ್ಲಿ ಯುದ್ಧವೇ ಸಂಭವಿಸಿದಲ್ಲಿ ನಿಜಾಮರು ಬ್ರಿ. ಯಂಗರಿಗೆ ವಿದೇಶ ಪ್ರಚಾರ ಶಾಖೆಯನ್ನು ಒಪ್ಪಿಸುವರೆಂದು ಲಂಡನದಲ್ಲಿ ವಾರ್ತೆ ಇರುವದಾಗಿಯೂ ತಿಳಿಯುತ್ತದೆ.

ಭಾರತದಲ್ಲಿ ಮೇಘದೂತ ವಿಮಾನಗಳು

ಹಿಂದಿ ವಿಮಾನ ಎಂಜನಿಯರ ಸಂಘದ ಅಧ್ಯಕ್ಷರಾದ ಬಿರೇನರಾಯರು ತಾವು ಹೊಸದಾಗಿ ನಿರ್ಮಿಸಿದ ಆಧುನಿಕ ಲಘುವಿಮಾನ ನಿರ್ಮಾಣದ ಬಗ್ಗೆ ಫಾರ್ನಬರೋ ವಿಮಾನ ಕಾರಖಾನೆಯವರ ಸಲಹೆ ಪಡೆದುಕೊಳ್ಳಲು ತಾ. ೩ ಕ್ಕೆ ಮುಂಬಯಿಯಿಂದ ಅಲ್ಲಿಗೆ ಪ್ರಯಾಣ ಮಾಡಿದರು. ಅವರ ಯೋಜನೆಯು ಕಾರ್ಯಕ್ರಮಕ್ಕೆಂದು ಮನ್ನಣೆ ಸಿಕ್ಕಲ್ಲಿ ಅವಶ್ಯ ಭಾಗಗಳನ್ನು ಮಾತ್ರ ಅಮೇರಿಕೆ ಇಲ್ಲವೆ ಬ್ರಿಟನ್ನಿಂದ ತರಿಸಿಕೊಂಡು ಭಾರತದಲ್ಲಿಯೇ ವಿಮಾನಗಳನ್ನು ನಿರ್ಮಾಣಗೊಳಿಸುವದಾಗಿಯೂ ಅವಕ್ಕೆ ಮೇಘದೂತ ವಿಮಾನಗಳೆಂದು ನಾಮಕರಣ ಮಾಡಲಾಗುವದೆಂದೂ ಅವುಗಳಲ್ಲಿ ೩ ಆಸನಗಳ ವ್ಯವಸ್ಥೆ ಮಾಡಲಾಗುವದೆಂದೂ ಅವರು ಹೇಳಿದರು.

ನಾಗರಿಕರಿಗೆ ಪುಕ್ಕಟೆ ಪುಸ್ತಕ

ಅಹಮ್ಮದಾಬಾದ ನಗರ ಸಭೆಯ ಉಪಕ್ರಮ

ನಗರದ ಬೇರೆ ಬೇರೆ ವಾರ್ಡುಗಳಲ್ಲಿ ವಾಸಿಸುವ ನಾಗರಿಕರಿಗೆ ಪುಕ್ಕಟೆಯಾಗಿ ಓದಲು ಪುಸ್ತಕ ಒದಗಿಸಿಕೊಡುವ ಉದ್ದೇಶದಿಂದ ಅಹಮ್ಮದಾಬಾದ ನಗರ ಸಭೆಯವರು ೨೫ ಸಾವಿರ ರೂಪಾಯಿ ಪ್ರಾರಂಭಿಕ ವೆಚ್ಚಮಾಡಿ ಒಂದು ಸಂಚಾರಿ ಪುಸ್ತಕಾಲಯ ಸ್ಥಾಪಿಸಲು ನಿರ್ಧರಿಸಿದ್ದಾರೆ. ಮೋಟಾರು ವ್ಯಾನುಗಳಲ್ಲಿ ಪುಸ್ತಕಗಳನ್ನಿಟ್ಟು ನಗರದ ಬೇರೆ ಬೇರೆ ವಾರ್ಡುಗಳಲ್ಲಿ ಅವನ್ನು ಓದಬಲ್ಲವರಿಗೆ ಹಂಚಿ ನಾಗರಿಕರಲ್ಲಿ ಜ್ಞಾನ ಪ್ರಸಾರಮಾಡುವದೇ ಈ ಸಂಚಾರಿ ಪುಸ್ತಕಾಲಯದ ಉದ್ದೇಶವಾಗಿದೆ. ಸೌರಾಷ್ಟ್ರದ ವಿದ್ಯಾಸಚಿವರಾದ ಶ್ರೀ ನಾನಾಭಾಯಿ ಭಟ್ಟರು ಈ ಸಂಚಾರಿ ಪುಸ್ತಕಾಲಯದ ಉದ್ಘಾಟನೆ ಮಾಡುವರಾಗಿ ತಿಳಿಯುತ್ತದೆ.

ಪಾಕಿಸ್ತಾನ ಸರಕಾರಿ ನೌಕರರಲ್ಲಿ ಅಸಂತೋಷ

ಪಾಕಿಸ್ತಾನ ಕೇಂದ್ರ ಸರಕಾರದ ವಿವಿಧ ಖಾತೆಗಳ ನೌಕರರಲ್ಲಿ ಅಸಂತೋಷವು ಹರಡ ಹತ್ತಿದಂತೆ ಕಾಣುತ್ತದೆ. ಮೊನ್ನೆ ಮೊನ್ನೆ ಪಾಕಿಸ್ತಾನ ಕಂದಾಯ ನೌಕರರು ತಮ್ಮ ಸಂಪನ್ನು ಕೊನೆಗಾಣಿಸಿದ್ದಾರೆ. ಈಗ ಪಾಕಿಸ್ತಾನ ಅರ್ಥಿಕ ಅರ್ಡಿನನ್ಸ ಫ್ಯಾಕ್ಟರಿನ ನೌಕರರು ಬಾದಿಗೆ ಇತರ ಭತ್ತೆ ಮುಂತಾದ ತಮ್ಮ ಬೇಡಿಕೆಗಳನ್ನು ಮಾನ್ಯಮಾಡದಿದ್ದರೆ ಸಂಪನ್ನು ಹೂಡುವ ಬೆದರಿಕೆ ಹಾಕಿದ್ದಾರೆ. ಕನಿಷ್ಠ ವೇತನ ಮತ್ತು ಪರಮಾವಧಿ ವೇತನದಲ್ಲಿ ವಿಶೇಷ ಅಂತರವಿರುವದೇ ಪಾಕಿಸ್ತಾನ ಕೆಳತರಗತಿಯ ನೌಕರರ ಮುಖ್ಯವಾದ ದೂರು. ಜಗತ್ತಿನ ಎಲ್ಲ ದೇಶಗಳಿಗಿಂತ ಈ ಅಂತರವು ಹೆಚ್ಚಾಗಿರುವದು.

ಚಿಕ್ಕಕತೆ

'ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ'

ಬರೆದವರು:
ಶ್ರೀ. ಎಸ್. ಕೆ. ಶ್ರೀಪತಿ ಆಚಾರ್ಯ
ಉಡುಪಿ

ಕರ್ನಾಟಕ ಗೌರವದ ಪ್ರತೀಕ ಕನ್ನಡ ಸಾಮ್ರಾಜ್ಯದ ಉತ್ಕರ್ಷದ ಸ್ಮಾರಕ ಕರ್ನಾಟಕ ಕಲೆಯ ಅಮರಚಿಹ್ನೆಯಾದ ವಿಜಯ ನಗರದ ಸ್ಥಾಪನೆಯಾಗುತ್ತಿತ್ತು. ಲೋಹಿತ ಶಿಲಾಖಂಡಗಳಿಂದಾವೃತವಾದ ತುಂಗಭದ್ರೆಯ ತಟದಿಂದು ಮಾನವನ ಹಸ್ತಲಾಘವದಿಂದ ಸುಂದರ ನಗರದ ರೂಪಧಾರಣೆ ಮಾಡುತ್ತಲಿತ್ತು. ಮಹಾರಾಜ ಭೀಮದೇವರಾಯನು ದಕ್ಷಿಣ ಭಾರತದ ಶಿಲ್ಪಿಗಳೂ ಚಿತ್ರಕಾರರೂ ಸನ್ಮಾನಪೂರ್ವಕವಾಗಿ ಒಂದುಗೂಡಬೇಕೆಂದೂ ವಿಜಯನಗರವು ದಕ್ಷಿಣ ಭಾರತದಲ್ಲೇ ಏಕೆ ಸಮಗ್ರ ಭಾರತದಲ್ಲಿಯೂ ಸರ್ವಶ್ರೇಷ್ಠ, ಸರ್ವಾಂಗ ಸುಂದರ, ಸರ್ವಕಲಾ ವಿಭೂಷಿತ ನಗರವಾಗಿ--ಕಲಾತ್ಮಕ, ಕಲಾದೈಹಿಕ ನಗರವಾಗಬೇಕೆಂದೂ ಘೋಷಣೆ ಮಾಡಿದ್ದನು.

ನಗರದ ನಾಲ್ಕೂ ಕಡೆಗಳಲ್ಲಿ ವಿಶಾಲ ಭವನಗಳೇರ್ಪಟ್ಟವು. ಪ್ರತಿಯೊಂದು ಚತುಷ್ಪಥದಲ್ಲಿಯೂ ಸುಂದರ ಮತ್ತು ವಿಶಾಲಕಾಯಗಳಾದ ದೇವಮೂರ್ತಿಗಳು ಸ್ಥಾಪಿಸಲ್ಪಟ್ಟವು. ಎಲ್ಲ ಶಿಲ್ಪಿಗಳು ತಂತಮ್ಮ ಕಲೆಗಳ ಉತ್ಕೃಷ್ಟ ನಮೂನೆಗಳನ್ನು ಕಳುಹಿಸುತ್ತಿದ್ದರು. ಗೋಲಕುಂಡಾದಿಂದ ವಜ್ರಗಳು, ಮನ್ನಾರದ ಮುತ್ತುಗಳು, ಶಿವಮೊಗ್ಗಾದ ಆನೆದಂತಗಳು ರಾಶಿರಾಶಿಯಾಗಿ ಬರುತ್ತಿದ್ದುವು.

ನಗರವು ಬಹಳ ವಿಸ್ತಾರವನ್ನು ಹೊಂದಿತು. ಆದರೆ ಅದರ ನಾಲ್ಕನೆಯ ಒಂದಂಶದಲ್ಲಿ ವಾಸಿಸಲು ಜನರಿಲ್ಲದಾದರು. ಭೀಮದೇವರಾಯನು 'ಕಲಾಕಾರರು ಸ್ವನಿರ್ಮಿತ ಭವನ, ಪ್ರಾಸಾದಗಳಲ್ಲೇ ವಾಸಿಸಲಿ. ನಗರವು ಜನನಿಬಿಡವಾದ ನಂತರ ಕಲಾಕಾರರಿಗೆ ತಮ್ಮ ಕಲೆಯ ಪ್ರದರ್ಶನಾವಸರವು ದೊರೆತು ಅದಕ್ಕೆ ತಕ್ಕ ಗೌರವವು ಲಭಿಸುವುದು' ಎಂದು ಆದೇಶವನ್ನಿತ್ತನು.

ಪ್ರಾತಃಕಾಲದ ಸಮಯ. ಕಲಾಪೂರ್ಣ ನೂರು ಕಂಬಗಳುಳ್ಳ ಮಹಾರಾಜನ ದರಬಾರ ಮಹಲು ಸಮೃದ್ಧವಾಗಿತ್ತು. ಮಹಾರಾಜನು ರತ್ನಖಚಿತ ಸ್ವರ್ಣ ಸಿಂಹಾಸನವನ್ನಲಂಕರಿಸಿದ್ದನು. ಆಗ ದ್ವಾರಪಾಲಕನೊಬ್ಬನು ಪ್ರವೇಶಿಸಿ ಕಲಾಕಾರನೊಬ್ಬನು ಬಾಗಿಲಲ್ಲಿ ಬಂದಿದ್ದು ಮಹಾರಾಜನ ಅಪ್ಪಣೆಯನ್ನು ನಿರೀಕ್ಷಿಸುವುದಾಗಿ ವಿನಂತಿಸಿದನು. 'ಕಲಾವಿದನಿಗೆ ಇಲ್ಲೆಲ್ಲೂ ತಡೆಯಿಲ್ಲ' ಎಂಬುದಾಗಿ ವಜ್ರಗಂಭೀರ ಸ್ವರದಿಂದ ಮಹಾರಾಜನ ಆಜ್ಞೆಯು ಹೊರಟಿತು. ಮೆಲ್ಲನೆ ದೃಢಕಾಯನಾದ, ಕೃಷ್ಣವರ್ಣ ತೈಲಸಿಕ್ತ ಕಲಾಕಾರನೊಬ್ಬನು ರಾಜಸಭೆಯನ್ನು ಪ್ರವೇಶಿಸಿದನು. ಆತನು ಮಲಿನ ವಸ್ತ್ರವನ್ನುಟ್ಟಿದ್ದನು. ಕರ್ಕಶವಾದ ಮುಂಗುರುಳುಗಳತ್ತಿತ್ತ ಅಲೆದಾಡುತ್ತಿದ್ದುವು. ಮೈಯೆಲ್ಲವೂ ಧೂಳಿಧೂಸರಿತವಾಗಿತ್ತು.

ಮಹಾರಾಜ ಭೀಮದೇವರಾಯನು ಆಗಂತುಕನನ್ನು ಕಂಡು ಆಶ್ಚರ್ಯಚಕಿತನಾದನು-- ಇವನೊಬ್ಬ ಕಲಾಕಾರನೇ? ಯಾವನ ಸೃಷ್ಟಿ ಕಾರ್ಯದಲ್ಲಿ ಸ್ವಯಂ ಕಲೆಯು ಭಾಗವಹಿಸಿಲ್ಲವೋ ಅವನು ಕಲೆಯನ್ನು ಸೃಷ್ಟಿ ಮಾಡಬಲ್ಲನೇ? ಕಲಾಭಿವ್ಯಕ್ತಿ ವಿಹೀನ ವ್ಯಕ್ತಿವಿಹೀನ ವ್ಯಕ್ತಿಯೊಬ್ಬನು ಕಲಾಭಿವ್ಯಕ್ತಿ ಮಾಡಬಲ್ಲನೇ? ಎಂದಾಲೋಚಿಸಿ ಮಹಾರಾಜನು-- 'ನೀನು ಕಲಾವಿದನೇ?' ಎಂದು ಕೇಳಿದನು.

'ಹೌದು'

'ಯಾವ ಕಲೆಯನ್ನು ನೀನು ಬಲ್ಲೆ'

'ಶಿಲ್ಪಕಲೆಯ ಮೇಲೆ ನನ್ನ ಸಂಪೂರ್ಣ ಅಧಿಕಾರವಿದೆ'

'ನಿನ್ನ ಶಸ್ತ್ರ ಸಾಮಗ್ರಿಗಳೆಲ್ಲಿ? ನಿನ್ನ ಕಲೆಯ ನಮೂನೆಗಳಿವೆಯೇ?

'ಅಸ್ತ್ರಗಳು ಹೊರಗಿವೆ. ಕಲೆಯ ಮಾದರಿಗಳನ್ನು ತೋರಿಸಲು ಅದೇನು ಧಾನ್ಯ ವಿಶೇಷವೇ? ನೀವು ಮಾಡಗೊಟ್ಟರೆ ಅದು ತಾನಾಗಿಯೇ ಪ್ರಕಟವಾಗುವುದು.'

'ಈಗ ನಮಗೆ ನಿನ್ನ ಶಿಲ್ಪಕಲೆಯ ಅವಶ್ಯಕತೆಯಿಲ್ಲವೆಂದು ತಿಳಿಸಲು ವಿಷಾದವಾಗುವುದು. ಬೇಕಾದಾಗ ನಿನ್ನ ಕಲಾ ಪ್ರದರ್ಶನದ ಅವಸರವು ದೊರಕಬಹುದು.'

'ಕಲೆಯು ಪ್ರದರ್ಶನಕ್ಕೆ ಯೋಗ್ಯವಾದ ವಸ್ತುವಲ್ಲ ಮಹಾರಾಜ. ಅದು ಆತ್ಮಾಭಿವ್ಯಕ್ತಿಯುಳ್ಳದ್ದು. ಅನುಭೂತಿಯ ಕ್ಷೇತ್ರವೂ ಆಗಿರುವುದು.'

'ನಿನ್ನ ಹೆಸರೇನು?'

'ಗುಡಿಪಾಲ'

ನಿವಾಸ?

'ಕಲೆಯ ಪ್ರತಿಷ್ಠೆಯಿದ್ದಲ್ಲಿ'

'ಜಾತಿ'?

'ಕಲಾಕಾರನಿಗೆ ಜಾತಿಯೂ ಇಲ್ಲ. ಧರ್ಮವೂ ಇಲ್ಲ. ಕಲಾಕಾರನೆಂಬುದಿಷ್ಟೆ ಅವನ ಪರಿಚಯ.'

'ನಿನ್ನ ಕಲಾಭಿಮಾನವೆಷ್ಟಿರುವುದೆಂದು ಸಮಯ ಬಂದಾಗ ಪರೀಕ್ಷಿಸುವೆನು. ಅಂದಿನವರೆಗೆ ಮಂತ್ರಿಯು ನಿನ್ನ ಆವಾಸಕ್ಕೆ ತಕ್ಕ ಏರ್ಪಾಡು ಮಾಡುವನು.

'ನಾನು ಕಲಾಭಿಮಾನಿಯಲ್ಲ ಮಹಾರಾಜ. ನನಗೆ ಅದರ ಜ್ಞಾನವಿದೆ ಅಷ್ಟೆ. ನನಗೆ ಯೋಗ್ಯವಾದ ವಸತಿಯನ್ನು ನಾನೇ ಏರ್ಪಡಿಸಿಕೊಳ್ಳುವೆನು.' ಎಂದು ಮಹಾರಾಜನನ್ನು ಅಭಿವಂದಿಸಿ ಹೊರಟು ಹೋದನು.

ಕೆಲವು ದಿನಗಳು ಕಳೆದುವು. ಗುಡಿಪಾಲನು ತನ್ನ ಆವಾಸವನ್ನು ಪಟ್ಟಣದಿಂದ ದೂರವಿರುವ ಮಾತಂಗ ಪರ್ವತದ ಮೇಲೆ ಪಂಪಾಸರದ ಸಮೀಪದ ಗುಹೆಯೊಂದರಲ್ಲಿ ಮಾಡಿಕೊಂಡಿದ್ದನು.

ಸಂಧ್ಯಾ ಸಮಯ. ಮಾತಂಗ ಪರ್ವತದ ಶಿಖರದ ಮೇಲೆ ಗುಡಿಪಾಲನು ನಿಂತುಕೊಂಡು ಅಸ್ತಮಿಸುವ ಸೂರ್ಯನನ್ನೂ ನಗರವನ್ನೂ ನಿರೀಕ್ಷಿಸುತ್ತಿದ್ದನು. ರಾಜಭವನದ ಒಂದು ಮೂಲೆಯಲ್ಲಿ ಚಿಕ್ಕದಾದ ಮೈದಾನ. ಅದರ ಮಧ್ಯದಲ್ಲೊಂದು ವಿಶಾಲವಾದ ಬಂಡೆಗಲ್ಲು ಇತ್ತು. ಇದನ್ನು ಕಂಡು ಆಹಾ ಇಂತಹ ಸುಂದರ ನಗರದಲ್ಲಿ ಇದೆಂತಹ ಕುರೂಪವನ್ನು ತರುವುದು ಎಂದಾಲೋಚಿಸುತ್ತಾ ಅವನು ಮೆಲ್ಲಮೆಲ್ಲಗೆ ಪರ್ವತದಿಂದ ಕೆಳಕ್ಕಿಳಿದನು.

ರಾತ್ರಿಯ ಹೊತ್ತು. ನಗರವೆಲ್ಲವೂ ನಿಶ್ಶಬ್ದವಾಗಿತ್ತು. ಪಹರೆಯವರು ಪಹರೆ ಕೊಡುತ್ತಿದ್ದರು. ವ್ಯಕ್ತಿಯೊಂದು ಗಾಢಾಂಧಕಾರದಲ್ಲಿ ಮೈದಾನದ ಆ ಬಂಡೆಗಲ್ಲಿನ ಸಮೀಪ ಬಂದು ಅದನ್ನು ಕಡೆಯಲಾರಂಭಿಸಿತು. ಪಹರೆಯವನು 'ಅದಾರೆಂದು ಗರ್ಜಿಸಲು ವ್ಯಕ್ತಿಯು 'ನನಗೆ ಉಪದ್ರವ ಕೊಡದಿರು ನೀನು ನಗರ ರಕ್ಷಕನಾದರೆ ನನಗೇನು? ನಾನೇನು ನಗರ ಭಕ್ಷಕನಾಗಿಲ್ಲ' ಎಂದಿತು.

ಮರು ದಿನ ನೋಡಿದಾಗ ಕಲ್ಲಿನ ಎರಡೂ ಬದಿಯೂ ಕಡೆಯಲ್ಪಟ್ಟಿತ್ತು. ಅಂದು ರಾತ್ರಿಯೂ ಅಂತೆಯೇ ಕೆಲಸ ನಡೆಯುತ್ತಿರಲು ವ್ಯಕ್ತಿಯನ್ನು ಕುರಿತು ನಗರ ಪಾಲಕನು 'ನೀನಾರು?' ಎಂದನು. 'ನಗರದ ಸ್ವರೂಪವನ್ನು ಕೆಡಿಸುವ ಈ ಬಂಡೆಯನ್ನು ಸುಂದರವನ್ನಾಗಿ ನಾನು ಮಾಡುತ್ತಿರುವೆನು. ನನ್ನ ಪರಿಚಯದಿಂದ ನಿನಗೇನಾಗಬೇಕು. ನನ್ನ ಕೆಲಸವನ್ನು ನಾನು ಮಾಡುವೆನು' ವ್ಯಕ್ತಿಯೆಂದಿತು. ನಗರ ಪಾಲಕನು ಮಹಾರಾಜನಿಗೆ ಈ ಸಮಾಚಾರವನ್ನು ತಿಳಿಸಿದನು. ವ್ಯಕ್ತಿಯ ಕೆಲಸಕ್ಕೆ ಯಾವುದೊಂದು ಹಾನಿಯನ್ನೂ ತರಬಾರದೆಂದು ರಾಜಾಜ್ಞೆ ಹೊರಟಿತು.

ಪ್ರತಿ ದಿನವೂ ರಾತ್ರಿ ವಸ್ತ್ರವನ್ನು ಮುಸುಕಿಟ್ಟುಕೊಂಡು ವ್ಯಕ್ತಿಯು ತನ್ನ ಕೆಲಸವನ್ನು ಪೂರೈಸಿ ಬಂಡೆಯನ್ನು ಚಾಪೆಯಿಂದ ಸುತ್ತಿ ಹೋಗುತ್ತಿತ್ತು. ಆ ಚಾಪೆಯ ಮೇಲೆ 'ಇದನ್ನಾರೂ ಮುಟ್ಟಕೂಡದು' ಎಂದು ಬರೆದಿತ್ತು. ಎಲ್ಲರೂ ಇದನ್ನು ಕಂಡು ಆಶ್ಚರ್ಯಚಕಿತರಾಗುತ್ತಿದ್ದರು.

ಅಮವಾಸ್ಯೆಯ ರಾತ್ರಿ. ಇದೇ ರಾತ್ರಿ ತನ್ನ ಕೆಲಸವನ್ನು ಪೂರೈಸಿ ವ್ಯಕ್ತಿಯು ನಗರ ರಕ್ಷಕನನ್ನು ಕುರಿತು-- 'ನನ್ನ ಕೆಲಸವಿಂದು ಪೂರೈಸಿತು. ನಾಳೆಯ ದಿನ ನಾಗರಿಕರೆಲ್ಲರ ಸಮಕ್ಷಮ ಇದನ್ನು ಮಹಾರಾಜರು ಅನಾವರಣ ಮಾಡುವಂತೆ ಅವರಿಗೆ ಸೂಚಿಸಿ ತಕ್ಕ ಏರ್ಪಾಡು ಮಾಡತಕ್ಕದ್ದು' ಎನ್ನುತ್ತ ಎಲ್ಲೋ ಮಾಯವಾಯಿತು. ಮರು ದಿನ ಈ ಸುದ್ದಿಯು ಮಿಂಚಿನಂತೆ ಹಬ್ಬಿತು. ನಾಲ್ಕೂ ದಿಕ್ಕಿನಿಂದ ಜನ ಸಮುದಾಯವು ಒಂದುಗೂಡಿತು. ಮಹಾರಾಜರು ಎಲ್ಲರ ಸಮಕ್ಷದಲ್ಲಿ ಅದನ್ನು ಅನಾವರಣ ಮಾಡಿದರು. ನೋಡುವುದೇನು! ಭವ್ಯವಾದ ಇಪ್ಪತ್ತೇಳು ಅಡಿ ಎತ್ತರದ ಕುಳಿತುಕೊಂಡಿರುವ ನರಸಿಂಹ ದೇವನ ವಿಶಾಲ ಮೂರ್ತಿಯು ಕಂಗೊಳಿಸಿತು. ಎಲ್ಲರೂ ಇದನ್ನು ನೋಡಿ ಅವಾಕ್ಕಾದರು. ಇದೀಗ ಈ ಸುಂದರ ಮೂರ್ತಿಯನ್ನು ನಿರ್ಮಿಸಿದವನನ್ನು ಗೊತ್ತುಹಚ್ಚುವುದು ಹೇಗೆ? ಮಹಾರಾಜನು ಈ ಅಜ್ಞಾತ ಶಿಲ್ಪಿಯನ್ನು ಗೊತ್ತುಹಚ್ಚಿದವರಿಗೆ ತಕ್ಕ ಬಹುಮಾನವನ್ನು ಕೊಡುವುದಾಗಿಯೂ ಕಲಾಕಾರನಿಗೆ ಒಂದು ಲಕ್ಷ ಸುವರ್ಣ ಮುದ್ರೆಯನ್ನು ಪುರಸ್ಕಾರ ಕೊಡುವುದಾಗಿಯೂ ಡಂಗುರ ಸಾರಿಸಿದನು. ಆದರೆ ಯಾರೂ ದೊರೆಯಲಿಲ್ಲ!

ಮಹಾರಾಜ ಭೀಮದೇವರಾಯನ ರಾಜ್ಯವು ವಿಸ್ತಾರವಾಗುತ್ತಲಿತ್ತು. ಮುಸಲ್ಮಾನ ಶಕ್ತಿಯ ವಿರುದ್ಧ ಆವನ ಅಧೀನದಲ್ಲಿ ಹಿಂದೂ ರಾಜ್ಯ ಘಟನೆಯಾಗುತ್ತಿತ್ತು. ಅದಕ್ಕೆ ತಕ್ಕಂತೆ ಆವನ ಸೇನೆ ಅಭಿವೃದ್ಧಿಗೊಳ್ಳುತ್ತಲಿತ್ತು. ಆದರಿಂದಾಗಿ ಸಾವಿರಾರು ಆನೆಗಳನ್ನು ಕಟ್ಟಲು ಬೇಕಾದ ಗಜಶಾಲೆಯ ಸಮಸ್ಯೆಯು ತಲೆದೋರಿತು. ಇದೇ ಹೊತ್ತಿಗೆ ಗುಡಿಪಾಲನು ಮಹಾರಾಜರ ಮುಂದೆ ಉಪಸ್ಥಿತನಾದನು. ಮತ್ತು 'ಮಹಾರಾಜ ನನಗೆ ಕೆಲಸ ಕೊಡಿರಿ, ಇಲ್ಲವೆ ನನ್ನನ್ನು ಇಲ್ಲಿಂದ ಬಿಡುಗಡೆ ಮಾಡಿರಿ. ತಂಜಾವೂರು ನಗರ ನಿರ್ಮಾಣ ಕಾರ್ಯವು ಆಗುತ್ತಿರುವುದು. ನನಗಲ್ಲಿ ಹೋಗಬೇಕಾಗಿದೆ' ಎಂದನು.

'ಗಜಶಾಲೆಯನ್ನು ನಿರ್ಮಿಸಬಲ್ಲೆಯಾ'?

'ಏನಡ್ಡಿ. ಆದರೆ ಅದರ ಸ್ಥಾನವನ್ನು ನಾನೇ ಆರಿಸತಕ್ಕದ್ದು.'

'ಸರಿ ನಿನ್ನ ಕೆಲಸಕ್ಕೆ ಬೇಕಾದ ಸಾಮಗ್ರಿಗಳನ್ನು ಮಂತ್ರಿಗಳಿಂದ ಸ್ವೀಕರಿಸುವುದು. ಆದರೆ ನಿರ್ಮಾಣ ಕಾರ್ಯವು ಸುಂದರವಾಗತಕ್ಕದ್ದು. ಆಗ ನಿನ್ನ ಪರೀಕ್ಷೆಯಾಗತಕ್ಕದ್ದಿದೆ'.

ಗಜಶಾಲೆಯಂಥ ಸಾಧಾರಣ ಕೆಲಸದಿಂದ ನನ್ನ ಕಲೆಯ ಅಭಿವ್ಯಕ್ತಿಯಾಗುವುದೇ? ಆಗಲಿ.'

ಕೆಲಸವು ಪ್ರಾರಂಭವಾಯಿತು. ರಾಜಭವನ ಮತ್ತು ತುಂಗಭದ್ರಾನದಿಯ ಮಧ್ಯಸ್ಥಾನವು ಇದಕ್ಕಾಗಿ ಆರಿಸಲ್ಪಟ್ಟಿತು. ಆ ಸ್ಥಳದಲ್ಲಿ ಕೆಲಸ ಮಾಡುವವರು ವಿನಾ ಬೇರೆ ಯಾರೂ ಬಾರದಂತೆ ಗುಡಿಪಾಲನ ಆದೇಶವು ಹೊರಟಿತು. ವರ್ಷಗಳು ದಾಟಿದವು. ಗುಡಿಪಾಲನು ಗಜಶಾಲೆಯ ನಿರ್ಮಾಣ ಕೌಶಲವನ್ನು ಕಾಣುವುದಕ್ಕೆ ರಾಜನಿಗೆ ಆಮಂತ್ರಣವನ್ನಿತ್ತನು.

ಮಹಾರಾಜನು ಪರಿವಾರಸಮೇತನಾಗಿ ಬಂದನು. ಅವನ ಸಂಗಡ ರಾಜಕುಮಾರಿ ದೇವಸೇನೆಯೂ ಬಂದಿದ್ದಳು. ಗಜಶಾಲೆಯನ್ನು ಕಂಡು ಎಲ್ಲರೂ ಆಶ್ಚರ್ಯಮಗ್ನರಾದರು. ಅದನ್ನು ಎಲ್ಲರೂ ರಾಜ ಸಭೆಯೆಂದೇ ಭ್ರಮಿಸಿದರು. ವಿಶಾಲವಾದ ಆ ಗಜಶಾಲೆಯಲ್ಲಿ ಮೂರುಕಡೆ ಆನೆಯನ್ನು ಕಟ್ಟುವ ಸ್ಥಳಗಳಿದ್ದುವು. ಪ್ರತ್ಯೇಕ ಸ್ತಂಭವು ಇಪ್ಪತ್ತು ಅಡಿ ಎತ್ತರವಾಗಿದ್ದು ವಿಶಾಲಕಾಯವಾದ ಆನೆಯ ಮಸ್ತಕವನ್ನು ಕಡಿದಿಟ್ಟಂತಿತ್ತು. ಮಸ್ತಕದಿಂದ ಸೊಂಡಿಲು ಮೇಲಕ್ಕಿದ್ದು ಅದರ ಮೇಲೆ ಕಟ್ಟಡದ ಮೇಲ್ಭಾಗವು ನಿಂತಿತ್ತು. ಆನೆಯ ದಂತವೇ ಆಲಾನಸ್ತಂಭವಾಗಿತ್ತು.

ಮಹಾರಾಜನು ಗುಡಿಪಾಲನ ಕರಕೌಶಲ್ಯವನ್ನು ಕಂಡು ಮುಗ್ಧನಾದನು. ಗುಡಿಪಾಲನು ದೇವಸೇನೆಯ ಅನಿಂದ್ಯ ಸೌಂದರ್ಯವನ್ನು ಕಂಡು ಮೋಹಭರಿತನಾದನು. ದೇವಸೇನೆಯು ಒಂದೊಮ್ಮೆ ಗಜಶಾಲೆಯ ನೈಪುಣ್ಯವನ್ನೂ ಮತ್ತೊಮ್ಮೆ ಗುಡಿಪಾಲನ ಉದ್ಘಟಿತನವನ್ನೂ ನೋಡುತ್ತಿದ್ದಳು.

ಮಹಾರಾಜನು ಶಿಲ್ಪಿಯನ್ನು ಕುರಿತು-- 'ಶಿಲ್ಪಿ! ನೀನು ಧನ್ಯನಿರುವಿ' ನಿನ್ನ ಕಲೆಯಿಂದು ಸಫಲವಾಯಿತು. ಆ ನೃಸಿಂಹ ಮೂರ್ತಿಯನ್ನು ಕಡೆದ ಕಲಾವಿದನೊಬ್ಬ ಈ ಭವನವನ್ನು ನಿರ್ಮಿಸಿದ ನೀನೊಬ್ಬ. ನೀವಿಬ್ಬರೇ ಈ ನಗರ ನಿರ್ಮಾಣ ಕಾರ್ಯವನ್ನು ನಿರ್ವಹಿಸಬಲ್ಲಿರಿ!, ಗುಡಿಪಾಲನು ನತಮಸ್ತಕನಾಗಿ ನಸುನಗುತ್ತಾ 'ಆ ಮೂರ್ತಿಯೂ ನನ್ನಿಂದಲೇ ಮಾಡಲ್ಪಟ್ಟಿತು ಮಹಾರಾಜ' ಎಂದನು.

'ನಿನ್ನಿಂದ ಹಾಗಾದರೆ ಆದರೆ ಪುರಸ್ಕಾರ ಆ ಲಕ್ಷ ಸುವರ್ಣ ಮುದ್ರೆಯನ್ನೇಕೆ ಸ್ವೀಕರಿಸಿಲ್ಲ!

'ನಾನು ಸುವರ್ಣಲೋಲುಪನಾಗಿಲ್ಲ ಮಹಾರಾಜ. ನಾನು ಕಲಾಕಾರನಾಗಿರುವೆ. ಸೌಂದರ್ಯೋಪಾಸಕನಿರುವೆ.'

'ಹಾಗಿದ್ದರೆ ನಿನ್ನನ್ನು ಯಾವ ರೀತಿ ಪುರಸ್ಕರಿಸಲಿ' ಗುಡಿಪಾಲನು ಮೌನವಾಗಿದ್ದನು. ಆದರೆ ಅವನ ದೃಷ್ಟಿಯು ದೇವಸೇನೆಯ ಮೇಲಿತ್ತು. ಮಹಾರಾಜನು ಇವನ ಅಂಗಿತವನ್ನರಿತು ಕೋಪಾರುಣನೇತ್ರನಾಗಿ--

'ಆದರೆ ಶಿಲ್ಪಿ! ನೀನು ಅಜ್ಞಾತಕುಲಶೀಲನಿರುವಿ'

'ಹತ್ತು ವರ್ಷಗಳ ಮೊದಲು ನಾನು ಕೂಡ ಅಜ್ಞಾತನಾಗಿದ್ದಿರಿ ಮಹಾರಾಜ'

'ಆದರೆ ಅಜ್ಞಾತಕುಲನಾಗಿದ್ದಿಲ್ಲ'

'ನಾನು ಕೂಡ ಅಜ್ಞಾತಕುಲನಾಗಿಲ್ಲ ಮಹಾರಾಜ. ವನವಾಸೀ ರಾಜವಂಶದಲ್ಲಿ ಜನ್ಮವೆತ್ತಿರುವೆನು.'

ಮಹಾರಾಜನು ಬೆಚ್ಚಿಬಿದ್ದನು! 'ವನವಾಸೀ ರಾಜವಂಶ! ಪೃಥ್ವೀವಲ್ಲಭವಂಶ!! ಆದರೆ ಈ ಆಕೃತಿ' ಎನ್ನುತ್ತಾ ದೇವಸೇನೆಯನ್ನು ನೋಡಿದನು. ದೇವಸೇನೆಯು-- ಉದ್ಧತ ಶಿಲ್ಪಿಯೇ! ನೀನು ಸೌಂದರ್ಯೋಪಾಸಕನಿರಬಹುದು. ಆದರೆ ನಾನು ಮಾತ್ರ ಅಸೌಂದರ್ಯೋಪಾಸಿಕೆಯಾಗಿರುವೆನೆಂದು ಭಾವಿಸಿರುವೆಯಾ!' ಎಂದಳು.

ಶಿಲ್ಪಿಯು ತಲೆತಗ್ಗಿಸಿದನು. ಕ್ಷಣಹೊತ್ತು ಮೌನನಾಗಿದ್ದು ಆ ಮೇಲೆ ಮಹಾರಾಜನನ್ನು ಕುರಿತು-'ಹಾಗಾದರೆ ಪುರಸ್ಕಾರರೂಪವಾಗಿ ನನಗೊಂದು ಕೆಲಸವನ್ನು ಮಾಡಗೊಡುವಿರಾ!'

'ಏನದು'

ರಾಜಕುವರಿ ದೇವಸೇನೆ ಮತ್ತು ಆವಳ ಸಖಿಯರಿಗೋಸ್ಕರ ಒಂದು ನಾಟ್ಯ ಮಂದಿರವನ್ನು ತಯಾರಿಸಲು ಆಜ್ಞೆಯನ್ನು ಕೊಡುವದು.

'ಅಂತೆಯೇ ಆಗಲಿ'

ಮುಂಚಿನ ಶರ್ತದಂತೆಯೇ ನಾಟ್ಯ ಮಂದಿರದ ನಿರ್ಮಾಣವು ಭರದಿಂದ ಸಾಗಿತು. ಅನೇಕ ಮಾಸಗಳು ಕಳೆದವು. ಅದೊಂದು ದಿನ ಪಹರೆಯವನೊಬ್ಬನು ಬಂದು ಮಹಾರಾಜನನ್ನು 'ಸ್ವಾಮಿ ನಾಟ್ಯ ಮಂದಿರದ ದ್ವಾರವು ತೆರೆದಿರುವುದು. ಆದರೆ ಕೂಗಿದಾಗ ಯಾರೂ ಉತ್ತರವಿತ್ತಿಲ್ಲ' ಎಂದನು.

ದೇವಸೇನೆಯು ಉತ್ಸಾಹದಿಂದ ಸಖಿಯರೊಂದಿಗೆ ಬಂದು ಮಂದಿರವನ್ನು ಪ್ರವೇಶಿಸಿದಳು. ಮಂದಿರದ್ವಾರದಲ್ಲಿ ದ್ವಾರಪಾಲಕನಂತೆ ಶಿಲ್ಪಿಯ ಸಜೀವ ಪ್ರತಿಮೆಯು ನಿಲ್ಲಿಸಲ್ಪಟ್ಟಿತ್ತು. ಒಳಹೊಕ್ಕ ದೇವಸೇನೆಯು ಸಮಸ್ತ ರಾಗ ಮತ್ತು ರಾಗಿಣಿ, ನಾಟ್ಯ ಮುದ್ರೆಗಳ ಚಿತ್ರಗಳು, ಮತ್ತು ಎಲ್ಲಾ ಭಂಗಿಗಳಲ್ಲಿಯೂ ತನ್ನ ರೂಪವನ್ನೇ ಕಂಡಳು. ಅದಲ್ಲದೆ ಚಿತ್ರಿತ ಶಿಲಾಖಂಡವೊಂದರಲ್ಲಿ ಲಿಖಿತವೊಂದನ್ನು ಕಂಡಳು--"ಸೌಂದರ್ಯೋಪಾಸಕನ ಕಡೆಯಿಂದ ಅನಿಂದ್ಯಸುಂದರಿ ದೇವಸೇನೆಯ ಉಪಾಸನಾ ಸ್ವರೂಪ. . . . "

ಶಿಲ್ಪಿಯು ಮಾತ್ರ ದೃಷ್ಟಿಗೋಚರನಾಗಲಿಲ್ಲ.

ಇಂದು ಆ ಕರ್ನಾಟಕ ಸಾಮ್ರಾಜ್ಯವಾದ ವಿಜಯನಗರವು ಹಾಳುಬಿದ್ದಿರುವದು. ವೈರಿಗಳ ಕೈಯ್ಯಲ್ಲಿ ಸಿಕ್ಕಿ ಗುಡಿಪಾಲ ನಿರ್ಮಿತ ನೃಸಿಂಹ ಮೂರ್ತಿಯು ತಲೆಯೊಡೆದು ಬಿದ್ದಿರುವದು. ಗಜಶಾಲೆ ಮತ್ತು ನಾಟ್ಯ ಮಂದಿರವು ಇಂದೂ ಅಂತೆಯೇ ಇರುವುದು. ಆದರೆ ಈ ಕರುಣಾಜನಕ ದೃಶ್ಯಗಳಲ್ಲಿ ಹುದುಗಿಕೊಂಡಿರುವ ತತ್ವ--ಪವಿತ್ರ ಪ್ರೇಮ. ಪ್ರೇಮ ಹೆಚ್ಚೋ ಸೌಂದರ್ಯಹೆಚ್ಚೋ? ದೇವಸೇನೆಯ ಸೌಂದರ್ಯ ಅನಿಂದ್ಯವೋ? ಕಲೆಗಾರನ ಪವಿತ್ರ ಪ್ರೇಮವೋ?

Reg No. B. 3148

LICENCE No. 3
Licensed to Post without Prepayment

KARMAVEER 14-6-48

ಪುಸ್ತಕ ಪರಿಚಯ

(ನಮಗೆ ಬಂದ ಎಲ್ಲ ಪುಸ್ತಕಗಳನ್ನು ಸಾದರದಿಂದ ಸ್ವೀಕರಿಸಿದ ಉಲ್ಲೇಖ ಮಾಡುವೆವಾದರೂ ಆ ಎಲ್ಲವುಗಳ ವಿಮರ್ಶೆ ಮಾಡಿಯೇ ತೀರುವೆವೆಂದು ಗ್ರಹಿಸಕೂಡದಾಗಿ ಈ ಮೂಲಕ ತಿಳಿಸಬಯಸುತ್ತೇವೆ. —ಸಂ.)

ಉತ್ಕಲಾ

ಬರೆದವರು ಶ್ರೀ. ''ಪರಿಜಾತ,'' ಪ್ರಕಾಶಕರು, ಸಂಜೀವಿನಿ ಪ್ರಕಾಶನ, ಹುಬ್ಬಳ್ಳಿ. ಪುಟ ೩೦೩, ಬೆಲೆ ರೂ. ೪.

'ಉತ್ಕಲಾ' ಎಂಬುದೊಂದು ಸ್ವತಂತ್ರ ಸಾಮಾಜಿಕ ಕಾದಂಬರಿ ಎಂದು ಪ್ರಕಟವಾಗಿದೆ. ಕಥಾ ವಿವರಗಳನ್ನು ಅವಲೋಕಿಸಿದರೆ ಉತ್ಕಲೆಗೆ ಕಥಾನಾಯಿಕೆಯ ಸ್ಥಾನ ಸಿಗಲಾರದು; ಸಿಕ್ಕಿಲ್ಲ. ಆದರೆ ಕಥಾ ನಾಯಕನ ಬಾಳಕಳಸಿನ ಮೂರ್ತ ಸ್ವರೂಪವೆನಿಸಿ ಜೀವನದಲ್ಲಿ ಮಿಂಚಿ ಮಾಯವಾದ ಆ ಜೀವ ಅವನ ಬಾಳಿನ ಇತಿಹಾಸವೆ ಅನ್ಯಮಾರ್ಗವನ್ನು ಹಿಡಿವಂತೆ ಮಾಡಿತು. ಈ ಕಾರಣದಿಂದಲೇ ಬಹುಶಃ ಗ್ರಂಥಕರ್ತರಾದ ''ಪರಿಜಾತ'' ರು ಕಾದಂಬರಿಗೆ ''ಉತ್ಕಲಾ'' ಎಂಬ ಹೆಸರನ್ನು ಕೊಟ್ಟಿರಬಹುದೆಂದು ತೋರುತ್ತದೆ.

ಸಾಮಾನ್ಯ ಮಧ್ಯಮ ವರ್ಗದ ಕುಟುಂಬದ ಜೀವನ ಚಿತ್ರವನ್ನು ಈ ಕಾದಂಬರಿಯಲ್ಲಿ ಬಿಡಿಸಲಾಗಿದೆ. ನಾಯಕನಾದ ವೆಂಕಣ್ಣನು ಆಧುನಿಕನೂ ವಿಚಾರಶೀಲನೂ ವ್ಯವಹಾರಜ್ಞನೂ ಎನಿಸಿ, ಜಗತ್ತಿನ ಕ್ರಾಂತಿಗಳಿಗೆ ಬೀಜ ಬಿತ್ತುವದು ಮಧ್ಯಮ ವರ್ಗದವರೇ ಎಂಬ ಮಾತಿಗೆ ನಿದರ್ಶನವಾಗಿ ನಿಲ್ಲಬಲ್ಲ ಸ್ವಭಾವವುಳ್ಳವನು; ಅಂಥ ದೌರ್ಬಲ್ಯ ಮತ್ತು ಸಾಮರ್ಥ್ಯಗಳು ಅವನ ವ್ಯಕ್ತಿತ್ವವನ್ನು ರೂಪಿಸಿವೆ. ಅವನ ಪಾತ್ರದರ್ಶನವನ್ನು ಕಂಡರೆ ಗ್ರಂಥಕರ್ತರು ಪುಸ್ತಕದ ಜ್ಞಾನಕ್ಕಿಂತ ಸ್ವಾನುಭವಕ್ಕೇ ಹೆಚ್ಚು ಮಹತ್ವ ಕೊಡುವರು ಎಂದು ಹೇಳಿಬಿಡಬಹುದು. ಕಥಾನಾಯಿಕೆಯ ಪಾತ್ರವಾದರೂ ಸಹಜವಾಗಿ ಚಿತ್ರಿತವಾಗಿದೆ. ಲೈಂಗಿಕ ಕೊಡುಕೊಳ್ಳುವುದನ್ನು ಅವರಿಬ್ಬರ ನಡುವೆ ತಂದು ಹಾಕಿದ್ದು ಯಾವ ಉದ್ದೇಶದಿಂದ ಎಂಬುದು ಸ್ಪಷ್ಟವಾಗುವದಿಲ್ಲ. ಆದರೆ ಅದರಿಂದ ಒಂದು ಉದ್ದೇಶ ಸಫಲವಾಗಿದೆ. ತಪ್ಪು ಮಾಡಿ ಪಶ್ಚಾತ್ತಾಪ ಮತ್ತು ಕರುಣಗಳನ್ನು ತಾಳುವ ಕಥಾನಾಯಕನು ಅಪರಾಧವನ್ನು ಕ್ಷಮಿಸಲು ದೈಹಿಕವಾಗಿ ಅಸಮರ್ಥಳಿದ್ದರೂ ಮಾನಸಿಕವಾಗಿಯೂ ಅಸಮರ್ಥಳೆಂದು ತೋರುವ ನಾಯಿಕೆಗಿಂತ ಕೆಲವಂಶದಲ್ಲಿ ಹೆಚ್ಚು ನಾಗರಿಕನೆಂದು ಭಾಸವಾಗುತ್ತದೆ.

ನಿರಾಡಂಬರ ಶೈಲಿ, ನಿರರ್ಗಳವಾಕ್ ಪ್ರವಾಹ, ಸೂಕ್ಷ್ಮಶೋಧಕ ವೃತ್ತಿಯ ಸ್ವಭಾವ ನಿರೂಪಣ ಇವು ಕಾದಂಬರಿಯ ಸೌಂದರ್ಯಕ್ಕೆ ಕುಂದಣವಿಟ್ಟಂತಿವೆ. ಅಲ್ಲಲ್ಲಿ ಅರ್ಥದೋಷ ಶಬ್ದದೋಷಗಳು ಕೆಲವೊಮ್ಮೆ ಕಂಡುಬರುವಂತಿದ್ದರೂ ರಸಲೀನವಾದವರಿಗೆ ಅವು ಗೋಚರಿಸಲಾರವು. ಅದ ಕಾರಣ, ಶ್ರೀ. ''ಪರಿಜಾತ''ರ ಪ್ರಯತ್ನ ಪ್ರಗತಿಶೀಲವಾಗಿದೆ ಎಂದು ಧಾರಾಳವಾಗಿ ಹೇಳಬಹುದು.

ಬಾಳ ಕನಸು

ಬರೆದವರು ಶ್ರೀ. ಕೃಷ್ಣಮೂರ್ತಿ ಪುರಾಣಿಕರು ಪ್ರಕಾಶಕರು ಶ್ರೀ. ಆರ್. ಎ. ಜಾಗಿರದಾರ, ಎಂ. ಎ. ಧಾರವಾಡ, ಪುಟ ೬೯, ಬೆಲೆ ರೂ. ೧||.

''ಬಾಳಕನಸು'' ಒಂದು ಕವನ ಸಂಗ್ರಹ. ಈ ಕವನಗಳನ್ನು ಕಳೆದ ೧೦—೧೨ ವರ್ಷಗಳಲ್ಲಿ ಬರೆದವೆಂದು ಅರಿಕೆ ಮಾಡಿಕೊಳ್ಳಲಾಗಿದೆ. ಪುಸ್ತಕದಲ್ಲಿಯ ೩೨ ಕವನಗಳಲ್ಲಿ 'ಗಿರಿಯುವೆಂಕಟಾ' 'ಬಸವಿ' 'ಅವತಾರ' 'ನಾಯಕಿತಿ ಭೂತಾಯಿ' 'ಗಾಂಧೀಜಿ' 'ಚಿನ್ನ' 'ನವಭಾರತದ ಅರುಣೋದಯ' ಎಂಬ ಕವನಗಳು ಚೆನ್ನಾಗಿವೆ 'ಜಗಂದ್ಭುಳ್ಳು' ಎಂಬ ದೊಂದು ವಿಲಕ್ಷಣ ಭಾವದ ಕವನ. 'ಕಳವುಳ'ದಲ್ಲಿ ಶ್ರೀ. ಬೇಂದ್ರೆಯವರ 'ಕಾಳಿಯ ಪೂಜೆ'ಯ ಛಾಯೆಯಿದೆ. 'ಕಡುಕೆಯ ಕಾಲಿಂದ ಚಿನ್ನ ತಾರ' ಎಂಬುದರಲ್ಲಿ ಹೀನೋಪಮೆ ಬಳಸಿದೆ. 'ಮುಗುಳನ್ನು ಕೆರಳುತರಲು', 'ಹೊಸದ ಸೃಷ್ಟಿ', 'ದಾಸ್ಯಸ್ತ', 'ಕೊಳ್ಳಿಯ ಕೊಟ್ಟು' 'ಹೊಸದಾತ' ಎಂಬ ಪದ ಪ್ರಯೋಗಗಳು ಧೀಮಂತರಿಗೆ ಉದ್ವೇಗ ಹುಟ್ಟಿಸು

ವಂಥವು. ಒಟ್ಟಿನ ಮೇಲೆ ಗುಣ ಬಲ ಹೆಚ್ಚೆಂದು ಹೇಳಬಹುದು. ಕನ್ನಡ ರಸಿಕರು ಓದಿ ಆನಂದಿಸುವರೆಂದು ಹಾರೈಕೆ.

Historical Grammar of old Kannada

ಬರೆದವರು ಶ್ರೀ. ಗೋವಿಂದ ಸ್ವಾಮಿ ರಾವ್ ಗೈ ವಿ. ಎಚ್. ಡಿ. ಪ್ರಕಾಶಕರು ಡಾ. ಎಸ್ ಎಂ. ಕತ್ರೆ, ಡೆಕ್ಕನ್ ಕಾಲೇಜ ಸಂಶೋಧನ ಸಂಸ್ಥೆ, ಪುಣೆ, ಪುಟ ೨೩೧. ಬೆಲೆ ರೂ ೧೫.

ಮೈಸೂರು ಮಹಾರಾಜರ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಾದ ಡಾ. ಏ. ಎನ್ ನರಸಿಂಹಯ್ಯನವರು ಕ್ರಿಸ್ತಶಕ ೬, ೭ ಶತಕಗಳ ಅತಿ ಪ್ರಾಚೀನ ಕನ್ನಡ ಶಾಸನಗಳ ಆಧಾರದಿಂದ ಒಂದು ಹಳಗನ್ನಡ ವ್ಯಾಕರಣವನ್ನು ಬರೆದಿದ್ದಾರೆ. ಅದೇ ಮಾರ್ಗದಲ್ಲಿ ಶ್ರೀ. ಗೋವಿಂದಸ್ವಾಮಿಯವರು ಮೇಲಿನ ಗ್ರಂಥದಲ್ಲಿ ೮, ೯, ೧೦ ನೆಯ ಶತಕಗಳ ಶಾಸನಗಳನ್ನು ಅಭ್ಯಸಿಸಿ ಅವುಗಳಲ್ಲಿಯ ಭಾಷಾಲಕ್ಷಣಗಳನ್ನು ಗ್ರಹಿಸಿ ಡಾ. ನರಸಿಂಹಯ್ಯನವರ ಕಾರ್ಯವನ್ನು ಮುಂಬರಿಸಿದ್ದಾರೆಂದು ಹೇಳಬಹುದು.

ಪುಸ್ತಕದಲ್ಲಿ ೧೯೯ ಶಾಸನಗಳ ಉಲ್ಲೇಖವಿದೆ. ಅವುಗಳನ್ನು Epigraphia Carnatic ದಂತಹ ಹಲವಾರು ಪ್ರಕಟಿತ ಪುಸ್ತಕಗಳಿಂದ ಆಯ್ದುಕೊಳ್ಳಲಾಗಿದೆ. ಹಳಗನ್ನಡದ ಧ್ವನಿಲಕ್ಷಣ, ರೂಪಸಿದ್ಧಿಯ ವಿಚಾರ ಇವುಗಳನ್ನು ಶಾಸನಗಳಿಂದ ಉದಾಹರಿಸಲಾಗಿದೆ. ಇತಿಹಾಸ ಮತ್ತು ಭಾಷಾಶಾಸ್ತ್ರಗಳ ದೃಷ್ಟಿಯಿಂದ ಈ ಕಾರ್ಯಕ್ಕೆ ಬಹಳ ಮಹತ್ವವಿದೆ. ಗ್ರಂಥಕರ್ತರು ಹೆಚ್ಚು ಪರಿಶ್ರಮಪಟ್ಟು ಈ ರೀತಿ ಮುಂದಿನ ಸಂಶೋಧಕರಿಗೆ ಘನವಾದ ದಾರಿ ಹಾಕಿಕೊಟ್ಟಿರುವುದು ಶ್ಲಾಘನೀಯವಾಗಿದೆ. ಹಳ ರೂಪಗಳ ಸಿದ್ಧಿಯನ್ನೂ ಅವುಗಳ ಅರ್ಥವನ್ನೂ ಬಹಳ ವೈಜ್ಞಾನಿಕವಾಗಿ ಕೊಟ್ಟಿರುವುದು ಪುಸ್ತಕದ ತೂಕವನ್ನು ಹೆಚ್ಚಿಸಿದೆ. ಕನ್ನಡದ ವಿಷಯವಾಗಿ ಇರುವ ಸಂಶೋಧನಾತ್ಮಕ ಗ್ರಂಥಗಳ ಕೊರತೆಯನ್ನು ನೀಗಿಸಲು ಈ ಗ್ರಂಥವು ಪ್ರಯತ್ನಿಸಿದೆ. ಇಂಥ ಸತ್ಪ್ರಯತ್ನಕ್ಕೆ ಸರ್ವತ್ರ ಪ್ರೋತ್ಸಾಹ ದೊರೆಯಬೇಕಾದುದು ಸಾಂಸ್ಕೃತಿಕ ಬೆಳವಣಿಗೆಯ ದೃಷ್ಟಿಯಿಂದ ಅತ್ಯವಶ್ಯವೆಂದು ಹೇಳದಿರಲಾರೆವು.

ಸಾದರಸ್ವೀಕಾರ

ಪೌರವಾಣಿ (ವಿಶೇಷ ಸಂಚಿಕೆ ೧೯೪೮)

ಸಂಪಾದಕರು, ಹೆಚ್. ಎಸ್. ದೊರೆಸ್ವಾಮಿ. ಸಹ ಸಂಪಾದಕ ಎಚ್, ಎಸ್. ಶಾಸ್ತ್ರಿ ಪೌರ ಜವಾ ಪ್ರೆಸ, ಬೆಂಗಳೂರ ಸಿಟಿ. ಪುಟಗಳು ೧೦೦ ಬೆಲೆ ೮ ಆಣೆ

ಮಕ್ಕಳ ಮುತ್ತುಗಳು

(ಕವಿತಾಸಂಗ್ರಹ)

ಪ್ರಕಾಶಕರು ಮತ್ತು ಲೇಖಕರು, ಎಂ. ಬಿ. ಶಿವರಾಯ, ಪೆರಾಜೆ (ಕೊಡಗು) ಪೋಸ್ಟ ಅರಂತೋಡು. ದ- ಕನ್ನಡ. ಪುಟಗಳು ೩೨ ಬೆಲೆ ೬ ಆಣೆ.

ನಾಲ್ಕು ಸಣ್ಣ ಕಥೆಗಳು

ಲೇಖಕರು, ಎಂ. ಗೋವಿಂದರೆಡ್ಡಿ ಚಿತ್ರದುರ್ಗ ಮುದ್ರಕರು, ವಿ. ರಾಮಕೃಷ್ಣ ಅ್ಯಂಡ ಕೋ. ೫೫೪ ಈಸ್ಟ ರೋಡ, ವಿಶ್ವೇಶ್ವರಪುರ ಬೆಂಗಳೂರು ನಗರ ಪುಟಗಳು, ೪೦, ಬೆಲೆ ೮ ಆಣೆ.

ರೈತರ ಹುಡುಗಿ

ಲೇಖಕರು, ಎಂ. ಗೋಪಾಲಕೃಷ್ಣ ಅಡಿಗ. ಪ್ರಕಾಶಕರು, ವಿಶ್ವಸಾಹಿತ್ಯ ಮೈಸೂರು ಪುಟಗಳು ೧೧೭ ಬೆಲೆ ಸಾದಾಪ್ರತಿ ೧ ರೂ. ಸ್ಪಾರಿ ಪ್ರತಿ ೨ ರೂ. ೪ ಆ.

ವಾರದ ಭವಿಷ್ಯ

(೨ನೇ ಪುಟದಿಂದ)

ವಾಸ ಮತ್ತು ಮನಸ್ಸಿಗೆ ಹುರುಪು ಬರುವಂಥ ಅನೇಕ ಸಂಗತಿಗಳು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ ಮತ್ತು ಯೋಜಿಸಿದ ಕೆಲಸದಲ್ಲಿ ವೆಚ್ಚದ ವಿನಿಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ದಿನ ದಿನಕ್ಕೆ ಅನುಕೂಲತೆ ಪ್ರವಾಸಾದಿ ಕೆಲಸ ಹಿತದ್ದು ಪೂರ್ವಾಕ್ಕೆ ಹೆಚ್ಚು ತೊಂದರ ತಾ. ೧೪, ೧೫, ೧೬, ೧೭ ಅನುಕೂಲ.

ಕನ್ಯಾ

ಎಲ್ಲರ ಪ್ರಕೃತಿ ಉತ್ತಮ. ಆದರೆ ನಿಮ್ಮ ನಿಮ್ಮಲ್ಲಿ ಕ್ಷುಲ್ಲಕ ಸಂಗತಿಗಳ ವಿಷಯದಲ್ಲಿಯೂ ಕೂಡಿ ನಡೆಯುವದಾಗದ್ದರಿಂದ ಪ್ರಾಪಂಚಿಕ ಸುಖದ ಬಗ್ಗೆ ಎಲ್ಲರೂ ಉದಾಸೀನರಾಗುವರು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆಯೂ ಉತ್ತಮ ಲಾಭವೂ ಅಂದಾಜಿನಷ್ಟು ಆದರೆ ವೆಚ್ಚ ಮಾತ್ರ ಮಿತಿಮೀರಿದ್ದು ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ನೆರೆಯವರೊಡನೆ ಶತ್ರುತ್ವ ಸರಕಾರೀ ಕೆಲಸದಲ್ಲಿ ಯಶಸ್ಸು. ಪ್ರವಾಸಾದಿ ಕೆಲಸ ಅನುಕೂಲ. ಹಸ್ತಾಕ್ಕೆ ತೊಂದರೆ ಕಡಮೆ. ತಾ. ೧೫, ೧೬, ೧೭, ೧೮ ಅನುಕೂಲ.

ತುಲಾ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಸ್ವಲ್ಪ ಕೆಡುವದು. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ ಉದ್ಯೋಗಗಳಲ್ಲಿ ಪ್ರಗತಿ ಮತ್ತು ತುಂಬಲಾಭ. ಆದರೆ ಪ್ರತಿಷ್ಠೆಯಲ್ಲಿ ಸ್ವಲ್ಪ ವಿಘ್ನಗಳನ್ನು ತರಬೇಕೆಂದು ಮತ್ಸರಿಗಳು ಪ್ರಯತ್ನಿಸುವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಪ್ರವಾಸಾದಿ ಕೆಲಸ ಹಿತದ್ದು. ಸ್ವಾತಿಗೆ ತೊಂದರೆ ಕಡಮೆ. ತಾ. ೧೪, ೧೭, ೧೮, ೧೯ ಅನುಕೂಲ.

ವೃಶ್ಚಿಕ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಮನಸ್ಸಿನಂತೆ ಆದರೆ ಪರಸ್ತ್ರೀ ಬಗ್ಗೆ ಕುಬುದ್ಧಿ, ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ಆದರೆ ಕೆಟ್ಟ ಕೆಲಸಗಳಲ್ಲಿ ಬಹಳ ವೆಚ್ಚ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೇ ಯಶಸ್ಸು. ಅಭಿಮಾನದ ಭರದಲ್ಲಿ ಮಾಸ್ಕರ ಅಪಮಾನವನ್ನು ಮಾಡುವದು. ಪ್ರವಾಸಾದಿ ಕೆಲಸ ಅಲ್ಪ ಸ್ವಲ್ಪ ತೊಂದರೆಯದು ಅನುರಾಧೆಗೆ ತೊಂದರೆ ಕಡಮೆ, ತಾ. ೧೪, ೧೫, ೧೭, ೧೯ ಅನುಕೂಲ.

ಧನು

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಮಕ್ಕಳಲ್ಲಿ ಕೆಲ ಜನರ ಬಹಳ ಉನ್ನತಿ ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಮಿತ್ರತ್ವದಲ್ಲಿ ಸ್ವಲ್ಪ ವಿರೋಧ. ದೇವ ಧರ್ಮಗಳ ಬಗ್ಗೆ ಅಶ್ರದ್ಧೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಪ್ರವಾಸಾದಿ ಕೆಲಸ ಹಿತದ್ದು. ಪೂರ್ವಾಷಾಢಕ್ಕೆ ತೊಂದರೆ ಕಡಮೆ. ತಾ. ೧೪, ೧೫, ೧೬, ೧೭ ಅನುಕೂಲ.

ಮಕರ

ಪ್ರಕೃತಿ ಸಾಧಾರಣ ಕೆಡುವದು ಮಕ್ಕಳ ಪ್ರಾಪಂಚಿಕ ತೊಂದರೆ ವಿಪರೀತ. ಆಪ್ತರು ಮತ್ತು ನೆರೆಯವರರಲ್ಲಿ ಮೇಲಿಂದ ಮೇಲೆ ಕಲಹದ ಪ್ರಸಂಗ. ಉದ್ಯೋಗದಲ್ಲಿ ಲಾಭ ಅನುಕೂಲ. ಆದರೆ ಪ್ರಗತಿ ಮತ್ತು ಪ್ರತಿಷ್ಠೆ ಅತ್ಯಂತ ಕಡಮೆ. ವಾಹನಗಳಿಂದ ಅಪಘಾತ ತೊಂದರ ಇಲ್ಲವೆ ಕಾಯದೆಯ ಸರಕಾರೀ ಪೇಚು ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಧುಮುಶ್ಚಕ್ರಿ. ಆದರೆ ತೀರ್ಪು ಅನಿರ್ಣೀತ. ಪ್ರವಾಸಾದಿ ಕೆಲಸ ತೊಂದರೆಯದು. ಶ್ರವಣಾಕ್ಕೆ ತೊಂದರೆ ಕಡಮೆ. ತಾ. ೧೬, ೧೭, ೧೮, ೧೯ ಅನುಕೂಲ.

ಕುಂಭ

ಪ್ರಕೃತಿ ಸಾಧಾರಣವೇ ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಅನಾಕೂಲ ಆಪ್ತರ ಮತ್ತು ಮಿತ್ರಸುಖ ಉತ್ತಮ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು ಮಿತ್ರರು ಮತ್ತು ಬಂಧುವರ್ಗದಲ್ಲಿ ಸತ್ಕಾರ ಸಭೆಯಲ್ಲಿ ಪ್ರತಿಷ್ಠೆ ದೂರದವರೆಗೆ ಪ್ರಸಿದ್ಧಿಗೆ ಬರುವಂಥ ಬೌದ್ಧಿಕ ಮತ್ತು ಪರೋಪಕಾರದ ಕೆಲಸಗಳು ಪ್ರವಾಸ ಬಹಳ ದೂರದ್ದೂ ಭೆಟ್ಟಿ ಮತ್ತು ಪತ್ರವ್ಯವಹಾರವೂ ಮನಸ್ಸಿನಂತೆ ಹೆಚ್ಚು ಅನಕೂಲ. ತಾ ೧೭—೧೮ ೧೯—೨೦ ಅನುಕೂಲ.

ಮೀನ

ಪ್ರಕೃತಿ ಬಹಳ ಉತ್ತಮ ಸ್ತ್ರೀ ಸುಖ ಬಹಳ ಅನುಕೂಲ ಆದರೆ ಮಕ್ಕಳಿಗೆ ಸ್ವಲ್ಪಕ್ಲೇಶ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ತೊಂದರೆಯದು ಆದರಲ್ಲಿಯ ಪ್ರತಿಯೊಬ್ಬರ ದೃಷ್ಟಿ ಪ್ರತ್ಯೇಕ ಪ್ರತ್ಯೇಕ, ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ ದೊಡ್ಡವರಲ್ಲಿ ಸತ್ಕಾರವಾಗುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವೆಚ್ಚ ಮತ್ತು ತೊಂದರೆ ಬಹಳ ಆದರೆ ಕೊನೆಗೆ ಬಹಳ ಅನುಕೂಲತೆ ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ ಉತ್ತರಾ ಭಾದ್ರಪದಕ್ಕೆ ತೊಂದರೆ ಕಡಮೆ. ತಾ ೧೬—೧೭ ೧೯—೨೦ ಅನುಕೂಲ.

ಶ್ರೀ ಕಟ್ಟಿಮನಿಯವರಿಗೆ ವಣಿಕ್ ಸಂಘದ ಬೆಂಬಲ

ಹುಬ್ಬಳ್ಳಿ— ಕರ್ನಾಟಕದ ಲೋಕಲ್ ಬೋರ್ಡುಗಳ ಮತದಾರ ಸಂಘದಿಂದ ಮುಂಬಯಿ ವಿಶ್ವವಿದ್ಯಾಲಯದ ಸಿನೇಟಿನ ಸದಸ್ಯತ್ವದ ಚುನಾವಣೆಗೆ ನಿಂತ ಶ್ರೀ ಎಚ್ ಎಫ್ ಕಟ್ಟಿಮನಿಯವರಿಗೆ ಬೆಂಬಲ ಕೊಡಬೇಕೆಂದು ಕರ್ನಾಟಕ ವಣಿಕ್ ಸಂಘದ ಸಮಿತಿಯು ತನ್ನ ಸದಸ್ಯರಿಗೂ ಹಾಗೂ ಕನ್ನಡಿಗರಿಗೂ ಬಿನ್ನವಿಸುತ್ತದೆಂದು ಸಂಘದ ಗೌರವ ಕಾರ್ಯದರ್ಶಿಗಳಾದ ಶ್ರೀ ಆರ್. ವಿ. ಶಿರೂರವರು ಪ್ರಕಟನೆ ಹೊರಡಿಸಿರುತ್ತಾರೆ.

ಹುಬ್ಬಳ್ಳಿಯ ವಾಣಿಜ್ಯ ಕಾಲೇಜ ಹಾಗೂ ಭೂಮರೆಡ್ಡಿ ಪೋಲಿಟೆಕ್ನಿಗಳ ಸಂಘಟಕರಾದ ಶ್ರೀ. ಕಟ್ಟೀಮನಿಯವರು ಕರ್ನಾಟಕದಲ್ಲಿ ಶಿಕ್ಷಣದ ಮುನ್ನಡೆಗೆ ಮೊದಲಿನಿಂದಲೂ ಶ್ರಮಿಸಿದ್ದಾರೆ, ಶ್ರಮಿಸುತಿದ್ದಾರೆ. ಆದ್ದರಿಂದ ಎಲ್ಲ ಲೋಕಲ್ ಬೋರ್ಡುಗಳು ಅವರನ್ನೇ ಅವಿರೋಧವಾಗಿ ಆರಿಸಬೇಕೆಂದು ಸಮಿತಿಯ ಬಿನ್ನಹವಿದೆಯೆಂದು ಅವರ ಪ್ರಕಟನೆಯಲ್ಲಿದೆ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ''ಲೋಕಶಿಕ್ಷಣ ಟ್ರಸ್ಟಿನ'' ಪರವಾಗಿ ಹ. ರಾ. ಪುರೋಹಿತರಿಂದ ಮುದ್ರಿಸಿ ಪ್ರಕಟವಾಯಿತು.